24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 116 | ನವದೆಹಲಿ | ಬೆಲೆ ₹10 | ಅಕ್ಟೋಬರ್, 20, 2026, ಗುರುವಾರ









ಸರ್ವರಿಗೂ ಆದರದ ಸುಸ್ವಾಗತ

## ಶ್ರೀ ವಿ. ಸೋಮಣ್ಣ

ರೈಲ್ವೆ ಹಾಗೂ ಜಲಶಕ್ತಿ ರಾಜ್ಯ ಸಚಿವ

ತುಮಕೂರು ಲೋಕಸಭಾ ಸದಸ್ಯರು, ರೈಲ್ವೆ ಹಾಗೂ ಜಲಶಕ್ತಿ ರಾಜ್ಯ ಸಚಿವ ಶ್ರೀ ಸೋಮಣ್ಣ ಅವರ ನೇತೃತ್ವದಲ್ಲಿ

ದಿನಾಂಕ 23-10-2026 ಶುಕ್ರವಾರ, ಬೆಳಗ್ಗೆ 9-30 ಗಂಟೆಗೆ

ಸ್ಥಳ: ನವದೆಹಲಿಯ ಸಂಸತ್ತಿನ ಪ್ರೇರಣಾ ಸ್ಥಳ

## ವೀರರಾಣಿ ಕಿತ್ತೂರು ಚನ್ನಮ್ಮನವರ ಜಯಂತಿ ಹಾಗೂ 202ನೇ ವಿಜಯೋತ್ಸವ ಕಾರ್ಯಕ್ರಮ

ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರಿಗೆ ಆಹ್ವಾನ

## ವೀರರಾಣಿ ಚನ್ನಮ್ಮ ಪುತ್ತಳಿಗೆ ಸ್ಪರ್ಶನಮನ

## ನಿತ್ಯ ಪಂಚಾಂಗ 22.10.2026 ಗುರುವಾರ



ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯಣ ಶರದ್ ಋತು, ಚಾಂದ್ರಮಾನ ಶ್ರಾವಣ-ಆಶ್ವಯುಜ ಮಾಸ

**ಆಶ್ವಯುಜ ಶುದ್ಧ, ಏಕಾದಶಿ, ಶತಭಿಷ ನಕ್ಷತ್ರ, ಸರ್ವತ್ರ/ಪಾಶಾಂಕುಶ ಏಕಾದಶಿ, ಶೃಂಗೇರಿ ಶರದಾಂಬ/ಚನ್ನಪಟ್ಟಣ ಕುಡಿಕೆಬೇವೂರು ರಥ, ಹರಪನಹಳ್ಳಿ ಕಾರಣಿಕೆ**

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | ಸ. 5.04– 6.33 | 12.00– 1.30 | 3.00– 4.00 |
| ಸೋಮ | ಬೆ. 7.20– 9.04 | 10.30–12.00 | 1.30– 3.00 |
| ಮಂಗಳ | ಮ. 3.25– 4.59 | 9.00–10.30 | 12.00– 1.30 |
| ಬುಧ | ಮ.12.16– 1.50 | 7.30– 9.00 | 10.30– 12.00 |
| ಗುರು | ಮ. 1.50– 3.29 | 6.00– 7.30 | 9.00– 10.30 |
| ಶುಕ್ರ | ಬೆ.10.42–12.16 | 3.00– 4.30 | 7.30– 9.00 |
| ಶನಿ | ಬೆ. 9.07–10.41 | 1.30– 3.00 | 6.00– 7.30 |

# ರೌಡಿಗಳನ್ನು ಮಟ್ಟಹಾಕಲು ವಿಶೇಷ ಪಡೆ: ಡಿ.ಕೆ.ಶಿವಕುಮಾರ್

**ಪ್ರಭಾವಿಗಳು, ಜನಸಾಮಾನ್ಯರನ್ನು ಒಂದೇರೀತಿ ಪರಿಗಣಿಸುವಂತೆ ಪೊಲೀಸರಿಗೆ ಸಲಹೆ**




**ಬೆಂಗಳೂರು, ಅ.21:** ಪೊಲೀಸರು ಪ್ರಭಾವಿಗಳು ಜನಸಾಮಾನ್ಯರು ಎಲ್ಲರನ್ನೂ ಒಂದೇ ರೀತಿ ಕಾಣಬೇಕು. ಸಂವಿಧಾನ ಹಾಗೂ ಕಾನೂನುಗಳ ಅನ್ವಯ ಕಾನೂನು ಸುವ್ಯವಸ್ಥೆ ಪೊಲೀಸರ ಆದ್ಯತೆಯಾಗಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ನಗರದ ಮೈಸೂರು ರಸ್ತೆಯ ಸಶಸ್ತ್ರ ಮೀಸಲು ಪಡೆಯ ಮುಖ್ಯ ಕಚೇರಿಯ ಮೈದಾನದಲ್ಲಿ ನಡೆದ ಪೊಲೀಸ್ ಸಂಸ್ಮರಣಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಬೆಂಗಳೂರಲ್ಲಿ ರೌಡಿಗಳನ್ನು ಮಟ್ಟಹಾಕಲು ವಿಶೇಷ ತಂಡ ರಚನೆಗೆ ಈಗಾಗಲೇ ಸೂಚನೆ ಕೊಡಲಾಗಿದೆ. ಶ್ರೀಸಾಮಾನ್ಯರಿಗೆ ನೆಮದಿಯ ವಾತಾವರಣ ನಿರ್ಮಾಣ ಮಾಡಬೇಕು. ಈ ನಿಟ್ಟಿನಲ್ಲಿ ಸರ್ಕಾರ ಎಲ್ಲ ರೀತಿಯ ನೆರವು ಹಾಗೂ ಸಹಕಾರ ನೀಡಲಿದೆ ಎಂದು ಹೇಳಿದರು.

ಬೆಂಗಳೂರಿನ ಪೊಲೀಸ್ ಆಯುಕ್ತಾಲಯವನ್ನು ಐದು ಆಯುಕ್ತಾಲಯವನ್ನಾಗಿ ವಿಭಜಿಸುತ್ತಿರುವುದಕ್ಕೆ ಪೊಲೀಸ್ ಅಧಿಕಾರಿಗಳಿಗೆ ಸಮಾಧಾನ ಇಲ್ಲ ಎಂಬ ವಿಷಯ ತಮಗೆ ತಿಳಿದಿದೆ. ಆದರೆ ನಗರದ ಜನಸಂಖ್ಯೆ ಹೆಚ್ಚಾಗಿರುವುದರಿಂದ ಆಡಳಿತಾತ್ಮಕ ಹಾಗೂ ಕಾರ್ಯನಿರ್ವಹಣೆಯ ಕಾರಣಕ್ಕೆ ಈ ನಿರ್ಧಾರ ಅನಿವಾರ್ಯವಾಗಿತ್ತು. ಸರ್ಕಾರ ಈಗಾಗಲೇ ನಿರ್ಧಾರ ತೆಗೆದುಕೊಂಡಿದೆ, ಅದನ್ನು ಪರಿಣಾಮಕಾರಿಯಾಗಿ ಜಾರಿ ಮಾಡಬೇಕು ಎಂದು ಅವರು ಸೂಚಿಸಿದರು. ಹುತಾತ್ಮ ಪೊಲೀಸರಿಗೆ ಗೌರವ ಸಲ್ಲಿಸುವುದಷ್ಟೇ ತಮ ಉದ್ದೇಶವಲ್ಲ, ಬದುಕನ್ನೇ ಸಮಾಜದ ರಕ್ಷಣೆಗಾಗಿ ಮುಡುಪಾಗಿಟ್ಟ ಮಹಾನ್ ಜೀವಗಳಿಗೆ ಕೃತಜ್ಞತೆ ಸಲ್ಲಿಸಲು ಬಂದಿದ್ದೇನೆ ಎಂದು ಹೇಳಿದರು.

ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ 7,900ಕ್ಕೂ ಅಧಿಕ ಹುದ್ದೆಗಳನ್ನು ಭರ್ತಿ ಮಾಡಲು ಹಂತಹಂತವಾಗಿ ಕ್ರಮ ಕೈಗೊಳ್ಳಲಾಗಿದೆ. ಪೊಲೀಸರ ವಸತಿಗೂ ಅನೇಕ ಕಾರ್ಯಕ್ರಮ ರೂಪಿಸಿ ಹಣ ಒದಗಿಸಲು ಬದ್ಧರಾಗಿದ್ದೇವೆ. ಈಗಾಗಲೇ ಪೊಲೀಸ್ ವಸತಿ ಯೋಜನೆಯಡಿ ಸಾಕಷ್ಟು ಮನೆಗಳನ್ನು ನಿರ್ಮಿಸಲಾಗಿದೆ. ಅದೇ ರೀತಿ ಹೊಸ ವಾಹನಗಳ ಖರೀದಿ, ತಂತ್ರಜ್ಞಾನದ ವ್ಯವಸ್ಥೆಗೂ ಬಜೆಟ್‌ನಲ್ಲಿ ಅನುದಾನ ಮೀಸಲಿಡಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ, ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ.ಸಲೀಂ, ಗೃಹ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ರಾಜೇಂದ್ರ ಕಟಾರಿಯಾ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು

**ಪೊಲೀಸರು ಶ್ರೀಕೃಷ್ಣನ ವಂಶಸ್ಥರಿದ್ದಂತೆ**

1959ರಲ್ಲಿ ಚೀನಾದ ದಾಳಿಯಲ್ಲಿ ಹುತಾತ್ಮರಾದ ಹತ್ತು ಮಂದಿ ಪೊಲೀಸರ ಬಲಿದಾನದ ಸರಣಾರ್ಥ ಪೊಲೀಸ್ ಸಂಸರಣಾ ದಿನವನ್ನು ಆಚರಿಸಲಾಗುತ್ತಿದೆ, ಆ ಪರಂಪರೆಯನ್ನು ನಾವು ಇಂದಿಗೂ ಮುಂದುವರಿಸಿದ್ದೇವೆ ಎಂದರು. ಹುತಾತರನ್ನು ಸರಿಸುವುದು ಮತ್ತು ಸಂತಾಪ ಸೂಚಿಸುವುದಷ್ಟೇ ನಮ ಉದ್ದೇಶವಾಗಬಾರದು. ಅವರು ತೋರಿದ ಕರ್ತವ್ಯನಿಷ್ಠೆ ತ್ಯಾಗ ಮತ್ತು ಜನಸೇವೆಯ ಮೌಲ್ಯಗಳನ್ನು ಮುಂದುವರಿಸಿಕೊಂಡು ಹೋಗುವುದು ನಮ ಆದ್ಯತೆಯಾಗಬೇಕು. ನಾನು ಆಗಾಗ ಹೇಳ್ತೇನೆ, ನೀವೆಲ್ಲಾ ಶ್ರೀಕೃಷ್ಣ ಪರಮಾತ್ಮನ ವಂಶಕ್ಕೆ ಸೇರದವರು. ಸಮಾಜದಲ್ಲಿ ಸುವ್ಯವಸ್ಥೆ ಹದಗೆಟ್ಟಾಗ ನಿಮ್ಮರಕ್ಷಣೆ ಎಲ್ಲರನ್ನೂ ಕಾಪಾಡುತ್ತದೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

# ಧರ್ಮಸ್ಥಳದಲ್ಲಿ ಶರನ್ನವರಾತ್ರಿ ಉತ್ಸವ ಸಂಪನ್ನ



**ಸಹಸ್ರಾರು ಮುತ್ತೈದೆಯರಿಗೆ ವಸ್ತ್ರ ಪ್ರಸಾದ ವಿತರಣೆ**

**ಭಕ್ತಿ, ಸಂಗೀತಾರಾಧನೆ ಯೊಂದಿಗೆ ನವರಾತ್ರಿ ಸಂಭ್ರಮ**

**ಮುಂಬಯಿ, ಅ.21:** ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಶರನ್ನವರಾತ್ರಿ ಪ್ರಯುಕ್ತ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ನೇತೃತ್ವದಲ್ಲಿ ಒಂಬತ್ತು ದಿನಗಳ ಕಾಲ ನಡೆದ ವಿಶೇಷ ಪೂಜಾ ಕಾರ್ಯಕ್ರಮಗಳು ಹಾಗೂ ಧಾರ್ಮಿಕ ಉತ್ಸವಗಳು ಅ. 19ರಂದು ಮಹಾನವಮಿ ಯಂದು ಸಂಭ್ರಮದಿಂದ ಸಂಪನ್ನ ಗೊಂಡವು.

ಅ.11ರಿಂದ 19ರವರೆಗೆ ಪ್ರತಿದಿನ ರಾತ್ರಿ ಶ್ರೀ ಅಮ್ಮನವರ ಸನ್ನಿಧಿಯಲ್ಲಿ ವಿಶೇಷ ಪೂಜೆ, ಉತ್ಸವ, ಕನ್ನಿಕಾ ಪೂಜೆ ಹಾಗೂ ಅಷ್ಟಾವಧಾನ ಸೇವೆಗಳು ಶ್ರದ್ಧಾಭಕ್ತಿ ಯಿಂದ ನೆರವೇರಿದವು. ಅ. 17ರಂದು ಚಂಡಿಕಾ ಹವನವನ್ನು ವಿಶೇಷವಾಗಿ ನೆರವೇರಿಸಲಾಯಿತು.

**ಸಹಸ್ರಾರು ಮುತ್ತೈದೆಯರಿಗೆ ವಸ್ತ್ರ ಪ್ರಸಾದ:**

ಮಹಾನವಮಿ ಪ್ರಯುಕ್ತ ಅಕ್ಟೋಬರ್ 19ರಂದು ರಾತ್ರಿ ಶರನ್ನವರಾತ್ರಿಯ ವಿಶೇಷ ಉತ್ಸವಗಳು ಸಮಾಪನಗೊಂಡವು. ಈ ಸಂದರ್ಭದಲ್ಲಿ ಸಹಸ್ರಾರು ಮುತ್ತೈದೆಯರಿಗೆ ವಸ್ತ್ರ ಪ್ರಸಾದ ವಿತರಿಸಲಾಯಿತು. ದ.ಕ. ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದ ಮುತ್ತೈದೆಯರು ಸರತಿ ಸಾಲಿನಲ್ಲಿ ಶಿಸ್ತುಬದ್ಧವಾಗಿ ಬಂದು ಭಕ್ತಿಭಾವದಿಂದ ವಸ್ತ್ರಪ್ರಸಾದ ಸ್ವೀಕರಿಸಿದರು.

**ಸಂಗೀತಾರಾಧನೆಯೊಂದಿಗೆ ನವರಾತ್ರಿ ವೈಭವ:**

ಶರನ್ನವರಾತ್ರಿ ಉತ್ಸವದ ಅಂಗವಾಗಿ ಕ್ಷೇತ್ರದ ಪ್ರವಚನ ಮಂಟಪದಲ್ಲಿ ಪ್ರತಿದಿನ ಸಂಜೆ 6ರಿಂದ ರಾತ್ರಿ 8ರವರೆಗೆ ಸಂಗೀತ ಕಲಾವಿದರಿಂದ ಭಕ್ತಿಗೀತೆ ಹಾಗೂ ಶಾಸ್ತ್ರೀಯ ಸಂಗೀತ ಕಾರ್ಯಕ್ರಮಗಳು ನಡೆದವು. ಸಂಗೀತ ಕಲಾವಿದರ ಭಕ್ತಿಪೂರ್ಣ ಗಾಯನವು ನವರಾತ್ರಿ ಉತ್ಸವಕ್ಕೆ ವಿಶೇಷ ಮೆರುಗು ನೀಡಿತು. ಅ. 19ರಂದು ರಾತ್ರಿ ಸಂಗೀತ ಕಾರ್ಯಕ್ರಮಗಳೂ ಸಮಾಪನಗೊಂಡವು. ಒಂಬತ್ತು ದಿನಗಳ ಕಾಲ ನಡೆದ ಪೂಜೆ, ಧಾರ್ಮಿಕ ವಿಧಿವಿಧಾನಗಳು, ಉತ್ಸವಗಳು ಹಾಗೂ ಸಂಗೀತಾರಾಧನೆ ಯೊಂದಿಗೆ ಶ್ರೀ ಕ್ಷೇತ್ರ ಧರ್ಮಸ್ಥಳದ ಶರನ್ನವರಾತ್ರಿ ಮಹೋತ್ಸವವು ಭಕ್ತಿಪೂರ್ಣವಾಗಿ ಸಂಪನ್ನಗೊಂಡಿತು.

# ದೇಶದ ಕಬ್ಬು ಬೆಳೆಗಾರರಿಗೆ ನ್ಯಾಯ ಒದಗಿಸಿದ್ದು ಎನ್‌ಡಿಎ ಸರ್ಕಾರ: ಬಿ.ವೈ. ವಿಜಯೇಂದ್ರ



**ಬೆಂಗಳೂರು ಅ.21:** ಇಡೀ ದೇಶದಲ್ಲಿ ಕಬ್ಬು ಬೆಳೆಗಾರರಿಗೆ ನ್ಯಾಯ ದೊರಕಿಸಿಕೊಟ್ಟಿದ್ದು ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ. ಮೋದಿ ಅವರು ಬಂದ ಮೇಲೆ ಎಂಎಸ್‌ಪಿ ತಂದರು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಥೆನಾಲ್ ಉತ್ಪಾದನೆಗೆ ಮೋದಿ ಅವರು ಅವಕಾಶ ನೀಡಿದರು. ಕಬ್ಬು ಅರೆಯುವ ಕಾರ್ಖಾನೆಗಳಿಗೆ ಅನುಕೂಲ ಆಗುವ ನೀತಿಯನ್ನು ಜಾರಿ ಮಾಡಿದರು. ಹಣಕಾಸು ಸಹಾಯ ಸೇರಿದಂತೆ ಹಲವು ರೀತಿಯಲ್ಲಿ ಅನುಕೂಲ ಮಾಡಿಕೊಟ್ಟರು ಎಂದು ಹೇಳಿದರು.

ಕಬ್ಬು ಬೆಳೆಗಾರರ ಅನೇಕ ದೂರುಗಳಲ್ಲಿ ಕಾರ್ಖಾನೆಗಳಲ್ಲಿ ಸರಿಯಾಗಿ ತೂಕ ಮಾಡುತ್ತಿಲ್ಲ ಎಂಬುದು ಮುಖ್ಯವಾಗಿದೆ. ರಿಕವರಿ ಸೇರಿದಂತೆ ಅನೇಕ ಬೇಡಿಕೆ ಮುಂದಿಟ್ಟು ಪ್ರತಿಭಟನೆ ನಡೆಯುತ್ತಿದೆ. ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರು ಈಗಾಗಲೇ ಸಮಿತಿ ರಚನೆ ಮಾಡಿದ್ದಾರೆ. ಆ ಸಮಿತಿ ರಾಜ್ಯಕ್ಕೆ ಭೇಟಿ ನೀಡುತ್ತಿದೆ ಎಂದರು.

ಕಬ್ಬಿನ ಸಮಸ್ಯೆ ರಾಜ್ಯಕ್ಕೆ ಸೀಮಿತವಾಗಿಲ್ಲ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಗಮನ ಹರಿಸಿದೆ ಎಂದು ವಿವರಿಸಿದರು.

**ಕೇಂದ್ರ ದೂರುವುದೇ ಕೆಲಸವಾಗಿದೆ...**

ಮುಖ್ಯಮಂತ್ರಿ ಡಿಕೆಶಿ ಅವರ ಬುಡ ಅಲ್ಲಾಡುತ್ತಿದೆ. ಅವರದೇ ಶಾಸಕರು ದಂಗೆ ಏಳುವ ಸ್ಥಿತಿಗೆ ಬಂದಿದ್ದಾರೆ. ಹತಾಶರಾಗಿ ಪದೇಪದೆ ಕೇಂದ್ರ ಸರ್ಕಾರ ದೂರುತ್ತಾರೆ. ಸ್ಟಿಂಗ್ ಆಪರೇಷನ್ ಬಗ್ಗೆ ಚರ್ಚೆಯಾಗುತ್ತಿದೆ. ರಾಜ್ಯ ಸರ್ಕಾರ ಬರವನ್ನೂ ಸರಿಯಾಗಿ ನಿರ್ವಹಿಸಲಿಲ್ಲ. ಅಭಿವೃದ್ಧಿ ಸಹ ಇಲ್ಲವಾಗಿದೆ. ಎಲ್ಲಕ್ಕು ಪ್ರತಿಭಟನೆ ನಡೆಯುತ್ತಿವೆ. ತಮ್ಮ ವೈಫಲ್ಯ ಮುಚ್ಚಿಹಾಕಲು ಕೇಂದ್ರ ದೂರುತ್ತಾರೆ. ಕೇಂದ್ರಕ್ಕೆ ನಿಯೋಗ ಹೋಗುವ ಬಗ್ಗೆ ಚರ್ಚೆ ಮಾಡುತ್ತೇವೆ ಎಂದರು.

# ಎನ್‌ಡಿಎ ಬೆಂಬಲಿಸದವರು ಒಬ್ಬೊಬ್ಬರಾಗಿ ಹೊರಬರುತ್ತಿದ್ದಾರೆ

**ಮತಗಳ್ಳತನದಿಂದ ಗೆದ್ದಿದ್ದಾರೆ ಎನ್ನುವುದು ಈಗ ಗೊತ್ತಾಗಿದೆ: ಮಲ್ಲಿಕಾರ್ಜುನ ಖರ್ಗೆ**



**ಕಲಬುರಗಿ, ಅ.21:** ಎನ್‌ಡಿಎ ಸರ್ಕಾರದ ವಿರುದ್ಧ ಜನ ಬೇಸತ್ತಿದ್ದು, ಹೀಗಾಗಿ ಒಬ್ಬೊಬ್ಬರಾಗೇ ಎನ್‌ಡಿಎಯಿಂದ ಹಿಂದೆ ಸರಿಯುತ್ತಿದ್ದಾರೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

ಕಲಬುರಗಿಯಲ್ಲಿ ಮಾತನಾಡಿದ ಅವರು, ಆಂಧ್ರದಲ್ಲಿ ಜಗನ್‌ಮೋಹನ್ ರೆಡ್ಡಿ 2023ರಲ್ಲಿ ಎನ್‌ಡಿಎಗೆ ಬೆಂಬಲಿಸಿದ್ದರು.ಈಗ ಅವರೇ ತಪ್ಪು ಮಾಡಿದೆ ಎಂದು ಜನರ ಕ್ಷಮೆ ಕೇಳಿದ್ದಾರೆ. ಎನ್‌ಡಿಎ ಒಕ್ಕೂಟಕ್ಕೆ ಮತ ಕೊಟ್ಟವರಿಗೆ ಬಿಜೆಪಿಯವರು ಮತಗಳ್ಳತನದಿಂದ ಗೆದ್ದಿದ್ದಾರೆ ಎಂದು ಈಗ ಗೊತ್ತಾಗಿದೆ ಎಂದಿದ್ದಾರೆ.

ಲೋಕಸಭೆ ವಿಪಕ್ಷ ನಾಯಕ ರಾಹುಲ್ ವಿರುದ್ಧ ಬರೀ ಟೀಕಿಸುತ್ತಾರೆ. ರಾಹುಲ್ ಹೆಸರು ಹೇಳಿಕೊಂಡು ಎಷ್ಟು ದಿನ ರಾಜಕೀಯ ಮಾಡುತ್ತೀರಿ. ಈ ಹಿಂದೆ ಬಿಜೆಪಿಯವರು ಇಂದಿರಾಗಾಂಧಿಯನ್ನು ಬೈಯುತ್ತಿದ್ದರು. ಈಗ ರಾಹುಲ್ ಗಾಂಧಿಗೆ ಬಯ್ಯೋದೇ ಮೋದಿ ಮತ್ತು ಅಮಿತ್ ಶಾ ಕೆಲಸವಾಗಿದೆ ಎಂದು ಖರ್ಗೆ ದೂರಿದ್ದಾರೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಒಂದರ ಮೇಲೊಂದು ತಪ್ಪು ಮಾಡಿ ದೇಶದ ಯುವಕರ ದಿಕ್ಕು ತಪ್ಪಿಸುತ್ತಿದ್ದಾರೆ. ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಕರ ಕೊರತೆ ಇದ್ದು, ಮೋದಿ ಸರ್ಕಾರ ಶಿಕ್ಷಣಕ್ಕೆ ಯಾವುದೇ ಒತ್ತುಕೊಡುತ್ತಿಲ್ಲ. ಹೀಗಾಗಿ ಯುವಕರು ಸಹ ನರೇಂದ್ರ ಮೋದಿ ಅವರನ್ನು ನಂಬುತ್ತಿಲ್ಲ ಎಂದೂ ಖರ್ಗೆ ಆರೋಪಿಸಿದ್ದಾರೆ.

**ಮೋದಿಯಿಂದ ಹಿಟ್ಲರ್‌ಶಾಹಿ ಆಡಳಿತ**

ಸಿಇಸಿ ಜ್ಞಾನೇಶ್‌ಕುಮಾರ್ ವಿರುದ್ಧ ಏಕವಚನದಲ್ಲಿಯೇ ವಾಗ್ದಾಳಿ ನಡೆಸಿರುವ ಖರ್ಗೆ, ಇಡೀ ದೇಶದಲ್ಲಿ ಬಿಜೆಪಿಗೆ ಹಾಗೂ ವಿಶೇಷವಾಗಿ ಮೋದಿಯವರ ನೇತೃತ್ವಕ್ಕೆ ಆತ ಬೆಂಬಲ ಕೊಟ್ಟಿದ್ದಾನೆ. ಬೋಗಸ್ ಮತದಾನ ಮಾಡಿಸಿದ್ದಾರೆ. ಆಯೋಗದ ತಪ್ಪು ಎತ್ತಿ ತೋರಿಸಿದ್ರು ಮೋದಿ ಗಮನ ಹರಿಸಲಿಲ್ಲ. ಜ್ಞಾನೇಶ್‌ಕುಮಾರ್ ಎಷ್ಟೇ ತಪ್ಪು ಮಾಡಿದರೂ ಶಿಕ್ಷೆ ನೀಡಿಲ್ಲ. ಈ ದೇಶದಲ್ಲಿನ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ನಾಶಮಾಡಬೇಕು, ತನ್ನ ಕೈಯಲ್ಲಿ ಸರ್ವಾಧಿಕಾರ ಮುಂದುವರಿಸಬೇಕು ಎಂಬ ಇಚ್ಛೆಯಲ್ಲಿದ್ದಾರೆ. ಮೋದಿ ಹಿಟ್ಲರ್‌ಶಾಹಿ ಆಡಳಿತ ಮಾಡುತ್ತಿದ್ದು, ನಾವು ದೇಶದ ಎಲ್ಲರ ಭವಿಷ್ಯಕ್ಕಾಗಿ ಹೋರಾಟ ಮಾಡುತ್ತಿದ್ದೇವೆ ಎಂದು ಮಲ್ಲಿಕಾರ್ಜುನ ಖರ್ಗೆ ತಿಳಿಸಿದ್ದಾರೆ.

# ವಿದೇಶಿ ಗಣ್ಯರನ್ನು ಸ್ವಾಗತಿಸಿದ ಸಚಿವ ಬಸವರಾಜ ರಾಯರೆಡ್ಡಿ

**ಮೈಸೂರು, ಅ.21:** 10 ದಿನಗಳ ಕಾಲ ನಡೆದ ಮೈಸೂರು ದಸರಾ ಉತ್ಸವದ ಅಂತಿಮ ದಿನವಾದ ವಿಜಯದಶಮಿಯಂದು ಆಕರ್ಷಕ ಜಂಬೂಸವಾರಿಯನ್ನು ವೀಕ್ಷಿಸಲು ಅರಮನೆ ನಗರಿಗೆ ಆಗಮಿಸಿದ ಹಲವಾರು ವಿದೇಶಿ ರಾಯಭಾರಿಗಳನ್ನು ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ಸ್ವಾಗತಿಸಿದರು. ಯುರೋಪಿಯನ್ ಒಕ್ಕೂಟದ ರಾಯಭಾರಿ ಜೀನ್-ಎರಿಕ್ ಪ್ಯಾಕ್ವೆಟ್, ಚೀನಾದ ರಾಯಭಾರಿ ಕ್ಸು ಫೀಹಾಂಗ್, ಭಾರತದಲ್ಲಿನ ಈಕ್ವೆಡಾರ್‌ನ ರಾಯಭಾರಿ ಫರ್ನಾಂಡೊ ಬುಚೆಲಿ, ಮೊಜಾಂಬಿಕ್‌ನ ಹೈಕಮಿಷನರ್ ಅರ್ಮಾಂಡೊ ಪೆಡ್ರೊ, ಬಲ್ಗೇರಿಯಾದ ರಾಯಭಾರಿ ನಿಕೋಲಾಯ್ ಯಾಂಕೋವ್ ಮತ್ತು ಬ್ರಿಟಿಷ್ ಉಪ ಹೈ ಕಮಿಷನರ್ ಹರ್ಷ್‌ಬೀರ್ ಸಂಘಾ ಅವರನ್ನು ಸ್ವಾಗತಿಸಲಾಯಿತು ಇವರಲ್ಲದೆ, ಡೆನ್ಮಾರ್ಕ್‌ನ ಕಾನ್ಸುಲ್ ಜನರಲ್ ಪೀಟರ್ ವಿಂಥರ್, ಇಸ್ರೇಲ್‌ನ ಕಾನ್ಸುಲ್ ಜನರಲ್ ಓರ್ಲಿ ವೈಟ್ಜ್‌ಮನ್, ಆಸ್ಟ್ರೇಲಿಯಾದ ಕಾನ್ಸುಲ್ ಜನರಲ್ ಹಾಗೂ ಅರ್ಮೇನಿಯಾ ಗಣರಾಜ್ಯದ ರಾಯಭಾರ ಕಚೇರಿಯ ಕೌನ್ಸಿಲರ್ ಮರಾಟ್ ಮೆಲಿಕ್ಯಾನ್ ಕೂಡ ಉಪಸ್ಥಿತರಿದ್ದರು.ಈ ವೇಳೆ ಸಚಿವ ರಾಯರೆಡ್ಡಿ, ಕರ್ನಾಟಕದ ಭವ್ಯ ಇತಿಹಾಸ, ಸಂಸ್ಕೃತಿ, ಸಂಪ್ರದಾಯ ಮತ್ತು ಆಚರಣೆ, ಮೈಸೂರು ರಾಜಮನೆತನದ ಪರಂಪರೆ ಹಾಗೂ ಈ ಹಬ್ಬದ ಮಹತ್ವದ ಕುರಿತು ಅತಿಥಿಗಳಿಗೆ ಮಾಹಿತಿ ನೀಡಿದ್ದಾರೆ.ದಸರಾ ಉತ್ಸವವು ಕಾಲಕ್ರಮೇಣ ಹೇಗೆ ಬೆಳೆದುಬಂದಿತು. ಅಧಿದೇವತೆ ಚಾಮುಂಡೇಶ್ವರಿ ದೇವಿಯ ಮೇಲೆ ಜನರಿಗಿರುವ ಭಕ್ತಿ, ಹಬ್ಬಕ್ಕಾಗಿ ಕೈಗೊಂಡ ಸಿದ್ಧತೆಗಳು, ಚಿನ್ನದ ಅಂಬಾರಿ ಮೆರವಣಿಗೆಯ ಮಹತ್ವ ಮತ್ತು ಈ ಉತ್ಸವದ ವಿಶಿಷ್ಟ ಲಕ್ಷಣಗಳ ಬಗ್ಗೆ ಅವರು ವಿವರಿಸಿದರು.

# ದಸರಾ ಆನೆಗಳಿಗೆ 20 ರಿಂದ 30 ದಿನ ತಾಲೀಮು ಕಡ್ಡಾಯ: ಸಚಿವ ರಾಮಲಿಂಗಾರೆಡ್ಡಿ

**ಶಿವಮೊಗ್ಗ ದಸರಾ ಆನೆ ಅವಘಡದ ಬೆನ್ನಲ್ಲೇ ಎಚ್ಚೆತ್ತ ಸರ್ಕಾರ: ಅರಣ್ಯಾಧಿಕಾರಿಗಳಿಗೆ ಸೂಚನೆ**

**ಬೆಂಗಳೂರು, ಅ.21:** ಶಿವಮೊಗ್ಗ ದಸರಾ ಜಂಬೂಸವಾರಿ ವೇಳೆ ಅಂಬಾರಿ ಹೊತ್ತಿದ್ದ ಸೋಮಣ್ಣ ಆನೆ ಏಕಾಏಕಿ ಬೆದರಿ ಓಡಿದ ಘಟನೆ ಹಿನ್ನೆಲೆಯಲ್ಲಿ ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವ ರಾಮಲಿಂಗಾರೆಡ್ಡಿ ಅವರು ಅಧಿಕಾರಿಗಳಿಂದ ಮಾಹಿತಿ ಪಡೆದಿದ್ದು, ಮುಂದಿನ ದಿನಗಳಲ್ಲಿ ಇಂತಹ ಘಟನೆ ಮರುಕಳಿಸದಂತೆ ಕಟ್ಟುನಿಟ್ಟಿನ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದ್ದಾರೆ.

ಮುಂದಿನ ವರ್ಷದಿಂದ ದಸರಾ ಜಂಬೂಸವಾರಿ ನಡೆಸುವ ಮೊದಲು ಆನೆಗಳಿಗೆ ಕನಿಷ್ಠ 20 ದಿನಗಳಿಂದ ಒಂದು ತಿಂಗಳವರೆಗೆ ನುರಿತ ಮಾವುತರು ಹಾಗೂ ಕಾವಾಡಿಗರ ನೇತೃತ್ವದಲ್ಲಿ ಕಡ್ಡಾಯವಾಗಿ ತಾಲೀಮು ನಡೆಸುವ ವ್ಯವಸ್ಥೆ ಕಲ್ಪಿಸುವಂತೆ ಅರಣ್ಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಶಿವಮೊಗ್ಗ ದಸರಾ ಜಂಬೂಸವಾರಿ ವೇಳೆ ನಡೆದ ಅಚಾತುರ್ಯದ ಕುರಿತು ಸಚಿವ ರಾಮಲಿಂಗಾರೆಡ್ಡಿ ಅವರು ಶಿವಮೊಗ್ಗ



ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಮಾತನಾಡಿ ಘಟನೆಯ ವಿವರಗಳನ್ನು ಪಡೆದುಕೊಂಡರು.

ಜಂಬೂಸವಾರಿ ವೇಳೆ ಆನೆ ಬೆದರಿ ಓಡಲು ಕಾರಣವೇನು, ಮುಂಜಾಗ್ರತಾ ಕ್ರಮಗಳನ್ನು ಸಮರ್ಪಕವಾಗಿ ಕೈಗೊಳ್ಳಲಾಗಿತ್ತೇ, ಸಾರ್ವಜನಿಕರಿಗೆ ಯಾವುದೇ ತೊಂದರೆ ಅಥವಾ ಅಪಾಯ ಉಂಟಾಗಿದೆಯೇ, ಆನೆ ಓಡಿದ ಸಂದರ್ಭದಲ್ಲಿ ವಾಹನಗಳಿಗೆ ಎಷ್ಟು ಹಾನಿಯಾಗಿದೆ ಎಂಬಿತ್ಯಾದಿ ವಿಷಯಗಳ ಕುರಿತು ಮಾಹಿತಿ ಪಡೆದರು.

ದಸರಾ ಸೇರಿದಂತೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ಉತ್ಸವಗಳಲ್ಲಿ ಪಾಲ್ಗೊಳ್ಳುವ ಆನೆಗಳಿಗೆ ಮುಂಚಿತವಾಗಿಯೇ ಸೂಕ್ತ ತರಬೇತಿ ನೀಡುವುದು ಅತ್ಯಗತ್ಯವಾಗಿದೆ. ಮುಂದಿನ ದಿನಗಳಲ್ಲಿ ಜಂಬೂಸವಾರಿ ನಡೆಸುವ ಮೊದಲು ಕನಿಷ್ಠ 20 ದಿನಗಳಿಂದ ಒಂದು ತಿಂಗಳವರೆಗೆ ನುರಿತ ಮಾವುತರು ಮತ್ತು ಕಾವಾಡಿಗರ ಮೂಲಕ ಆನೆಗಳಿಗೆ ನಿರಂತರ ತಾಲೀಮು ನೀಡಬೇಕು.

ಜನಸಂದಣಿ, ವಾದ್ಯಗಳ ಸದ್ದು, ಮೆರವಣಿಗೆಯ ವಾತಾವರಣ ಹಾಗೂ ಇತರ ಸಂದರ್ಭಗಳಿಗೆ ಆನೆಗಳನ್ನು ಸಿದ್ಧಗೊಳಿಸಬೇಕು ಎಂಬ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.

# ಭಾರತ-ಅಮೆರಿಕ ಒಪ್ಪಂದ: ಪ್ರಧಾನಿ ಮಾಹಿತಿ ನೀಡುವರೇ

**ನವದೆಹಲಿ, ಅ. 21:** ಛತ್ತೀಸ್‌ಗಢದ ಮಾಜಿ ಉಪಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ನಾಯಕ ಟಿ.ಎಸ್. ಸಿಂಗ್‌ದೇವ್ ಅವರು ಭಾರತ-ಅಮೆರಿಕ ವ್ಯಾಪಾರ ಒಪ್ಪಂದದ ಪಾರದರ್ಶಕತೆಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ. ಭಾರತ ಸರ್ಕಾರದ ಬದಲಾಗಿ ಅಮೆರಿಕದ ಅಧಿಕಾರಿಗಳು ಒಪ್ಪಂದದ ವಿವರಗಳನ್ನು ಬಹಿರಂಗಪಡಿಸುತ್ತಿರುವುದು ಏಕೆ ಎಂದು ಅವರು ಕೇಂದ್ರ ಸರ್ಕಾರವನ್ನು ಪ್ರಶ್ನಿಸಿದ್ದಾರೆ. ಅಲ್ಲದೆ, ಒಪ್ಪಂದಕ್ಕೆ ಔಪಚಾರಿಕ ಅನುಮೋದನೆ ನೀಡುವ ಮುನ್ನ ಪ್ರಧಾನಿ ನರೇಂದ್ರ ಮೋದಿ ಅವರು ಈ ಬಗ್ಗೆ ಸಂಸತ್ತಿಗೆ ಸಂಪೂರ್ಣ ವಿವರಣೆ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಸಿಂಗ್ ದೇವ್, ಮುಂಬೈನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅಮೆರಿಕದ ಅಧಿಕಾರಿಯೊಬ್ಬರು ಆಡಿದ ಮಾತುಗಳನ್ನು ಉಲ್ಲೇಖಿಸಿ ಕೇಂದ್ರ ಸರ್ಕಾರದ ಕಾಲೆಳೆದಿದ್ದಾರೆ. ಭಾರತದ ಆರ್ಥಿಕ ಹಾಗೂ ಕಾರ್ಯತಂತ್ರದ ನಿರ್ಧಾರಗಳ ಬಗ್ಗೆ ವಾಷಿಂಗ್ಟನ್ ನಮಗೆ ಮಾಹಿತಿ ನೀಡುತ್ತಿದೆ ಎಂದು ಅವರು ತೈಲ ಖರೀದಿ ಮತ್ತು ರಕ್ಷಣಾ ಒಪ್ಪಂದಗಳ ವಿಚಾರವನ್ನು ಪ್ರಸ್ತಾಪಿಸಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಭಾರತಕ್ಕೆ ಸಿಹಿಸುದ್ದಿ. ನಮ್ಮ ವ್ಯಾಪಾರ ಒಪ್ಪಂದ ಬಹುತೇಕ ಅಂತಿಮಗೊಂಡಿದೆ. ಆದರೆ ಇದು ನಮಗೆ ತಿಳಿದದ್ದು ಹೇಗೆ ನಮ್ಮ ಸಂಸತ್ತಿನಿಂದಲ್ಲ, ನಮ್ಮ ಸರ್ಕಾರದಿಂದಲೂ ಅಲ್ಲ. ಮುಂಬೈಗೆ ಭೇಟಿ ನೀಡಿರುವ ಅಮೆರಿಕದ ವಿದೇಶಾಂಗ ಕಾರ್ಯದರ್ಶಿಯವರ ಪತ್ರಿಕಾಗೋಷ್ಠಿಯಿಂದ! ನಾವು ಯಾವ ಕಚ್ಚಾತೈಲವನ್ನು ಶುದ್ಧೀಕರಿಸಲು ಸಿದ್ಧರಿದ್ದೇವೆ, ನಾವು ಎಲ್ಲಿಂದ ತೈಲ ಖರೀದಿಸುತ್ತಿದ್ದೇವೆ ಎಂಬ ಬಗ್ಗೆ ವಾಷಿಂಗ್ಟನ್ ಎಷ್ಟು ಸಂತೋಷಪಟ್ಟಿದೆ ಮತ್ತು ಮುಂದಿನ ದಿನಗಳಲ್ಲಿ ನಾವು ಯಾವ ಅಮೆರಿಕನ್ ರಕ್ಷಣಾ ವ್ಯವಸ್ಥೆಗಳನ್ನು ಖರೀದಿಸಬೇಕು ಎಂಬ ಬಗ್ಗೆಯೂ ಅವರು ನಮಗೆ ಮಾಹಿತಿ ನೀಡಿದ್ದಾರೆ. ಇದು ಅತ್ಯಂತ ವಿವರವಾದ ಮಾಹಿತಿ. ನಮ್ಮ ಸರ್ಕಾರವೂ ಅವರಿಂದ ಪಾಠ ಕಲಿಯಬಹುದು ಎಂದು ಸಿಂಗ್ ದೇವ್ ವ್ಯಂಗ್ಯವಾಡಿದ್ದಾರೆ.

ಈ ವ್ಯಾಪಾರ ಒಪ್ಪಂದದ ಮಾತುಕತೆಗಳಲ್ಲಿ ಪಾರದರ್ಶಕತೆಯ ತೀವ್ರ ಕೊರತೆಯಿದೆ ಎಂದು ಆರೋಪಿಸಿರುವ ಅವರು, ಇದು ನೇರವಾಗಿ ರೈತರು, ಸಣ್ಣ ಉತ್ಪಾದಕರು ಹಾಗೂ ಸಾಮಾನ್ಯ ಕುಟುಂಬಗಳ ಮೇಲೆ ಪರಿಣಾಮ ಬೀರಲಿದೆ ಎಂದು ಎಚ್ಚರಿಸಿದ್ದಾರೆ. ಕೇಂದ್ರ ಬಜೆಟ್ ಮಂಡನೆಗೆ ಈ ವಿದ್ಯಮಾನವನ್ನು ಹೋಲಿಸಿರುವ ಅವರು ಸರ್ಕಾರದ ಕಾರ್ಯವೈಖರಿಯನ್ನು ಕಟುವಾಗಿ ಟೀಕಿಸಿದ್ದಾರೆ.

## ನಿಧನ ವಾರ್ತೆ

### ಕೇಂದ್ರ ಸಚಿವರ ಆಪ್ತ ಕಾರ್ಯದರ್ಶಿ ಮುರಳೀಧರ ಮಳಗಿ ಅವರಿಗೆ ಮಾತೃ ವಿಯೋಗ: ಗಣ್ಯರ ಸಂತಾಪ



ಹುಬ್ಬಳ್ಳಿ: ಕೇಂದ್ರ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣೆ ಹಾಗೂ ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಷಿ ಅವರ ಆಪ್ತ ಕಾರ್ಯದರ್ಶಿಯಾದ ಮುರಳೀಧರ ಮಳಗಿ ಅವರ ತಾಯಿ ರಮಾಬಾಯಿ ಮಳಗಿ (93) ಅವರು ದಿನಾಂಕ 18ರ ಬೆಳಗಿನ ಜಾವ ವಯೋಸಹಜ ಅನಾರೋಗ್ಯದಿಂದ ನಿಧನರಾದರು. ಮೃತರು ನಾಲ್ವರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಗಣ್ಯರ ಸಂತಾಪ:

ರಮಾಬಾಯಿ ಮಳಗಿ ಅವರ ನಿಧನಕ್ಕೆ ಕೇಂದ್ರ ಸಚಿವ ಪ್ರಲ್ಹಾದ ಜೋಷಿ, ಸಂಸದ ಜಗದೀಶ್ ಶೆಟ್ಟರ್, ಶಾಸಕರಾದ ಮಹೇಶ್ ಟೆಂಗಿನಕಾಯಿ, ಎಂ. ಆರ್. ಪಾಟೀಲ್ ಹಾಗೂ ವಿಧಾನ ಪರಿಷತ್ ಸದಸ್ಯ ಲಿಂಗರಾಜ ಪಾಟೀಲ್ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಅವರ ಕುಟುಂಬದವರಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಗಣ್ಯರು ತಮ್ಮ ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

# ದಸರಾ ಜಂಬೂಸವಾರಿಯಲ್ಲಿ ಮಿಂಚಿದ ಮಂಡ್ಯದ ಅಸ್ಮಿತೆ ಸ್ತಬ್ಧಚಿತ್ರ ಸಚಿವ ಈಶ್ವರ ಖಂಡ್ರೆ ಅವರಿಂದ 1 ಲಕ್ಷ ಬಹುಮಾನ ಘೋಷಣೆ

- **ನಾಡಹಬ್ಬ ಮೈಸೂರು ದಸರಾದಲ್ಲಿ ಮಹಿಳಾ ಸಬಲೀಕರಣದ ಮಹತ್ವ ಸಾರಿದ ಮಂಡ್ಯ ಜಿಲ್ಲಾ ಪಂಚಾಯಿತಿ ಸ್ತಬ್ಧಚಿತ್ರ**
- **ಮಾತೃತ್ವ, ಕೃಷಿ ನಾವೀನ್ಯತೆ ಹಾಗೂ ಉದ್ಯಮಶೀಲತೆಯ ಪರಿಕಲ್ಪನೆಗೆ ಗ್ರಾಮೀಣಾಭಿವೃದ್ಧಿ ಸಚಿವರ ವಿಶೇಷ ಮೆಚ್ಚುಗೆ**
- **ಅತ್ಯುತ್ತಮ ರಚನೆ ಹಾಗೂ ಕಲ್ಪನೆಗೆ ಪ್ರೇರಿತರಾಗಿ ಸಚಿವರ ನಗದು ಪುರಸ್ಕಾರ ಘೋಷಣೆ**




ವಿಶ್ವವಿಖ್ಯಾತ ಮೈಸೂರು ನಾಡಹಬ್ಬ ದಸರಾ ಮಹೋತ್ಸವದ ಜಂಬೂಸವಾರಿ ಮೆರವಣಿಗೆಯಲ್ಲಿ ಮಂಡ್ಯ ಜಿಲ್ಲಾ ಪಂಚಾಯತ್ ವತಿಯಿಂದ ಪ್ರದರ್ಶಿಸಲಾದ ಅಸ್ಮಿತೆ – ಸ್ತ್ರೀ ಶಕ್ತಿಯ ಅನಾವರಣ ಎಂಬ ವಿನೂತನ ಸ್ತಬ್ಧಚಿತ್ರವು ಅಪಾರ ಪ್ರಶಂಸೆಗೆ ಪಾತ್ರವಾಗಿದೆ.

ಮಹಿಳೆಯರ ಸರ್ವಾಂಗೀಣ ಅಭಿವೃದ್ಧಿ ಹಾಗೂ ಸಬಲೀಕರಣವನ್ನು ಪರಿಣಾಮಕಾರಿಯಾಗಿ ಬಿಂಬಿಸಿದ್ದ ಈ ಸ್ತಬ್ಧಚಿತ್ರದ ಪರಿಕಲ್ಪನೆ ಮತ್ತು ವಿನ್ಯಾಸವನ್ನು ಮುಕ್ತಕಂಠದಿಂದ ಶ್ಲಾಘಿಸಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಅವರು, ತಮ್ಮ ವೈಯಕ್ತಿಕ ವತಿಯಿಂದ 1 ಲಕ್ಷ ನಗದು ಬಹುಮಾನವನ್ನು ನೀಡುವುದಾಗಿ ಘೋಷಿಸಿದ್ದಾರೆ.

**ಸ್ತಬ್ಧಚಿತ್ರದ ಪ್ರಮುಖ ಅಂಶಗಳು:**

ಮಾತೃತ್ವ ಮತ್ತು ವಾತ್ಸಲ್ಯದ ಸಂದೇಶ: ಸಮಾಜದ ಭದ್ರಬುನಾದಿಯಾಗಿರುವ ಮಾತೃತ್ವ ಹಾಗೂ ವಾತ್ಸಲ್ಯದ ಮೌಲ್ಯವನ್ನು ಸಾರುವ ಬೃಹತ್ ತಾಯಿಯ ಪ್ರತಿಕೃತಿ, ಹಾಗೆಯೇ ದುಡಿಯುವ ತಾಯಂದಿರ ಮಕ್ಕಳಿಗಾಗಿ ನಿರ್ಮಿಸಲಾದ 'ವಾತ್ಸಲ್ಯ ಕೇಂದ್ರ' ಮತ್ತು ಶಿಶುಸಂಜೀವಿನಿ (ಎದೆ ಹಾಲಿನ ಸಂಗ್ರಹಣಾ ಕೇಂದ್ರ) ಪರಿಕಲ್ಪನೆಗಳ ಅನಾವರಣ. ಸಾಧನೆ ಮತ್ತು ಸಮಾನತೆ: ತಾರತಮ್ಯವಿಲ್ಲದ ವಾತಾವರಣ ದೊರೆತರೆ ಮಹಿಳೆಯರು ಅಗಾಧ ಸಾಧನೆ ಮಾಡಬಲ್ಲರು ಎಂಬುದಕ್ಕೆ ಸಾಕ್ಷಿಯಾಗಿ, 2025ರ ಚೊಚ್ಚಲ ಅಂಧ ಮಹಿಳೆಯರ ಚುಟುಕು ವಿಶ್ವಕಪ್ ಗೆದ್ದ ಭಾರತೀಯ ತಂಡದ ಐತಿಹಾಸಿಕ ಸಾಧನೆಯ ಚಿತ್ರಣ.

ಆಧುನಿಕ ಕೃಷಿ ಹಾಗೂ ತಂತ್ರಜ್ಞಾನ: ಮಹಿಳಾ ರೈತರು ಕೃಷಿಯಲ್ಲಿ ಡ್ರೋನ್, ಕೃತಕ ಬುದ್ಧಿಮತ್ತೆ ಹಾಗೂ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ನಾವೀನ್ಯತೆಗೆ ತೆರೆದುಕೊಂಡಿರುವುದರ ಪ್ರದರ್ಶನ. ಉದ್ಯಮಶೀಲತೆ ಮತ್ತು ಆರ್ಥಿಕ ಸ್ವಾವಲಂಬನೆ: ಸ್ವಸಹಾಯ ಸಂಘಗಳ ಮಹಿಳೆಯರಿಂದ ಮೌಲ್ಯವರ್ಧನೆ, ಸ್ವಂತ ಮುದ್ರೆ ಹಾಗೂ ಅಕ್ಕ ಕೆಫೆಯಂತಹ ಮಾದರಿ ಉಪಕ್ರಮಗಳ ಮೂಲಕ ಮಹಿಳೆಯರು ಸೇವಾ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಮುನ್ನಡೆಯುತ್ತಿರುವುದರ ಚಿತ್ರಣ.

ಆರೋಗ್ಯ ಮತ್ತು ಸ್ವಚ್ಛತೆ ಜಾಗೃತಿ: ಮಂಡ್ಯ ಜಿಲ್ಲೆಯಲ್ಲಿ ಮಹಿಳೆಯರ ಋತುಸ್ರಾವ ನೈರ್ಮಲ್ಯಕ್ಕಾಗಿ ಕೈಗೊಂಡ ಕ್ರಮಗಳು ಹಾಗೂ 32,000ಕ್ಕೂ ಹೆಚ್ಚು ಮುಟ್ಟಿನ ಕಪ್‌ಗಳನ್ನು ಉಚಿತವಾಗಿ ವಿತರಿಸಿ ಜಾಗೃತಿ ಮೂಡಿಸಿದ ಸಾಮಾಜಿಕ ಕ್ರಾಂತಿಯ ಪರಿಚಯ. ಬಾಹ್ಯಾಕಾಶದವರೆಗಿನ ಪಯಣ: ತಾಯ್ತನದ ಮಮತೆಯಿಂದ ಹಿಡಿದು ಬಾಹ್ಯಾಕಾಶ ವಿಜ್ಞಾನ ಮತ್ತು ಹಸಿರು ತಂತ್ರಜ್ಞಾನದವರೆಗೆ ಮಹಿಳೆಯರು ಸಾಧಿಸುತ್ತಿರುವ ಆಮೂಲಾಗ್ರ ಪ್ರಗತಿಯನ್ನು ಈ ಸ್ತಬ್ಧಚಿತ್ರವು ಅತ್ಯಂತ ಆಕರ್ಷಕವಾಗಿ ಸಾರಿದೆ.

**ಜಿಪಂ ಸಿಇಒ, ಸಿಬ್ಬಂದಿಗೆ ಅಭಿನಂದನೆ:**

ಸ್ತಬ್ಧಚಿತ್ರದ ಬಗ್ಗೆ ಪ್ರತಿಕ್ರಿಯೆ ನೀಡಿರುವ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅತ್ಯುತ್ತಮ ಸಂದೇಶ ಸಾರುವ ಅತ್ಯಂತ ಆಕರ್ಷಕ ಟ್ಯಾಬ್ಲೋವನ್ನು ಸಿದ್ಧಪಡಿಸಲಾಗಿದೆ. ಇದರ ಸಿದ್ಧತೆಗೆ ಶ್ರಮಿಸಿದ ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಸಿಬ್ಬಂದಿ ವರ್ಗಕ್ಕೆ ಅಭಿನಂದನೆ ತಿಳಿಸಿದ್ದಾರೆ.

**ಮಂಡ್ಯ ಜಿಲ್ಲಾಡಳಿತದಲ್ಲಿ ಟ್ಯಾಬ್ಲೋ ಪ್ರದರ್ಶನಕ್ಕೆ ವ್ಯವಸ್ಥೆ: ಸಚಿವ ಖಂಡ್ರೆ**

ದಸರಾ ಪ್ರದರ್ಶನದ ಬಳಿಕ ಈ ಟ್ಯಾಬ್ಲೋವನ್ನು ಮಂಡ್ಯ ಜಿಲ್ಲಾಡಳಿತದಲ್ಲಿ ಪ್ರದರ್ಶನಕ್ಕಿಟ್ಟು ವಿದ್ಯಾರ್ಥಿಗಳಿಗೆ ವೀಕ್ಷಣೆಗೆ ಅವಕಾಶ ಮಾಡಿಕೊಡಬೇಕೆಂದು ವಿಧಾನ ಪರಿಷತ್ ಶಾಸಕ ದಿನೇಶ್ ಗೂಳಿಗೌಡ ಅವರ ಮನವಿ ಮಾಡಿದ್ದಾರೆ. ಅವರ ಮನವಿ ಮೇರೆಗೆ ದಸರಾ ಪ್ರದರ್ಶನ ಮುಕ್ತಾಯವಾದ ನಂತರ ಮಂಡ್ಯ ಜಿಲ್ಲಾಡಳಿತ ಕೇಂದ್ರಕ್ಕೆ ಈ ಟ್ಯಾಬ್ಲೋವನ್ನು ಹಸ್ತಾಂತರಿಸುವಂತೆ ಸೂಚನೆ ನೀಡಿದ್ದೇನೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ್ ಖಂಡ್ರೆ ತಿಳಿಸಿದ್ದಾರೆ.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com

Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

ಅಕ್ಟೋಬರ್, 22, 2026, ಗುರುವಾರ

## ಒಳಪುಟಗಳಲ್ಲಿ

ರಾಷ್ಟ್ರವ್ಯಾಪಿ ಮಾದಕ ವಸ್ತುಗಳ ವಿರುದ್ಧ ಹೋರಾಟ ಜಾಗೃತಿ ಅಭಿಯಾನದಲ್ಲಿ ಎನ್‌ಸಿಸಿ ಕೆಡೆಟ್‌ಗಳ ಭಾಗಿ - ಪು.4

ಆರ್‌ಎಸ್‌ಎಸ್ ವಿಜಯದಶಮಿ ಪಥಸಂಚಲನ: ಮಾಹಿತಿಯಷ್ಟೇ, ಅನುಮತಿಗಾಗಿ ಬರೆದ ಪತ್ರವಲ್ಲ: ಸಚಿವ ಖರ್ಗೆ - ಪು.5

ತುಂಗಭದ್ರಾ ಎಡದಂಡೆ ಕಾಲುವೆ ಕಾರ್ಮಿಕರಿಗೆ ಸೇರಬೇಕಿದ್ದ 1 ಕೋಟಿಗೂ ಅಧಿಕ ಕೂಲಿ ಹಣ ಗುಳುಂ - ಪು.6

# ಪ್ರತಿ ಮನೆಗೂ ಅಭಿವೃದ್ಧಿಯ ಬೆಳಕು ತಲುಪಿಸುವುದೇ ಸರ್ಕಾರದ ಸಂಕಲ್ಪ: ಡಿ.ಕೆ. ಶಿವಕುಮಾರ್

### ತೆಲಂಗಾಣ ಸಿಎಂ ರೇವಂತ್‌ರೆಡ್ಡಿ, ಕೇರಳಂ ಸಿಎಂ ವಿ.ಡಿ. ಸತೀಶನ್, ರಾಜವಂಶಸ್ಥ ಹಾಗೂ ಸಂಸದ ಯದುವೀರ ಒಡೆಯರ್ ಜತೆಗೂಡಿ ಜಂಬೂಸವಾರಿಗೆ ಚಾಲನೆ

**ಮೈಸೂರು, ಅ.21:** ನಾಡ ಹಬ್ಬ ದಸರಾ ಸಂದರ್ಭದಲ್ಲಿ ದ್ವೇಷ ದೂರವಾಗಿ, ಸಾಮರಸ್ಯ ಬೆಳೆಯಬೇಕು. ಅಭಿವೃದ್ಧಿಯ ಬೆಳಕು ಪ್ರತಿ ಮನೆಗೂ ತಲುಪಬೇಕು ಎಂಬುದು ನಮ್ಮ ಸಂಕಲ್ಪ. ಅನ್ಯಾಯ ಅಳಿಯಬೇಕು, ಸಮಾನತೆ ಬೆಳಗಬೇಕು. ಕಷ್ಟಗಳು ಕರಗಬೇಕು. ರೈತರು, ಯುವಕರ ಬದುಕು ಬೆಳಗಬೇಕು ಎಂದು ಸಿಎಂ ಡಿ.ಕೆ. ಶಿವಕುಮಾರ್ ಆಶಯ ವ್ಯಕ್ತಪಡಿಸಿದರು.

ಮೈಸೂರಿನಲ್ಲಿ ನಂದಿ ಧ್ವಜ ಪೂಜೆ ಬಳಿಕ ಹಾಗೂ ಮೈಸೂರು ವಿಮಾನ ನಿಲ್ದಾಣದ ಬಳಿ ಮಾಧ್ಯಮಗಳಿಗೆ ಶಿವಕುಮಾರ್ ಅವರು ಬುಧವಾರ ಪ್ರತಿಕ್ರಿಯೆ ನೀಡಿ,

ಇಂದು ನಂದಿ ಪೂಜೆ ಮಾಡಿ ದಸರಾ ಜಂಬು ಸವಾರಿಗೆ ಚಾಲನೆ ನೀಡಿದ್ದೇವೆ. ಇಂದು ನನ್ನ ಬದುಕಿನ ಅಮೂಲ್ಯವಾದ ಕ್ಷಣ. ನಾಡಿನ ಪ್ರಜಾಸೇವಕನಾಗಿ, ನಾನು ನನ್ನ ಸಹೋದ್ಯೋಗಿಗಳು ಈ ಐತಿಹಾಸಿಕ ಕ್ಷಣದಲ್ಲಿ ಭಾಗಿಯಾಗಿದ್ದೇವೆ. ರಾಜ್ಯದ ಜನರ ಆಶೀರ್ವಾದಿಂದ ಶಕ್ತಿ ದೇವತೆ ಚಾಮುಂಡೇಶ್ವರಿ ಮೇರವಣಿಗೆಯಲ್ಲಿ ಸಾಕ್ಷಿಯಾಗುವ ಅವಕಾಶ ಸಿಕ್ಕಿದೆ. ಈ ಅವಕಾಶ ನೀಡಿದ ನಾಡಿನ ಜನತೆಗೆ ಶಾಂತಿ, ಸುಖ, ನೆಮ್ಮದಿ ಸಿಗಲಿ ಎಂದು ತಾಯಿ ಚಾಮುಂಡಿ ಪಾದಕ್ಕೆ ನಮಿಸಿ ಪ್ರಾರ್ಥಿಸುವೆ ಎಂದರು.

ಕೊಪ್ಪಳದ ಶ್ರೀಗಳು ದಸರಾಗೆ ಚಾಲನೆ ನೀಡಿ, ಶುಭ ಹಾರೈಸಿದ್ದಾರೆ. ರಾಜ್ಯದಲ್ಲಿ ಮಳೆ, ಬೆಳೆ ಚೆನ್ನಾಗಿ ಆಗಬೇಕು ಎಂದು ತಾಯಿ ಚಾಮುಂಡಿ ಬಳಿ ಪ್ರಾರ್ಥಿಸಿದ್ದೇವೆ. ಪ್ರತಿ ನಿತ್ಯ ಲಕ್ಷಾಂತರ ಜನ ಈ ವೈಭವ ಕಣ್ತುಂಬಿಕೊಳ್ಳುತ್ತಿದ್ದಾರೆ. ತಾಯಿ ಆಶೀರ್ವಾದ ನಮ್ಮೆಲ್ಲರ ಶಕ್ತಿ, ಜನಸೇವೆಯೇ ನಮ್ಮ ಭಕ್ತಿ ಎಂದು ಹೇಳಿದರು.

ಇದು ಸರ್ಕಾರ ಅಥವಾ ರಾಜಮನೆತನಕ್ಕೆ ಸೇರಿದ ದಸರಾ ಮಾತ್ರವಲ್ಲ. ಪ್ರಜಾಪ್ರಭುತ್ವ ಬಂದ ಮೇಲೆ ಎಲ್ಲರ ಹಬ್ಬ. ರಾಜಮನೆತನಕ್ಕೆ ನೀಡಬೇಕಾದ ಗೌರವ ನೀಡಲಾಗುವುದು. ಕಲೆ ಸಾಹಿತ್ಯ, ಸಂಸ್ಕೃತಿಗೆ ಆದ್ಯತೆ ನೀಡಲಾಗಿದೆ. ಕನ್ನಡ ನಾಡಿನ ಅಭಿವೃದ್ಧಿಗೆ ಪಣ ತೊಟ್ಟಿದ್ದೇವೆ. ನೆರೆ ರಾಜ್ಯದ ಮುಖ್ಯಮಂತ್ರಿಗಳು ಈ ಐತಿಹಾಸಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ.

**ಸ್ಯಾಂಡಲ್‌ವುಡ್ ಕಲರವ:** ಇದೇ ಮೊದಲ ಬಾರಿಗೆ ಸ್ಯಾಂಡಲ್‌ವುಡ್‌ನ 100ಕ್ಕೂ ಹೆಚ್ಚು ಕಲಾವಿದರು ಮೈಸೂರು ದಸರಾದ ಜಂಬೂ ಸವಾರಿಯಲ್ಲಿ ಭಾಗವಹಿಸಿ ಗಮನ ಸೆಳೆದಿದ್ದಾರೆ. ಅಲ್ಲದೇ 11 ದೇಶಗಳ 60ಕ್ಕೂ ಹೆಚ್ಚು ರಾಯಭಾರಿಗಳು ಹಾಗೂ ರಾಜತಾಂತ್ರಿಕ ಅಧಿಕಾರಿಗಳು ಈ ಉತ್ಸವವನ್ನು ಕಣ್ತುಂಬಿಕೊಂಡರು. ಒಟ್ಟನಲ್ಲಿ 2026ರ ಮೈಸೂರು ದಸರಾ ಉತ್ಸವ ನಾಡಿನ ಸಂಸ್ಕೃತಿ, ಪರಂಪರೆ ಮತ್ತು ಭಕ್ತಿಯನ್ನು ಇಡೀ ಜಗತ್ತಿಗೆ ಪರಿಚಯಿಸುವಲ್ಲಿ ಯಶಸ್ವಿಯಾಗಿದೆ ಎಂದು ಹೇಳಬಹುದು.



## ಗಮನಸೆಳೆದ ಸ್ತಬ್ಧಚಿತ್ರಗಳು



ವಿಜಯದಶಮಿ ಮೆರವಣಿಗೆಯಲ್ಲಿ ವಿವಿಧ ಜಿಲ್ಲೆಗಳ 16, ಕೇಂದ್ರ ಸರ್ಕಾರದ 9, ರಾಜ್ಯಮಟ್ಟದ ವಿವಿಧ ಇಲಾಖೆಗಳು, ನಿಗಮ ಮಂಡಳಿಗಳ 11 ಸೇರಿದಂತೆ ಒಟ್ಟು 40 ಸ್ತಬ್ಧಚಿತ್ರಗಳು, ಹೆಸರಾಂತ 100ಕ್ಕೂ ಹೆಚ್ಚು ಕಲಾತಂಡಗಳು ಭಾಗವಹಿಸಿದ್ದವು. ಇದರೊಂದಿಗೆ ಗಜಪಡೆ, ಅಶ್ವಾರೋಹಿ ಪಡೆಗಳು, ಆನೆಗಾಡಿಗಳು ಪಾಲ್ಗೊಂಡು ದಸರಾ ಉತ್ಸವಕ್ಕೆ ಮೆರಗು ತಂದವು.ಎರಡು ಗಂಟೆಗಳ ಕಾಲ ನಡೆಯುವ ಸಾಹಸಮಯ, ರೋಮಾಂಚನಕಾರಿ ಸಾಹಸ ಪ್ರದರ್ಶನ, ಮೈನವೀರೇಳಿಸುವ ಬೈಕ್, ಅಶ್ವಾರೋಹಿ ಪಡೆಗಳ ಸಾಹಸ, ಡ್ರೋಣ್ ಶೋ ಮೂಲಕ 11 ದಿನಗಳ ನಾಡಹಬ್ಬಕ್ಕೆ ವಿದ್ಯುಕ್ತವಾಗಿ ತೆರೆ ಬೀಳಲಿದೆ.

## ನಂದಿ ಧ್ವಜಕ್ಕೆ ಪೂಜೆ ಸಲ್ಲಿಸಿದ್ದು ಅಮೂಲ್ಯ ಕ್ಷಣ

ನಂದಿಧ್ವಜಕ್ಕೆ ಪೂಜೆ ಸಲ್ಲಿಸಿದ ಬಳಿಕ ಮಾತನಾಡಿದ ಡಿ.ಕೆ. ಶಿವಕುಮಾರ್, ಇದು ತಮ್ಮ ಬದುಕಿನ ಅಮೂಲ್ಯ ಹಾಗೂ ಮರೆಯಲಾಗದ ದಿನ ಎಂದು ಸಂತಸ ವ್ಯಕ್ತಪಡಿಸಿದರು. ತಾಯಿ ಚಾಮುಂಡೇಶ್ವರಿಯ ಆಶೀರ್ವಾದದಿಂದ ಈ ಅವಕಾಶ ಸಿಕ್ಕಿದೆ. ಮಳೆ–ಬೆಳೆ ಚೆನ್ನಾಗಿ ಆಗಲಿ ಎಂದು ದೇವಿಯಲ್ಲಿ ಪ್ರಾರ್ಥಿಸಿದ್ದೇನೆ. ತಾಯಿಯ ಆಶೀರ್ವಾದವೇ ನಮಗೆ ದೊಡ್ಡ ಶಕ್ತಿ ಎಂದು ಹೇಳಿದರು. ದ್ವೇಷ ದೂರವಾಗಿ ಸಾಮರಸ್ಯ ನೆಲೆಸಲಿ–ಈ ಬಾರಿಯ ದಸರಾ ಸಂಭ್ರಮದ ಮೂಲಕ ಸಮಾಜದಲ್ಲಿ ದ್ವೇಷ ದೂರವಾಗಿ ಸಾಮರಸ್ಯ ನಿರ್ಮಾಣವಾಗಬೇಕು. ರಾಜ್ಯದ ವಿವಿಧ ವ್ಯವಸ್ಥೆಗಳಲ್ಲಿ ಇರುವ ಅನ್ಯಾಯಗಳು ನಿವಾರಣೆಯಾಗಬೇಕು. ಯುವಕರ ಭವಿಷ್ಯ ಉಜ್ವಲವಾಗಬೇಕು ಎಂದು ಮುಖ್ಯಮಂತ್ರಿ ಪ್ರಾರ್ಥಿಸಿದರು.





ದಸರಾದಲ್ಲಿ ಭಾಗವಹಿಸಿದ್ದ ತೆಲಂಗಾಣ ಸಿಎಂ ರೇವಂತ್ ರೆಡ್ಡಿ ಅವರಿಗೆ ಸಿಎಂ ಡಿ.ಕೆ. ಶಿವಕುಮಾರ್ ಅವರು ಶಾಲು ಹೊದಿಸಿ ಗೌರವಿಸಿದರು.

## ಎಲ್ಲಾ ರಾಜ್ಯಗಳ ನಡುವೆ ಸಾಮರಸ್ಯ ಅಗತ್ಯ

ನೆರೆ ರಾಜ್ಯಗಳ ಸಿಎಂಗಳ ಆಗಮನದಿಂದ ರಾಜ್ಯಗಳ ನಡುವಣ ಸಾಮರಸ್ಯ ವೃದ್ಧಿಯಾಗುತ್ತದೆಯೇ ಎಂದು ಕೇಳಿದಾಗ, ಖಂಡಿತಾ ಸಾಮರಸ್ಯ ಮೂಡುತ್ತದೆ. ಇಲ್ಲಿ ತೆಲುಗು, ಮಲಯಾಳಂ, ತಮಿಳು ಮಾತನಾಡುವ ಜನ ಇದ್ದಾರೆ. ಕಾವೇರಿ ನೀರು ಹರಿದು ಎಲ್ಲಾ ರಾಜ್ಯ ತಲುಪುತ್ತಿದೆ. ಈ ರಾಜ್ಯಗಳು ಸಹೋದರರಂತೆ ಸಾಮರಸ್ಯದಲ್ಲಿರಬೇಕು. ನೆರೆ ರಾಜ್ಯಗಳ ಟ್ಯಾಬ್ಲೋಗಳು ಕೂಡ ಇಲ್ಲಿಗೆ ಬಂದಿವೆ. ನಮ್ಮ ರಾಜ್ಯ ವಿಶ್ವವನ್ನೇ ಆಕರ್ಷಿಸುತ್ತಿದ್ದು, ಬೆಂಗಳೂರಿನಲ್ಲಿ 45 ಲಕ್ಷ ಜನ ಹೊರ ರಾಜ್ಯದವರಾಗಿದ್ದಾರೆ. ನಾವು ಎಲ್ಲರನ್ನು ಸ್ವೀಕರಿಸುತ್ತಿದ್ದೇವೆ. ದಸರಾ ವಿಶ್ವವಿಖ್ಯಾತವಾಗಿದ್ದು, ವಿದೇಶದಿಂದಲೂ ಜನ ಬಂದಿದ್ದಾರೆ. 13 ವಿದೇಶಿ ರಾಯಭಾರಿಗಳು ದಸರಾಗೆ ಆಗಮಿಸಿದ್ದಾರೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು. ಏರ್ ಶೋ, ಕಂಬಳ ಬಹಳ ಚೆನ್ನಾಗಿ ಆಗಿದೆ ಎಂದು ನಮ್ಮ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ತಿಳಿಸಿದ್ದಾರೆ. ಯಶಸ್ಸಿಗೆ ಎಲ್ಲರ ಸಹಕಾರ ಮುಖ್ಯ. ಇನ್ನು ಮುಂದೆ ನಡೆಯುವ ಕಾರ್ಯಕ್ರಮಗಳನ್ನು ನೋಡಿ, ಅಭಿಪ್ರಾಯವನ್ನು ತಿಳಿಸಿ. ಮಾಧ್ಯಮ ಪ್ರತಿನಿಧಿಗಳಿಗೆ ದಸರಾ ಒಳ್ಳೆಯದು ಮಾಡಲಿ. ನಿಮ್ಮ ಸಹಕಾರ ಇದಕ್ಕೆ ಬಹಳ ಮುಖ್ಯ ಎಂದು ಹೇಳಿದರು.

## ನಾಳೆ ಸಂಸತ್ ಆವರಣದಲ್ಲಿ ಕಿತ್ತೂರು ರಾಣಿ ಚನ್ನಮ್ಮ 202ನೇ ವಿಜಯೋತ್ಸವ



### ■ ಲೋಕಸಭಾಧ್ಯಕ್ಷ ಓಂ ಬಿರ್ಲಾ ಸೇರಿ ಹಲವು ಕೇಂದ್ರ ಸಚಿವರಿಗೆ ಸಚಿವ ವಿ.ಸೋಮಣ್ಣ ಆಹ್ವಾನ

**ನವದೆಹಲಿ, ಅ.21:** ಸಂಸದ ಹಾಗೂ ಕೇಂದ್ರ ಸಚಿವರಾದಾಗಿನಿಂದಲೂ ದೆಹಲಿಯಲ್ಲಿ ಕನ್ನಡದ ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದಕ್ಕೆ ವಿ. ಸೋಮಣ್ಣ ಪ್ರೇರಣೆ ನೀಡುತ್ತಿದ್ದಾರೆ. ಇದಕ್ಕೆ ಸಾಕ್ಷಿ ಎನ್ನುವಂತೆ ಅ.23ರಂದು ಸಂಸತ್ತಿನ ಪ್ರೇರಣಾ ಸ್ಥಳದಲ್ಲಿ ವೀರರಾಣಿ ಕಿತ್ತೂರು ಚನ್ನಮ್ಮ ಅವರ 202ನೇ ವಿಜಯೋತ್ಸವ ಆಯೋಜಿಸಿದ್ದಾರೆ. ಕಳೆದ 3 ವರ್ಷಗಳಿಂದಲೂ ಈ ಕಾರ್ಯಕ್ರಮ ಆಯೋಜಿಸುತ್ತಿರುವುದು ವಿಶೇಷ.

ಈ ಬಾರಿಯೂ ಸಹ ವೀರವನಿತೆ, ಸ್ವಾತಂತ್ರ್ಯ ಹೋರಾಟಗಾರ್ತಿ, ಕನ್ನಡದ ಹೆಮ್ಮೆಯ ವೀರನಾರಿ ರಾಣಿ ಚನ್ನಮ್ಮನವರ 202ನೇ ವರ್ಷದ ಜನ್ಮ ಜಯಂತಿ ಹಾಗೂ ವಿಜಯೋತ್ಸವವನ್ನು ಸಂಸತ್ತಿನ ಆವರಣದಲ್ಲಿನ ಪ್ರೇರಣಾ ಸ್ಥಳದಲ್ಲಿ ದಿನಾಂಕ 23.10.2026 ರಂದು ಬೆಳಿಗ್ಗೆ ಕೇಂದ್ರ ಸಚಿವ ವಿ. ಸೋಮಣ್ಣ ಅವರು ತಮ್ಮ ನೇತೃತ್ವದಲ್ಲಿ ಆಯೋಜಿಸಿದ್ದಾರೆ.

ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಲೋಕಸಭಾ ಸ್ಪೀಕರ್ ಓಂ ಬಿರ್ಲಾ, ಕೇಂದ್ರ ಸಚಿವರಾದ ಪ್ರಲ್ಹಾದ್ ಜೋಶಿ, ಎಚ್.ಡಿ. ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ, ಅಶ್ವಿನಿ ವೈಷ್ಣವ್, ಗಜೇಂದ್ರ ಸಿಂಗ್ ಶೇಖಾವತ್ ಹಾಗೂ ಸಿ.ಆರ್. ಪಾಟೀಲ್ ಅವರಿಗೆ ಖುದ್ದು ಆಹ್ವಾನ ನೀಡಿದ್ದೇನೆ. ರಾಜ್ಯದಿಂದಲೂ ವೀರರಾಣಿ ಚನ್ನಮ್ಮನವರ ಅಭಿಮಾನಿಗಳು, ಮಠಾಧೀಶರು ಮತ್ತು ದೆಹಲಿ ಕನ್ನಡಿಗರು ಕಾರ್ಯಕ್ರಮದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ ಎಂದು ಸೋಮಣ್ಣ ತಿಳಿಸಿದ್ದಾರೆ.

ಸಂಸತ್ತಿನ ಆವರಣದಲ್ಲಿ ಇಂತಹ ಮಹನೀಯರ ಜಯಂತಿಯನ್ನು ಆಚರಿಸಲು ಪ್ರತಿ ವರ್ಷವೂ ಅವಕಾಶವನ್ನು ಮಾಡಿಕೊಡುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹಾಗೂ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ರಾಜ್ಯದ ಜನತೆಯ ಪರವಾಗಿ ಸೋಮಣ್ಣ ಅಭಿನಂದನೆ ಸಲ್ಲಿಸಿದ್ದಾರೆ.

ವಿಶೇಷವಾಗಿ ಈ ಕಾರ್ಯಕ್ರಮದ ಯಶಸ್ಸಿಗೆ ಪ್ರತಿವರ್ಷವೂ ಕೈಜೋಡಿಸುತ್ತಿರುವ ಲೋಕಸಭೆ ಮತ್ತು ರೈಲ್ವೆ ಸಚಿವಾಲಯದ ಅಧಿಕಾರಿಗಳು ಹಾಗೂ ಸಿಬ್ಬಂದಿಗೂ ಕೇಂದ್ರ ಸಚಿವ ವಿ. ಸೋಮಣ್ಣ ಧನ್ಯವಾದ ಸಲ್ಲಿಸಿದ್ದಾರೆ.

# ಜ್ಞಾನೇಶ್ ಕುಮಾರ್‌ಗೆ ರಕ್ಷಣೆ ನೀಡುವ ಕಾನೂನು ರದ್ದುಗೊಳಿಸಿ



### ■ ಸಿಇಸಿ ಸ್ಥಾನದಿಂದ ತಕ್ಷಣ ವಜಾಗೊಳಿಸಿ: ಕೇಂದ್ರ ಸರ್ಕಾರಕ್ಕೆ ಮಲ್ಲಿಕಾರ್ಜುನ ಖರ್ಗೆ ಒತ್ತಾಯ

**ಬೆಂಗಳೂರು, ಅ.21:** ನರೇಂದ್ರ ಮೋದಿ ಸರ್ಕಾರ ಚುನಾವಣಾ ಆಯೋಗದ ಸ್ವಾಯತ್ತತೆಯನ್ನು ದುರ್ಬಲಗೊಳಿಸುತ್ತಿದೆ ಎಂದು ಆರೋಪಿಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ಚುನಾವಣಾ ಆಯುಕ್ತರಿಗೆ ಕಾನೂನು ರಕ್ಷಣೆ ನೀಡುವ 2023ರ ಕಾಯ್ದೆಯನ್ನು ರದ್ದುಗೊಳಿಸಬೇಕು ಹಾಗೂ ಜ್ಞಾನೇಶ್ ಕುಮಾರ್ ಅವರನ್ನು ತಕ್ಷಣವೇ ಹುದ್ದೆಯಿಂದ ವಜಾಗೊಳಿಸಬೇಕು ಹಾಗೂ ಮತ್ತೆ ಮತಪತ್ರ ಪದ್ಧತಿಗೆ ಮರಳಬೇಕು ಎಂದು ಒತ್ತಾಯಿಸಿದ್ದಾರೆ.

ಕಲಬುರಗಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಖರ್ಗೆ, ನೀವು ಸಂವಿಧಾನಕ್ಕಿಂತ ದೊಡ್ಡವರೇ" ಎಂದು ಪ್ರಶ್ನಿಸಿದರಲ್ಲದೇ ಸರ್ಕಾರವು ಚುನಾವಣಾ ಆಯುಕ್ತರನ್ನು ಹೊಣೆಗಾರಿಕೆಯಿಂದ ರಕ್ಷಿಸುತ್ತಿದೆ ಎಂದು ಆರೋಪಿಸಿದರು.

ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರ ಚುನಾವಣಾ ಆಯುಕ್ತರ (ನೇಮಕಾತಿ, ಸೇವೆಯ ಷರತ್ತುಗಳು ಮತ್ತು ಅಧಿಕಾರಾವಧಿ) ಕಾಯ್ದೆ, 2023' ಅನ್ನು ಉಲ್ಲೇಖಿಸಿದ ಖರ್ಗೆ, "ಚುನಾವಣಾ ಆಯುಕ್ತರಿಗೆ ರಕ್ಷಣೆ ನೀಡಲು ನೀವು ತಂದಿರುವ ಕಾನೂನನ್ನು ರದ್ದುಗೊಳಿಸಿ" ಎಂದು ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿದರು.

ಈ ಕಾಯ್ದೆಯು, ಚುನಾವಣಾ ಆಯುಕ್ತರು ತಮ್ಮ ಅಧಿಕೃತ ಕರ್ತವ್ಯಗಳನ್ನು ನಿರ್ವಹಿಸುವಾಗ ಕೈಗೊಂಡ ಕ್ರಮಗಳು ಅಥವಾ ಆಡಿದ ಮಾತುಗಳಿಗೆ ಸಂಬಂಧಿಸಿದಂತೆ, ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳಿಂದ ಅವರಿಗೆ ರಕ್ಷಣೆ ನೀಡುತ್ತದೆ. ಚುನಾವಣೆಗಳು ನಿಷ್ಪಕ್ಷಪಾತವಾಗಿ ಮತ್ತು ನ್ಯಾಯಯುತವಾಗಿ ನಡೆದರೆ, ಯಾರೇ ಗೆಲ್ಲಲಿ, ನಮಗೆ ಅಭ್ಯಂತರವಿಲ್ಲ. ಕಾಂಗ್ರೆಸ್ ಪಕ್ಷವೇ ಗೆಲ್ಲಬೇಕು ಅಥವಾ ನಿರ್ದಿಷ್ಟ ಪಕ್ಷವೊಂದೇ ಗೆಲ್ಲಬೇಕು ಎಂದು ಸಂವಿಧಾನದಲ್ಲಿ ಎಲ್ಲೂ ಹೇಳಿಲ್ಲ ಎಂದು ಹೇಳಿದರು.

ಯಾವುದೇ ವ್ಯಕ್ತಿ ಅಥವಾ ಪಕ್ಷಕ್ಕಾಗಿ ಅಲ್ಲ, ಬದಲಾಗಿ ಪ್ರಜಾಪ್ರಭುತ್ವವನ್ನು ರಕ್ಷಿಸಲು ಮತ್ತು ಸಾಂವಿಧಾನಿಕ ಸಂಸ್ಥೆಗಳ ಘನತೆಯನ್ನು ಕಾಪಾಡಲು ವಿರೋಧ ಪಕ್ಷಗಳು ಹೋರಾಡುತ್ತಿವೆ. ಪ್ರಧಾನಿ ಮೋದಿ ಅವರಿಗೆ ವಿರೋಧ ಪಕ್ಷದ ನಾಯಕರು ಬರೆದ ಪತ್ರಗಳಿಗೆ ಅವರು ನೇರವಾಗಿ ಉತ್ತರಿಸದೆ, ಬೇರೆಯವರ ಮೂಲಕ ಉತ್ತರ ಕೊಡಿಸುತ್ತಿದ್ದಾರೆ ಎಂದು ಖರ್ಗೆ ಟೀಕಿಸಿದರು.

**ಅ.24ರಂದು ಇಂಡಿಯಾ ಒಕ್ಕೂಟ ಸಭೆ:** ಅಕ್ಟೋಬರ್ 24ರಂದು ಇಂಡಿಯಾ ಒಕ್ಕೂಟದ ಸಭೆ ನಡೆಯಲಿದ್ದು, ಮುಂದಿನ ಕಾರ್ಯಕ್ರಮಗಳು ಹಾಗೂ ಹೋರಾಟಗಳ ಕುರಿತು ಚರ್ಚಿಸಲಾಗುವುದು ಎಂದು ಖರ್ಗೆ ತಿಳಿಸಿದರು.

## ಕ್ಷೇತ್ರ ಮರುವಿಂಗಡಣೆ ಮಾಡದೆ ಮಹಿಳಾ ಮೀಸಲಾತಿ ಜಾರಿಗೊಳಿಸಿ

ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ಮಾಡದೆಯೇ ಮಹಿಳಾ ಮೀಸಲಾತಿಯನ್ನು ತಕ್ಷಣ ಜಾರಿಗೊಳಿಸಬೇಕು. ಮಹಿಳಾ ಮೀಸಲಾತಿ ಮಸೂದೆಗೆ ಕಾಂಗ್ರೆಸ್ ಸಂಪೂರ್ಣ ಬೆಂಬಲ ನೀಡಲಿದೆ ಎಂದು ಎಐಸಿಸಿ ಅಧ್ಯಕ್ಷ ಹಾಗೂ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಡಾ.ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಕೇಂದ್ರ ಸಚಿವ ಕಿರಣ್ ರಿಜಿಜು ಅವರು ಒಟ್ಟಿಗೆ ಕುಳಿತು ಚರ್ಚಿಸಲಿ. ರಿಜಿಜು ಅವರಿಗೆ ನಿಜವಾಗಿಯೂ ಅವರಿಗೆ ಸಂಪೂರ್ಣ ಅಧಿಕಾರವಿದ್ದರೆ, ನಾಳೆಯೇ ಮಹಿಳಾ ಮೀಸಲಾತಿ ಮಸೂದೆಯನ್ನು ಜಾರಿಗೊಳಿಸಲಿ. ಇದಕ್ಕೆ ಕಾಂಗ್ರೆಸ್ ಬೆಂಬಲ ನೀಡಲಿದೆ. ಈಗಾಗಲೇ ಈ ಮಸೂದೆಗೆ ಬೆಂಬಲ ನೀಡಿದ್ದೇವೆ. ಹಾಗಿರುವಾಗ ಕ್ಷೇತ್ರಗಳ ಮರುವಿಂಗಡಣೆಯ ನಂತರ ಮೀಸಲಾತಿ ಜಾರಿಗೊಳಿಸುವುದೇಕೆ ಎಂದು ಪ್ರಶ್ನಿಸಿದರು.

## ನ.1ರಿಂದ ಬೆಂಗಳೂರು–ಮುಂಬೈ ವಂದೇ ಭಾರತ್ ರೈಲು ಸೇವೆ ಆರಂಭ

**ಬೆಂಗಳೂರು, ಅ.21:** ಬಹುನಿರೀಕ್ಷಿತ ಬೆಂಗಳೂರು–ಮುಂಬೈ ವಂದೇ ಭಾರತ್ ಸ್ಲೀಪರ್ ರೈಲಿಗೆ ಕನ್ನಡ ರಾಜ್ಯೋತ್ಸವದ ದಿನವಾದ ನವೆಂಬರ್ 1ರಂದು ಚಾಲನೆ ಸಿಗಲಿದೆ. ದಕ್ಷಿಣ ಭಾರತದ ಮೊದಲ ಪ್ರೀಮಿಯಂ ರಾತ್ರಿ ಪ್ರಯಾಣದ ಈ ರೈಲು, ಬೆಂಗಳೂರಿನ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಮತ್ತು ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಸ್ ನಡುವೆ ಸಂಚರಿಸಲಿದೆ. ನವೆಂಬರ್ 2ರಿಂದ ರೈಲಿನ ನಿಯಮಿತ ಸಂಚಾರ ಆರಂಭವಾಗಲಿದ್ದು, ವಾರದಲ್ಲಿ ಆರು ದಿನ ಸಂಚರಿಸಲಿದೆ. ಈ ಕುರಿತು ರೈಲ್ವೆ ಮಂಡಳಿಯಿಂದ ಅಧಿಕೃತ ಅಧಿಸೂಚನೆ ಹೊರಬಿದ್ದಿದ್ದು, ಸಂಸದ ಪಿ ಸಿ ಮೋಹನ್ ತಿಳಿಸಿದ್ದಾರೆ. ತಾತ್ಕಾಲಿಕ ವೇಳಾಪಟ್ಟಿ ಪ್ರಕಾರ, ರೈಲು ರಾತ್ರಿ 7.50ಕ್ಕೆ ಬೆಂಗಳೂರಿನ ಎಸ್‌ಎಂವಿಟಿಯಿಂದ ಹೊರಟು, ಮರುದಿನ ಬೆಳಗ್ಗೆ 11.55ಕ್ಕೆ ಮುಂಬೈನ ಸಿಎಸ್‌ಎಂಟಿ ತಲುಪಲಿದೆ. ಹಿಂತಿರುಗುವಾಗ ರಾತ್ರಿ 8.10ಕ್ಕೆ ಮುಂಬೈನಿಂದ ಹೊರಟು, ಮರುದಿನ ಬೆಳಗ್ಗೆ 11.55ಕ್ಕೆ ಬೆಂಗಳೂರಿಗೆ ಆಗಮಿಸಲಿದೆ. ಬೆಂಗಳೂರು–ಮುಂಬೈ ನಡುವಿನ ಪ್ರಯಾಣಕ್ಕೆ 16 ಗಂಟೆ 5 ನಿಮಿಷ ಬೇಕಾಗಲಿದ್ದು, ಮುಂಬೈ–ಬೆಂಗಳೂರು ಪ್ರಯಾಣವು ಸ್ವಲ್ಪ ವೇಗವಾಗಿರಲಿದೆ. ಹಿಂತಿರುಗುವ ಪ್ರಯಾಣಕ್ಕೆ 15 ಗಂಟೆ 45 ನಿಮಿಷ ತಗುಲಲಿದೆ. ಅನಂತಪುರ, ಗುಂತಕಲ್, ರಾಯಚೂರು, ಕಲಬುರಗಿ, ಸೋಲಾಪುರ, ಪುಣೆ ಮತ್ತು ಕಲ್ಯಾಣ್ ನಿಲ್ದಾಣಗಳಲ್ಲಿ ನಿಲುಗಡೆ ನೀಡುವ ನಿರೀಕ್ಷೆಯಿದೆ.

# ಆರ್‌ಎಸ್‌ಎಸ್ ಮಹಿಳಾ ವಿರೋಧಿ, ಪುರುಷ ಪ್ರಧಾನ ಗುಂಪು



### ಮನುಸ್ಮೃತಿ ಆಧಾರಿತ ಮನಸ್ಥಿತಿಯು ಮಹಿಳಾ ಸಮಾನತೆಗೆ ವಿರುದ್ಧವಾಗಿದೆ: ರಾಹುಲ್ ಗಾಂಧಿ ವಾಗ್ದಾಳಿ

**ನವದೆಹಲಿ, ಅ.21:** ರಾಷ್ಟ್ರೀಯ ಸ್ವಯಂಸೇವಕ ಸಂಘ ಎಂದರೆ ಮಹಿಳಾ ವಿರೋಧಿ, ಸಂವಿಧಾನ ವಿರೋಧಿ ಪುರುಷ ಪ್ರಧಾನ ಗುಂಪು ಎಂದು ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ವಾಗ್ದಾಳಿ ನಡೆಸಿದ್ದಾರೆ.

ಈ ಸಂಬಂಧ ತಮ್ಮ ಎಕ್ಸ್ ಖಾತೆಯಲ್ಲಿ ಸಂದೇಶ ಹಂಚಿಕೊಂಡಿರುವ ಅವರು, ಆರ್‌ಎಸ್‌ಎಸ್ ಎನ್ನುವುದು ಕೇವಲ ಪುರುಷರಷ್ಟೇ ಇರುವ ಸಂವಿಧಾನ ವಿರೋಧಿ ಕೂಟ. ಅದು ಮಹಿಳೆಯರನ್ನು ಪುರುಷರ ಸ್ವತ್ತು ಅಥವಾ ಆಸ್ತಿ ಎಂದು ಭಾವಿಸುತ್ತದೆ. ಆದರೆ, ನಾನು ಶಿವ–ಶಕ್ತಿ ಸಿದ್ಧಾಂತದಲ್ಲಿ ಆಳವಾದ ನಂಬಿಕೆ ಹೊಂದಿದ್ದೇನೆ. ಇದೇ ಕಾರಣಕ್ಕೆ ಆರ್‌ಎಸ್‌ಎಸ್ ವಿರುದ್ಧ ಹೋರಾಡುವುದು ನನಗೆ ಅಪಾರ ಸಂತೋಷ ಕೊಡುತ್ತದೆ ಎಂದಿದ್ದಾರೆ.

ಅತ್ಯಂತ ವಿಶೇಷವೆಂದರೆ, ಆರ್‌ಎಸ್‌ಎಸ್‌ನಲ್ಲಿರುವ ಅನೇಕ ಮಹಿಳೆಯರು ಕೂಡ ಇಂದು ನನ್ನ ಹೋರಾಟಕ್ಕೆ ಬೆಂಬಲವಾಗಿ ನಿಂತಿದ್ದಾರೆ. ಆರ್‌ಎಸ್‌ಎಸ್‌ನ ಮನುಸ್ಮೃತಿ ಆಧಾರಿತ ಮನಸ್ಥಿತಿಯು ಮಹಿಳಾ ಸಮಾನತೆಗೆ ವಿರುದ್ಧವಾಗಿದೆ ಎಂದು ಹೇಳಿದ್ದಾರೆ.

ರಾಹುಲ್ ಗಾಂಧಿ ಅವರ ಈ ಹೇಳಿಕೆ ವಿರುದ್ಧ ಬಿಜೆಪಿಗರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮಹಾರಾಷ್ಟ್ರದ ಬಿಜೆಪಿ ಶಾಸಕ ರಾಮ್ ಕದಮ್ ಅವರು ರಾಹುಲ್ ಹೇಳಿಕೆಯನ್ನು ಬಾಲಿಶ ಎಂದಿದ್ದಾರೆ.

ವಿರೋಧ ಪಕ್ಷದ ನಾಯಕನಿಗೆ ಇಂತಹ ಜ್ಞಾನಹೀನ ಮಾತುಗಳು ಶೋಭಿಸುವುದಿಲ್ಲ. ಆರ್‌ಎಸ್‌ಎಸ್‌ನಲ್ಲಿ ರಾಷ್ಟ್ರ ಸೇವಿಕಾ ಸಮಿತಿ ಎಂಬ ಪ್ರತ್ಯೇಕ ಮಹಿಳಾ ವಿಭಾಗವಿದ್ದು, ದೇಶಾದ್ಯಂತ ಲಕ್ಷಾಂತರ ಮಹಿಳೆಯರು ಪುರುಷರಿಗೆ ಸಮಾನವಾಗಿ ರಾಷ್ಟ್ರ ನಿರ್ಮಾಣದಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ಹೇಳಿದ್ದಾರೆ.

ತೆಲಂಗಾಣ ಬಿಜೆಪಿ ಅಧ್ಯಕ್ಷ ಎನ್. ರಾಮಚಂದ್ರ ರಾವ್, ಕಾಂಗ್ರೆಸ್ ಪಕ್ಷದೊಳಗೇ ಎಷ್ಟು ಮಂದಿ ಮಹಿಳೆಯರಿಗೆ ಉನ್ನತ ನಾಯಕತ್ವದ ಸ್ಥಾನಗಳನ್ನು ನೀಡಲಾಗಿದೆ ಎಂಬುದನ್ನು ರಾಹುಲ್ ಮೊದಲು ಸ್ಪಷ್ಟಪಡಿಸಲಿ. ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳಲ್ಲಿ ಎಷ್ಟು ಮಂದಿ ಮಹಿಳಾ ಮುಖ್ಯಮಂತ್ರಿಗಳಿದ್ದಾರೆ ಆದರೆ, ಬಿಜೆಪಿಯು ದೇಶದ ರಾಜಧಾನಿಯಲ್ಲೇ ಮಹಿಳಾ ಮುಖ್ಯಮಂತ್ರಿಯನ್ನು ನೇಮಿಸಿದೆ ಎಂದಿದ್ದಾರೆ.

# ಭಾರತದ ಆಂತರಿಕ ವಿಚಾರದಲ್ಲಿ ಹಸ್ತಕ್ಷೇಪ ಮಾಡಲ್ಲ



### ಎಸ್‌ಐಆರ್ ವಿರೋಧಿ ಪ್ರತಿಭಟನೆ ಬಗ್ಗೆ ಪ್ರತಿಕ್ರಿಯಿಸಲು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೋ ರುಬಿಯೊ ನಕಾರ

**ನವದೆಹಲಿ, ಅ.21:** ಭಾರತದಲ್ಲಿ ನಡೆಯುತ್ತಿರುವ ಪ್ರತಿಭಟನೆಗಳ ಕುರಿತು ಪ್ರತಿಕ್ರಿಯಿಸಲು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ನಿರಾಕರಿಸಿದ್ದಾರೆ. ಇದು ಭಾರತದ ಆಂತರಿಕ ರಾಜಕೀಯ ವಿಷಯ" ಎಂದು ಸ್ಪಷ್ಟಪಡಿಸಿದ್ದಾರೆ. ಈ ವಿಚಾರದಲ್ಲಿ ಮಧ್ಯಪ್ರವೇಶಿಸಲು ನಿರಾಕರಿಸಿರುವ ಅವರು, ವಿಶ್ವಸಂಸ್ಥೆಯ ತಜ್ಞರ ಟೀಕೆಗಳನ್ನು ತಳ್ಳಿಹಾಕಿದ್ದಾರೆ.

ಅಧಿಕೃತ ಭೇಟಿಗಾಗಿ ಭಾರತದಲ್ಲಿರುವ ರೂಬಿಯೊ, ಎಸ್‌ಐಆರ್ ವಿರುದ್ಧ ಸಿಜೆಪಿ, ವಿರೋಧ ಪಕ್ಷಗಳು ನಡೆಸುತ್ತಿರುವ ಪ್ರತಿಭಟನೆಗಳ ಕುರಿತು ವಿಶ್ವಸಂಸ್ಥೆಯ ತಜ್ಞರು ವ್ಯಕ್ತಪಡಿಸಿರುವ ಟೀಕೆಗಳನ್ನು ಸಹ ಗಣನೆಗೆ ತೆಗೆದುಕೊಂಡಿಲ್ಲ. ಬುಧವಾರ ಅಮೆರಿಕದ ವಿದೇಶಾಂಗ ಇಲಾಖೆ ಬಿಡುಗಡೆ ಮಾಡಿದ ಹೇಳಿಕೆಯ ಪ್ರಕಾರ, ವಿಶ್ವಸಂಸ್ಥೆಯ "ತಜ್ಞರು" ಎಂಬ ಪದಪ್ರಯೋಗವೇ ಒಂದು ವಿರೋಧಾಭಾಸ ಎಂದು ರುಬಿಯೊ ಅಭಿಪ್ರಾಯಪಟ್ಟಿದ್ದಾರೆ.

ಭಾರತದಲ್ಲಿ ವಿರೋಧ ಪಕ್ಷಗಳು ಮತ್ತು ವಿದ್ಯಾರ್ಥಿಗಳು ನಡೆಸುತ್ತಿರುವ ಪ್ರತಿಭಟನೆಗಳ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಇದು ಆಂತರಿಕ ರಾಜಕೀಯ ವಿಷಯ. ನಾನು ಅವರ ರಾಜಕೀಯದಲ್ಲಿ ಮಧ್ಯಪ್ರವೇಶಿಸುವುದಿಲ್ಲ. ಇದೊಂದು ಪ್ರಜಾಪ್ರಭುತ್ವ ರಾಷ್ಟ್ರ. ಇಲ್ಲಿ ಚುನಾವಣೆಗಳು ನಡೆಯುತ್ತವೆ, ಆದ್ದರಿಂದ ಅವರ ಆಂತರಿಕ ರಾಜಕೀಯ ವಿಷಯಗಳ ಬಗ್ಗೆ ನಾನು ಯಾವುದೇ ಅಭಿಪ್ರಾಯ ನೀಡುವುದಿಲ್ಲ ಎಂದು ಹೇಳಿದ್ದಾರೆ.

ಅಮೆರಿಕದಲ್ಲೂ ಪ್ರತಿದಿನ ಪ್ರತಿಭಟನೆಗಳು ನಡೆಯುತ್ತಿರುತ್ತವೆ ಮತ್ತು ಇವು ಅಲ್ಲಿನ ರಾಜಕೀಯ ಚರ್ಚೆಗಳು ಹಾಗೂ ಭಿನ್ನಾಭಿಪ್ರಾಯಗಳನ್ನು ಪ್ರತಿಬಿಂಬಿಸುತ್ತವೆ. ಜನರು ಪ್ರತಿಭಟನೆಗಳನ್ನು ನಡೆಸುತ್ತಾರೆ. ಆದರೆ ನಾನು ಇಲ್ಲಿ ಗಲಭೆಗಳ ಬಗ್ಗೆ ಮಾತನಾಡುತ್ತಿಲ್ಲ ಯುರೋಪ್‌ನಲ್ಲಿ ಕಾಣುತ್ತಿರುವಂತೆ, ಅಲ್ಲಿ ಜನರು ದಾಂಧಲೆ ನಡೆಸುವುದು, ವಸ್ತುಗಳನ್ನು ಒಡೆಯುವುದು ಮತ್ತು ಕಟ್ಟಡಗಳಿಗೆ ಬೆಂಕಿ ಹಚ್ಚುವಂತಹ ಘಟನೆಗಳು ಅಮೆರಿಕದಲ್ಲಿ ನಡೆಯುತ್ತಿಲ್ಲ ಎಂದರು.

ಜನರು ಮುಕ್ತವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿರುವುದು, ಆ ದೇಶದಲ್ಲಿ ರಾಜಕೀಯ ಚರ್ಚೆಗಳು ಮತ್ತು ಭಿನ್ನಾಭಿಪ್ರಾಯಗಳಿಗೆ ಅವಕಾಶವಿದೆ ಎಂಬುದರ ಸಂಕೇತವಾಗಿದೆ. ಇದನ್ನು ನಿರ್ಧರಿಸುವುದು ಮತ್ತು ನಿಭಾಯಿಸುವುದು ಭಾರತದ ಜನರಿಗೆ ಬಿಟ್ಟ ವಿಷಯ ಎಂದಿದ್ದಾರೆ.

# ತುಳು ಸಂಘ ಬರೋಡದಲ್ಲಿ ಕುರಲ್ ಪರ್ಬ

## ಸಂಸ್ಕೃತಿಯನ್ನು ಹೊಸ ತಲೆಮಾರು ಸುರಕ್ಷಿತವಾಗಿಸಬೇಕು : ದಯಾನಂದ ಬೋಂಟ್ರ






ಬರೋಡ (ಗುಜರಾತ್), ಅ.20: ತುಳುನಾಡಿನ ಹಿರಿಯರ ಜೀವಪರ ಸಂಪ್ರದಾಯಗಳನ್ನು ಬಿಂಬಿಸುವ ಕುರಲ್ ಪರ್ಬ ನಮ್ಮ ಸಮುದಾಯದ ಐಕ್ಯತೆ, ಧನ್ಯತಾ ಭಾವ ಮತ್ತು ಕೃಷಿ ಸಂಸ್ಕೃತಿಯ ಪ್ರತೀಕವಾಗಿದೆ. ಇದು ಕೇವಲ ಧಾರ್ಮಿಕ ಆಚರಣೆಯಲ್ಲದೆ, ಪ್ರಕೃತಿಯೊಂದಿಗೆ ನಾವು ಹೊಂದಿರುವ ಅವಿನಾಭಾವ ಸಂಬಂಧವನ್ನು ಗಟ್ಟಿಗೊಳಿಸುವ ಸಾಂಸ್ಕೃತಿಕ ಆಸ್ತಿಯಾಗಿದೆ. ಆಧುನಿಕ ಧಾವಂತದ ಬದುಕಿನಲ್ಲಿ ಯುವ ಪೀಳಿಗೆಯು ತಮ್ಮ ಮೂಲ ಬೇರುಗಳು ಹಾಗೂ ಕೃಷಿ ಸಂಪ್ರದಾಯಗಳಿಂದ ದೂರ ಉಳಿಯುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ಇಂತಹ ಮಹತ್ವದ ಸಾಂಪ್ರದಾಯಿಕ ಹಬ್ಬಗಳನ್ನು ಯುವಜನರಿಗೆ ಪರಿಚಯಿಸುವುದರಿಂದ ನಮ್ಮ ಪ್ರಾದೇಶಿಕ ಅಸ್ಮಿತೆ, ಭಾಷೆ ಮತ್ತು ಸಂಸ್ಕೃತಿಯು ಮುಂದಿನ ತಲೆಮಾರಿಗೆ ಸುರಕ್ಷಿತವಾಗಿ ವರ್ಗಾವಣೆಗೊಳ್ಳಲು ಸಾಧ್ಯವಾಗುತ್ತದೆ ಎಂದು ತುಳು ಸಂಘ ಬರೋಡಾ ಇದರ ಗೌರವಾಧ್ಯಕ್ಷ ದಯಾನಂದ ಬೋಂಟ್ರ ಬೆಳ್ಮಣ್ ತಿಳಿಸಿದರು.

ಗುಜರಾತ್‌ನ ಬರೋಡದ ಇಂಡಿಯಾ ಬುಲ್ಸ್ ಮೆಘಾ ಮಾಲ್‌ನಲ್ಲಿನ ತುಳು ಚಾವಡಿಯಲ್ಲಿ ಇಂದಿಲ್ಲಿ ದಸರೋತ್ಸವದ ಶುಭಾವಸರದಲ್ಲಿ ತುಳು ಸಂಘ ಬರೋಡಾ ಸಂಘವು ತುಳುನಾಡ ವೈಶಿಷ್ಟ್ಯಮಯ ಸಾಂಪ್ರದಾಯಿಕ ಕುರಲ್ ಪರ್ಬ (ಪುದ್ದಾರ್) ತೆನೆ ಹಬ್ಬವನ್ನು ಧಾರ್ಮಿಕ ಪೂಜಾಧಿಗಳೊಂದಿಗೆ ನೆರವೇರಿಸಿದ್ದು ಸಭಾಧ್ಯಕ್ಷತೆಯಲ್ಲಿ ವಹಿಸಿ ದಯಾನಂದ ಬೋಂಟ್ರ ಮಾತನಾಡಿದರು.

ತುಳು ಸಂಘ ಬರೋಡಾದ ಅಧ್ಯಕ್ಷ ಶಶಿಧರ್ ಬಿ.ಶೆಟ್ಟಿ ಗುರುವಾಯನಕೆರೆ ಅವರ ಮಾರ್ಗದರ್ಶನದಲ್ಲಿ ವರ್ಷಂಪ್ರತಿಯಂತೆ ಈ ಬಾರಿಯೂ ತುಳುನಾಡ ಧಾರ್ಮಿಕ ಆಚರಣೆ ಕುರಲ್ ಪರ್ಬ (ಕೊರಲ್ ಪಾಡುನ ಪರ್ಬ) ಆಚರಿಸಿದ್ದು ಸಾಂಪ್ರದಾಯಿಕ ಉಡುಪುಗಳನ್ನು ಧರಿಸಿ ಉತ್ಸುಕರೆನಿಸಿ ಸಿದ್ಧರಾದ ಸದಸ್ಯರು ಮತ್ತು ಮಕ್ಕಳು ತೆನೆಯನ್ನು ಚಾವಡಿಯೊಳಗೆ ಬರಮಾಡಿ ಕೊಂಡರು.

ಕಾರ್ಯಕ್ರಮದ ವೇದಿಕೆಯಲ್ಲಿ ಉದ್ಯಮಿ ಸುಧಾಕರ್ ಶೆಟ್ಟಿ (ಸುಧಾ ಹೊಟೇಲ್ ಬರೋಡಾ), ಸಂಘದ ಗೌರವ ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣ ಎ.ಶೆಟ್ಟಿ, ಗೌರವ ಪ್ರಧಾನ ಕೋಶಾಧಿಕಾರಿ ಪಿ.ಬಾಲಚಂದ್ರ ಗೌಡ, ಮಹಿಳಾ ವಿಭಾಗದ ಕಾರಾಧ್ಯಕ್ಷೆ ಡಾ| ಶರ್ಮಿಳಾ ಎಂ.ಜೈನ್ ವೇದಿಕೆಯಲ್ಲಿದ್ದು ಸಂಘದ ಸದಸ್ಯರ ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಪ್ರದಾನಿಸಿ ಅಭಿನಂದಿಸಿದರು ಹಾಗೂ ಕೊಡುಗೈದಾನಿಗಳಿಗೆ ಗೌರವಿಸಿ ಅಭಿವಂದಿಸಿದರು.

ವರ್ಷದ ಹೊಸ ಸಾಗುವಳಿಯಿಂದ ಬೆಳೆಸಿದ ವರ್ಷದ ಹೊಸ ಭತ್ತದ ತೆನೆಯನ್ನು ಕೃಷಿ ಪ್ರಧಾನವಾಗಿ ಬೆಳೆದ ಪೈರು, ದವಸಧಾನ್ಯ, ಫಲಪುಷ್ಪ, ಕಾಯಿಪಲ್ಯ, ಬೆಳೆಗಳನ್ನು ಸುಧಾಕರ್ ಶೆಟ್ಟಿ ಅವರು ಸಾಂಪ್ರದಾಯಿಕ ಪದ್ಧತಿಯಂತೆ ಶ್ರದ್ಧಾಪೂರ್ವಕವಾಗಿ ಚಾವಡಿಯೊಳಗೆ ಹೊತ್ತುತಂದರು. ಫಲಪುಷ್ಪಗಳಿಂದ ಸಿಂಗಾರಿಸಿದ ದೇವರ ಮಂಟದ ಮುಂದೆ ಕದಿರು (ತೆನೆ), ಕಾಯಿಪಲ್ಯ, ಫಲಗಳಿಗೆ ದಯಾನಂದ ಬೋಂಟ್ರ ಅವರು ಸೀಯಾಳ, ಕ್ಷೀರ ಅಭಿಷೇಕಗೈದು ಪ್ರಾರ್ಥನೆ ನೆರವೇರಿಸಿ ಕದಿರೆ ಕಟ್ಟಿ ಪ್ರಕೃತಿಮಾತೆಯನ್ನು ಸ್ಮರಿಸಿ ಉಪಸ್ಥಿತ ಸದಸ್ಯರು ತುಳುನಾಡ ಆಚರಣೆಯಂತೆ ತೆನೆಹಬ್ಬ ಆಚರಿಸಿದರು.

ಮುಂದಿನ ದಿನಗಳಲ್ಲಿ ಇಂತಹ ಸಮುದಾಯದ ಪ್ರಮುಖ ಕಾರ್ಯಕ್ರಮಗಳನ್ನು ಇನ್ನಷ್ಟು ವ್ಯವಸ್ಥಿತವಾಗಿ ಆಯೋಜಿಸುವುದು, ದಾಖಲೀಕರಣ ಮಾಡುವುದು ಹಾಗೂ ತುಳು ಸಂಘ–ಸಂಸ್ಥೆಗಳ ಸಹಯೋಗದೊಂದಿಗೆ ಸಾಂಸ್ಕೃತಿಕ ಪರಂಪರೆಯನ್ನು ಜಾಗತಿಕ ಮಟ್ಟದಲ್ಲಿ ಪಸರಿಸುವುದು ಅತ್ಯಗತ್ಯವಾಗಿದೆ. ಇದಕ್ಕೆ ಎಲ್ಲರ ಸಕ್ರಿಯ ಪಾಲ್ಗೊಳ್ಳುವಿಕೆ ಮತ್ತು ಸಂಘಟಿತ ಪ್ರಯತ್ನದ ಅವಶ್ಯಕತೆಯಿದೆ ಎಂದು ಸಂಘದ ಗೌ| ಪ್ರ| ಕಾರ್ಯದರ್ಶಿ ಬಾಲಕೃಷ್ಣ ಎ.ಶೆಟ್ಟಿ ಪ್ರಸ್ತಾವನೆಯಲ್ಲಿ ತಿಳಿಸಿದರು.

ಮದನ್‌ಕುಮಾರ್ ಮೂಡಿಗೆರೆ ಮತ್ತು ಕಾರ್ತಿಕ್ ಗೌಡ ಮೂಡಿಗೆರೆ ಅವರ ಪ್ರಧಾನ ಸಂಯೋಜನೆಯಲ್ಲಿ ಆಯೋಜಿತ ಕಾರ್ಯಕ್ರಮದಲ್ಲಿ ವಿನೋದಾ ಸುಧಾಕರ್‌ಶೆಟ್ಟಿ, ಕೃಷ್ಣಶೆಟ್ಟಿ, ಪ್ರಮೀಳಾ ಶೆಟ್ಟಿ, ಕೆ.ಮಾಧವಶೆಟ್ಟಿ, ದಿನಕರ್‌ಶೆಟ್ಟಿ, ಪ್ರಶಾಂತ್ ಬಿ.ಶೆಟ್ಟಿ, ದಯಾನಂದ್ ಸಾಲ್ಯಾನ್, ಕವಿತಾ ಗೌಡ, ಮನೋರಿಶೆಟ್ಟಿ, ಜಯಶ್ರೀ ಜಿನರಾಜ್ ಪೂಜಾರಿ, ಕವಿತಾಗೌಡ, ಗಾನವಿ ಎಂ.ಗೌಡ, ಶಕುಂತಳಾ ಶೆಟ್ಟಿ, ಪ್ರಭಾ ಶೆಟ್ಟಿ ಪ್ರಧಾನವಾಗಿದ್ದರು.

ಅಪಾರ ಸಂಖ್ಯೆಯ ಸದಸ್ಯರು ಉಪಸ್ಥಿತರಿದ್ದು, ಮಹಿಳಾ ಮಂಡಳಿ ಭಜನೆಯನ್ನಾಡಿದರು. ತೆನೆಗೆ ಆರತಿಗೈದು

ಬಳಿಕ ಹೊಸ ಭತ್ತದ ಅಕ್ಕಿಯೊಂದಿಗೆ ಹೊಸ ಅಕ್ಕಿ ಅನ್ನ, ಪಾಯಸ, ಬಗೆಬಗೆಯ ಪಲ್ಯಗಳೊಂದಿಗೆ ರುಚಿಕರ ಶುದ್ಧ ಶಾಖಾಹಾರಿ ಭೋಜನದೊಂದಿಗೆ ತುಳುವವರ ವೈಶಿಷ್ಟ್ಯದ ತೆನೆಹಬ್ಬ ಆಚರಿಸಲಾಯಿತು.

ಮಹಿಳೆಯರು ಪ್ರಾರ್ಥನೆಯನ್ನಾಡಿದರು. ಬಾಲಕೃಷ್ಣ ಎ.ಶೆಟ್ಟಿ ಕಾರ್ಯಕ್ರಮ ನಿರೂಪಿಸಿ ಪ್ರತಿಭಾನ್ವಿತರ ಪಟ್ಟಿ ವಾಚಿಸಿದರು. ಡಾ| ಶರ್ಮಿಳಾ ಎಂ.ಜೈನ್ ಸ್ವಾಗತಿಸಿ ಸಾಂಸ್ಕೃತಿಕ ಮೌಲ್ಯ, ಆಚರಣೆಯ ಅಗತ್ಯ, ತುಳುನಾಡ ಸಂಸ್ಕೃತಿಯ ಭವಿಷ್ಯದ ದೃಷ್ಟಿಕೋನ ಮತ್ತು ಯುವ ಜನಾಂಗದ ಸಹಕಾರ, ಮುನ್ನಡೆ ಬಗ್ಗೆ ಆಶಯ ವ್ಯಕ್ತ ಪಡಿಸಿ ಆಭಾರ ಮನ್ನಿಸಿದರು.

# ರಿಟ್ ಅರ್ಜಿ ಹಿಂಪಡೆದ ಸಿಜೆಪಿ




ನವದೆಹಲಿ, ಅ.21: ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧ ಪ್ರತಿಭಟನೆ ನಡೆಸಿದ ಪ್ರಕರಣದಲ್ಲಿ ತಮ್ಮ ನ್ಯಾಯಾಂಗ ಬಂಧನವನ್ನು ಎರಡು ದಿನಗಳ ಕಾಲ ವಿಸ್ತರಿಸಿದ್ದನ್ನು ಪ್ರಶ್ನಿಸಿ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ಸಹ–ಸಂಚಾಲಕರಾದ ಸೌರವ್ ದಾಸ್ ಮತ್ತು ಆಶುತೋಷ್ ರಾಂಕಾ ಅವರು ದೆಹಲಿ ಹೈಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿಯನ್ನು ಬುಧವಾರ ಹಿಂಪಡೆದಿದ್ದಾರೆ. ಅರ್ಜಿದಾರರು ಲಭ್ಯವಿರುವ ಪರ್ಯಾಯ ಕಾನೂನು ಪರಿಹಾರಗಳನ್ನು ಏಕೆ ಬಳಸಿಕೊಂಡಿಲ್ಲ ಎಂದು ನ್ಯಾಯಾಲಯವು ತಾಂತ್ರಿಕ ಪ್ರಶ್ನೆಗಳನ್ನು ಎತ್ತಿದ ಹಿನ್ನೆಲೆಯಲ್ಲಿ ಈ ಬೆಳವಣಿಗೆ ನಡೆದಿದೆ.

ವಿಶೇಷ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ (ಎಸ್‌ಇಎಂ) ಅಕ್ಟೋಬರ್ 19 ರಂದು ಹೊರಡಿಸಿದ್ದ ಬಂಧನ ವಿಸ್ತರಣೆ ಆದೇಶದ ವಿರುದ್ಧ ನೇರವಾಗಿ ಹೈಕೋರ್ಟ್‌ಗೆ ಬಂದಿದ್ದನ್ನು ನ್ಯಾಯಮೂರ್ತಿ ಸುಬ್ರಮಣಿಯಂ ಪ್ರಸಾದ್ ಅವರಿದ್ದ ಪೀಠವು ಪ್ರಶ್ನಿಸಿತು. ಎಸ್‌ಇಎಂ ನ್ಯಾಯಾಲಯದಲ್ಲಿ ಬುಧವಾರ ಮಧ್ಯಾಹ್ನ ನಡೆದ ವಿಚಾರಣೆಯ ಫಲಿತಾಂಶಕ್ಕಾಗಿ ಕಾಯುವಂತೆ ಮುಖಂಡರಿಗೆ ಸೂಚಿಸಿದ ಪೀಠವು, ಅರ್ಜಿಯನ್ನು ವಾಪಸ್ ಪಡೆಯಲು ಅನುಮತಿ ನೀಡಿತ್ತು.

ವಿಚಾರಣೆ ವೇಳೆ ನ್ಯಾಯಮೂರ್ತಿಗಳು ಅರ್ಜಿದಾರರಿಗೆ ಮೌಖಿಕವಾಗಿ ಸಲಹೆ ನೀಡಿ, ಈ ಅರ್ಜಿಯನ್ನು ಹಿಂಪಡೆದು, ಮಧ್ಯಾಹ್ನ 2 ಗಂಟೆಗೆ ಎಸ್‌ಇಎಂ ಮುಂದೆ ಏನಾಗುತ್ತದೆ ಎಂಬುದನ್ನು ಕಾದುನೋಡಿ, ನಂತರ ಕಾನೂನಿನ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳುವುದು ಸೂಕ್ತವಲ್ಲವೇ ಎಂದು ತಿಳಿಸಿದರು. ಇದೇ ವೇಳೆ, ಈ ರಿಟ್ ಅರ್ಜಿಯ ಗುಣಾವಗುಣಗಳ (ಮೆರಿಟ್ಸ್) ಬಗ್ಗೆ ತಾನು ಯಾವುದೇ ಅಭಿಪ್ರಾಯ ಅಥವಾ ಅವಲೋಕನವನ್ನು ವ್ಯಕ್ತಪಡಿಸಿಲ್ಲ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

# ರಾಷ್ಟ್ರವ್ಯಾಪಿ ಮಾದಕ ವಸ್ತುಗಳ ವಿರುದ್ಧ ಹೋರಾಟ ಜಾಗೃತಿ ಅಭಿಯಾನದಲ್ಲಿ ಎನ್‌ಸಿಸಿ ಕೆಡೆಟ್‌ಗಳ ಭಾಗಿ




ಕಲಂಗುಟೆ, ಅ.21: ಗೋವಾದ ಕಲಂಗುಟೆಯಲ್ಲಿ ಅಕ್ಟೋಬರ್ 20, 2026 ರಂದು ಗೋವಾ ಪೊಲೀಸರು ಆಯೋಜಿಸಿದ್ದ ಮಾದಕ ವಸ್ತುಗಳ ವಿರುದ್ಧ ಹೋರಾಟ ಎಂಬ ಸಾರ್ವಜನಿಕ ಜಾಗೃತಿ ಕಾರ್ಯಕ್ರಮದಲ್ಲಿ, 1 ಗೋವಾ ನೇವಲ್ ಯುನಿಟ್ ಎನ್‌ಸಿಸಿ ಮತ್ತು 1 ಗೋವಾ ಗರ್ಲ್ಸ್ ಬೆಟಾಲಿಯನ್ ಎನ್‌ಸಿಸಿಯ ಕೆಡೆಟ್‌ಗಳು ಭಾಗವಹಿಸಿದರು.

ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ 150ನೇ ಜನ್ಮದಿನಾಚರಣೆ ಮತ್ತು ರಾಷ್ಟ್ರೀಯ ಏಕತಾ ದಿವಸದ ಅಂಗವಾಗಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಇದು ಗುಜರಾತ್‌ನ ಏಕತಾ ನಗರದಲ್ಲಿ ಸಮಾಪ್ತಿಯಾಗಲಿರುವ ರಾಷ್ಟ್ರವ್ಯಾಪಿ ಮೋಟಾರ್‌ಸೈಕಲ್ ರ‍್ಯಾಲಿಯ ಒಂದು ಭಾಗವಾಗಿತ್ತು. ಗೋವಾ ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್ ಕೇಶವ್ ರಾಮ್ ಚೌರಾಸಿಯಾ, ಐಪಿಎಸ್ ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಕೇರಳ, ಲಕ್ಷದ್ವೀಪ ಮತ್ತು ಕರ್ನಾಟಕದ ಪೊಲೀಸ್ ಸಿಬ್ಬಂದಿ ಕೂಡ ಈ ಜಾಗೃತಿ ಅಭಿಯಾನದಲ್ಲಿ ಪಾಲ್ಗೊಂಡರು.

ಒಟ್ಟು 150 ಎನ್‌ಸಿಸಿ ಕೆಡೆಟ್‌ಗಳು ಮಾದಕ ವಸ್ತುಗಳ ದುರುಪಯೋಗದಿಂದ ಉಂಟಾಗುವ ಹಾನಿಕಾರಕ ಪರಿಣಾಮಗಳ ಕುರಿತಾದ ಜಾಗೃತಿ ಉಪನ್ಯಾಸದಲ್ಲಿ ಭಾಗವಹಿಸಿದರು ಮತ್ತು ಮಾದಕ ವಸ್ತು ಮುಕ್ತ ಸಮಾಜವನ್ನು ನಿರ್ಮಿಸುವ ಉದ್ದೇಶಕ್ಕೆ ಬೆಂಬಲ ನೀಡುವುದಾಗಿ ಪ್ರತಿಜ್ಞೆ ಮಾಡಿದರು.

ತಮ್ಮ ಸಕ್ರಿಯ ಭಾಗವಹಿಸುವಿಕೆಯ ಮೂಲಕ, ಎನ್ಸಿಸಿ ಕೆಡೆಟ್‌ಗಳು ಸಾಮಾಜಿಕ ಜವಾಬ್ದಾರಿ, ಯುವ ನಾಯಕತ್ವ ಮತ್ತು ರಾಷ್ಟ್ರ ನಿರ್ಮಾಣದ ಬಗೆಗಿನ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದರು. ಅಲ್ಲದೆ, ಮಾದಕ ವಸ್ತುಗಳ ಪಿಡುಗನ್ನು ಎದುರಿಸಲು ಸಾಮೂಹಿಕ ಪ್ರಯತ್ನ ಅತ್ಯಗತ್ಯ ಎಂಬ ಸಂದೇಶವನ್ನು ಬಲಪಡಿಸಿದರು.

# 17 ದಿನಗಳ ಜೆಎನ್‌ಯು ವಿದ್ಯಾರ್ಥಿಗಳ ಹೋರಾಟಕ್ಕೆ ಜಯ

ನವದೆಹಲಿ, ಅ.21: ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ವಿದ್ಯಾರ್ಥಿ ಸಂಘದ (ಜೆಎನ್‌ಯುಎಸ್‌ಯು) ಪದಾಧಿಕಾರಿಗಳ ಮೇಲಿದ್ದ ಅಮಾನತು ಆದೇಶವನ್ನು ಆಡಳಿತ ಮಂಡಳಿ ಹಿಂಪಡೆದಿದೆ. ಈ ಹಿನ್ನೆಲೆಯಲ್ಲಿ, ವಿದ್ಯಾರ್ಥಿಗಳು ನಡೆಸುತ್ತಿದ್ದ 17 ದಿನಗಳ ಸುದೀರ್ಘ ಉಪವಾಸ ಸತ್ಯಾಗ್ರಹವನ್ನು ಅಂತ್ಯಗೊಳಿಸಲಾಗಿದೆ.

ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಅದಿತಿ ಮಿಶ್ರಾ, ಉಪಾಧ್ಯಕ್ಷ ಕೆ. ಗೋಪಿಕಾ ಬಾಬು, ಪ್ರಧಾನ ಕಾರ್ಯದರ್ಶಿ ಸುನಿಲ್ ಯಾದವ್, ಜಂಟಿ ಕಾರ್ಯದರ್ಶಿ ದಾನಿಶ್ ಅಲಿ ಹಾಗೂ ಸಂಘದ ಮಾಜಿ ಅಧ್ಯಕ್ಷ ನಿತೀಶ್‌ಕುಮಾರ್ ಅವರ ಅಮಾನತು ಆದೇಶವನ್ನು ರದ್ದುಗೊಳಿಸಲಾಗಿದೆ.

ಕ್ಯಾಂಪಸ್ನ ಡಾ. ಬಿ.ಆರ್. ಅಂಬೇಡ್ಕರ್ ಕೇಂದ್ರ ಗ್ರಂಥಾಲಯಕ್ಕೆ ಪ್ರವೇಶಿಸಲು ಬಯೋಮೆಟ್ರಿಕ್ ವ್ಯವಸ್ಥೆ ಅಳವಡಿಸಿದ್ದನ್ನು ವಿರೋಧಿಸಿ ಕಳೆದ ವರ್ಷ ನಡೆದ ಪ್ರತಿಭಟನೆ ವೇಳೆ ಸಾರ್ವಜನಿಕ ಆಸ್ತಿಗೆ ಹಾನಿ ಮಾಡಿದ ಆರೋಪದ ಮೇಲೆ ಫೆಬ್ರವರಿ 8 ರಂದು ಈ ಐವರು ವಿದ್ಯಾರ್ಥಿಗಳನ್ನು ಅಮಾನತು ಮಾಡಲಾಗಿತ್ತು. ಅಲ್ಲದೆ, ತಲಾ 20,000 ದಂಡ ವಿಧಿಸಲಾಗಿತ್ತು. ಪ್ರಸ್ತುತ ಅಮಾನತು ಆದೇಶ ಹಿಂಪಡೆದಿದ್ದರೂ, ವಿದ್ಯಾರ್ಥಿಗಳು ವಿಧಿಸಲಾಗಿರುವ ದಂಡವನ್ನು ತಕ್ಷಣವೇ ಪಾವತಿಸುವಂತೆ ವಿವಿ ಸೂಚಿಸಿದೆ.

ಸಮಾಜ ವಿಜ್ಞಾನ ವಿಭಾಗದ ಡೀನ್ ವಿವೇಕ್



ಕುಮಾರ್ ಅವರು ಸೋಮವಾರ ವಿದ್ಯಾರ್ಥಿ ಪ್ರತಿನಿಧಿಗಳನ್ನು ಭೇಟಿಯಾಗಿ ಮಾತುಕತೆ ನಡೆಸಿದ ಬಳಿಕ ಈ ಬಿಕ್ಕಟ್ಟು ಶಮನವಾಗಿದೆ. ಪ್ರತಿಭಟನಾಕಾರರು ಆಡಳಿತ ಮಂಡಳಿಯ ಮುಂದಿಟ್ಟಿದ್ದ 13 ಪ್ರಮುಖ ಬೇಡಿಕೆಗಳ ಪೈಕಿ ಅಮಾನತು ಆದೇಶ ರದ್ದತಿಯೂ ಒಂದಾಗಿತ್ತು. ಇದರ ಜೊತೆಗೆ, ಪ್ರತಿಭಟನಾ ನಿರತ ವಿದ್ಯಾರ್ಥಿಗಳ ಮೇಲಿದ್ದ ಎಲ್ಲಾ ಎಫ್‌ಐಆರ್‌ಗಳನ್ನು ಹಿಂಪಡೆಯಲು ಮತ್ತು ಕಠಿಣ ದಂಡವನ್ನು ವಿಧಿಸಲು ಅವಕಾಶ ನೀಡುವ 2023ರ ಮುಖ್ಯ ಪ್ರೋಕ್ಟರ್ ಕಚೇರಿಯ ನಿಯಮಾವಳಿ ಕೈಪಿಡಿಯನ್ನು ಮರುಪರಿಶೀಲಿಸಲು ವಿಶ್ವವಿದ್ಯಾಲಯ ಒಪ್ಪಿಕೊಂಡಿದೆ.

ಪ್ರಸ್ತುತ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ನಡೆಸುವ ಪರೀಕ್ಷೆಗಳ ಆಧಾರದ ಮೇಲೆ ಪ್ರವೇಶ ಪ್ರಕ್ರಿಯೆ ನಡೆಯುತ್ತಿದ್ದು, ಇದರ ಬದಲಾಗಿ ಮರಳಿ ಜೆಎನ್‌ಯು ಪ್ರವೇಶ ಪರೀಕ್ಷೆಯನ್ನು ಜಾರಿಗೆ ತರುವ ಬಗ್ಗೆ ಪರಿಶೀಲಿಸಲು ಸಮಿತಿಯೊಂದನ್ನು ರಚಿಸಲು ಆಡಳಿತ ಮಂಡಳಿ ಸಮ್ಮತಿಸಿದೆ. ಈ ಸಮಿತಿಯಲ್ಲಿ ಜೆಎನ್‌ಯುಎಸ್‌ಯು ಪ್ರತಿನಿಧಿಯೂ ಇರಲಿದ್ದಾರೆ. ಸಮಾನ ಅವಕಾಶ ಕಚೇರಿಯ ಲೆಕ್ಕಪರಿಶೋಧನೆ, ಹಾಸ್ಟೆಲ್ ಮೀಸಲಾತಿಗೆ ಸಮಿತಿ ರಚನೆ, ವಿದ್ಯಾರ್ಥಿವೇತನದಲ್ಲಿ ಶೇ 25ರಷ್ಟು ಹೆಚ್ಚಳ ಹಾಗೂ ಎಲ್ಲಾ ಹಾಸ್ಟೆಲ್‌ಗಳ ನವೀಕರಣಕ್ಕೂ ವಿವಿ ಒಪ್ಪಿಗೆ ಸೂಚಿಸಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಕುಲಪತಿ ಶಾಂತಿಶ್ರೀ ಧೂಳಿಪುಡಿ ಪಂಡಿತ್, ನಮ್ಮ ಆಡಳಿತವು ಅತ್ಯಂತ ಪ್ರಜಾಸತ್ತಾತ್ಮಕ ಮತ್ತು ಮಾನವೀಯವಾಗಿದೆ. 20 ಲಕ್ಷ ಮೌಲ್ಯದ ಸಾರ್ವಜನಿಕ ಆಸ್ತಿಯನ್ನು ನಾಶಪಡಿಸಿದ್ದರೂ, ಅಮಾನತುಗೊಂಡ ವಿದ್ಯಾರ್ಥಿಗಳ ವಿರುದ್ಧ ನಾವು ಎಂದಿಗೂ ಕಠಿಣ ಕ್ರಮ ಕೈಗೊಂಡಿಲ್ಲ ಎಂದು ಸಮರ್ಥಿಸಿಕೊಂಡಿದ್ದಾರೆ. ಅಲ್ಲದೆ, ಜಾಮೀನು ಷರತ್ತುಗಳನ್ನು ಉಲ್ಲಂಘಿಸಿ ವಿದ್ಯಾರ್ಥಿಗಳು ಪ್ರತಿಭಟನೆಗಳಲ್ಲಿ ಭಾಗವಹಿಸಿದ್ದರು ಎಂದು ಅವರು ಆರೋಪಿಸಿದ್ದಾರೆ.

ಆಡಳಿತ ಮಂಡಳಿಯ ನಡೆಯ ಬಗ್ಗೆ ಪ್ರತಿಕ್ರಿಯಿಸಿರುವ ವಿದ್ಯಾರ್ಥಿ ಸಂಘವು, ಇದು ಭಿನ್ನಾಭಿಪ್ರಾಯವನ್ನು ಅಪರಾಧೀಕರಣಗೊಳಿಸುವ ಯತ್ನದ ವಿರುದ್ಧದ ಹೋರಾಟವಾಗಿತ್ತು. ವಿದ್ಯಾರ್ಥಿ ಸಮುದಾಯದ ಒಗ್ಗಟ್ಟಿನ ಬಲದ ಮುಂದೆ ಆಡಳಿತ ಮಂಡಳಿ ತಲೆಬಾಗಿದೆ. ಆಡಳಿತ ಮಂಡಳಿ ನೀಡಿರುವ ಭರವಸೆಗಳು ಕೇವಲ ಭರವಸೆಗಳಾಗಿಯೇ ಉಳಿಯಲು ಅಥವಾ ಅಧಿಕಾರಶಾಹಿ ವಿಳಂಬಕ್ಕೆ ತುತ್ತಾಗಲು ನಾವು ಬಿಡುವುದಿಲ್ಲ ಎಂದು ಎಚ್ಚರಿಕೆ ನೀಡಿದೆ.

# ಪಿಣರಾಯಿ ವಿರುದ್ಧದ ತನಿಖೆಗೆ 7 ದಿನ ಸುಪ್ರೀಂ ತಡೆ




ನವದೆಹಲಿ, ಅ. 21: ಕೊಚ್ಚಿನ್ ಮಿನರಲ್ಸ್ ಅಂಡ್ ರುಟೈಲ್ ಲಿಮಿಟೆಡ್ (ಸಿಎಂಆರ್‌ಎಲ್) ಮತ್ತು ಎಕ್ಸಾಲಾಜಿಕ್ ಕಂಪನಿ ನಡುವಿನ ಅಕ್ರಮ ಹಣಕಾಸು ವ್ಯವಹಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇರಳದ ಮಾಜಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹಾಗೂ ಇತರರ ವಿರುದ್ಧ ದಾಖಲಾಗಿರುವ ಎಫ್‌ಐಆರ್ ತನಿಖೆಗೆ ಸುಪ್ರೀಂ ಕೋರ್ಟ್ ಬುಧವಾರ ಏಳು ದಿನಗಳ ತಡೆಯಾಜ್ಞೆ ನೀಡಿದೆ.

ವಿಜಯನ್ ಅವರಲ್ಲದೆ ಅವರ ಪುತ್ರಿ ವೀಣಾ ಟಿ. ಮತ್ತು ಅಳಿಯ ಹಾಗೂ ಮಾಜಿ ಸಚಿವ ಮುಹಮ್ಮದ್ ರಿಯಾಸ್ ವಿರುದ್ಧವೂ ಕೇರಳದ ವಿಜಿಲೆನ್ಸ್ ಮತ್ತು ಭ್ರಷ್ಟಾಚಾರ ನಿಗ್ರಹ ದಳ ಎಫ್‌ಐಆರ್ ದಾಖಲಿಸಿತ್ತು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಜಾಯ್ಮಾಲ್ಯ ಬಗ್ಚಿ ಮತ್ತು ವಿ. ಮೋಹನಾ ಅವರಿದ್ದ ರಜಾಕಾಲದ ಪೀಠವು, ಅರ್ಜಿದಾರರು ಹೈಕೋರ್ಟ್‌ನ ವಿಭಾಗೀಯ ಪೀಠದಲ್ಲಿ ಮೇಲ್ಮನವಿ ಸಲ್ಲಿಸಲು ಹಾಗೂ ಕಾನೂನಿನ ಪ್ರಕಾರ ಮಧ್ಯಂತರ ರಿಲೀಫ್ ಪಡೆಯಲು ಅನುಕೂಲವಾಗುವಂತೆ ತನಿಖೆಗೆ ಈ ತಾತ್ಕಾಲಿಕ ತಡೆ ನೀಡಿದೆ.

ನಾವು ಹೈಕೋರ್ಟ್ ಆದೇಶವನ್ನು ಬದಿಗೊತ್ತಿ, ವಿಭಾಗೀಯ ಪೀಠದಲ್ಲಿ ಮೇಲ್ಮನವಿ ಸಲ್ಲಿಸಲು ಅರ್ಜಿದಾರರಿಗೆ ಅವಕಾಶ ನೀಡುತ್ತಿದ್ದೇವೆ. ಅಲ್ಲಿಯವರೆಗೆ ಎಫ್‌ಐಆರ್ ಕುರಿತ ಮುಂದಿನ ತನಿಖೆಯನ್ನು 7 ದಿನಗಳ ಮಟ್ಟಿಗೆ ತಡೆಹಿಡಿಯಲಾಗಿದೆ ಎಂದು ಸುಪ್ರೀಂ ಕೋರ್ಟ್ ಪೀಠ ತನ್ನ ಆದೇಶದಲ್ಲಿ ಸ್ಪಷ್ಟಪಡಿಸಿದೆ.

ಪಿಣರಾಯಿ ವಿಜಯನ್ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಅವರ ಪುತ್ರಿ ವೀಣಾ ಒಡೆತನದ ಐಟಿ ಕಂಪನಿ ಎಕ್ಸಾಲಾಜಿಕ್ ಸಲ್ಯೂಷನ್ಸ್‌ಗೆ ಕೊಚ್ಚಿ ಮೂಲದ ಸಿಎಂಆರ್‌ಎಲ್ ಕಂಪನಿಯು ಸಲಹಾ ಶುಲ್ಕದ ಹೆಸರಿನಲ್ಲಿ 3.28 ಕೋಟಿ ರೂ. ಗಳನ್ನು ಅಕ್ರಮವಾಗಿ ಪಾವತಿಸಿದೆ ಎಂಬ ಗಂಭೀರ ಆರೋಪವಿದೆ. ಈ ಕುರಿತು ಜಾರಿ ನಿರ್ದೇಶನಾಲಯ (ಇಡಿ) ನೀಡಿದ ವರದಿ ಹಾಗೂ ಶಿಫಾರಸಿನ ಆಧಾರದ ಮೇಲೆ, ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ವಿಜಯನ್ ಮತ್ತು ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಅ. 9 ರಂದು ಕೇರಳ ಹೈಕೋರ್ಟ್‌ನ ಏಕಸದಸ್ಯ ಪೀಠವು ರಾಜ್ಯ ಭ್ರಷ್ಟಾಚಾರ ನಿಗ್ರಹ ದಳಕ್ಕೆ ಆದೇಶಿಸಿತ್ತು.

ಈ ಆದೇಶ ಪ್ರಶ್ನಿಸಿ ವಿಜಯನ್ ಮತ್ತು ಇತರರು ಹೈಕೋರ್ಟ್ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಲು ಅನುಮತಿ ಕೋರಿದ್ದರಾದರೂ, ಅದನ್ನು ವಜಾಗೊಳಿಸಲಾಗಿತ್ತು. ಹೀಗಾಗಿ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ಸುಪ್ರೀಂ ಕೋರ್ಟ್‌ನಲ್ಲಿ ವಿಜಯನ್ ಪರ ವಾದ ಮಂಡಿಸಿದ ಹಿರಿಯ ವಕೀಲ ಸಿದ್ಧಾರ್ಥ್ ಲೂತ್ರಾ, ಹೈಕೋರ್ಟ್ ಆದೇಶದಂತೆ ಇದೀಗ ಏಕಾಏಕಿ ಎಫ್‌ಐಆರ್ ದಾಖಲಾಗಿರುವುದರಿಂದ 82 ವರ್ಷದ ವಯೋವೃದ್ಧರಿಗೆ (ವಿಜಯನ್) ಬಂಧನದ ಭೀತಿ ಎದುರಾಗಿದೆ. ಅವರಿಗೆ ರಕ್ಷಣೆ ನೀಡಬೇಕು ಎಂದು ವಾದಿಸಿದ್ದರು. ವಾದ ಆಲಿಸಿದ ಸುಪ್ರೀಂ ಕೋರ್ಟ್, ಕೇವಲ ಏಕಸದಸ್ಯ ಪೀಠದ ನಿರ್ದೇಶನದ ಮೇರೆಗೆ ತನಿಖೆ ಆರಂಭಿಸುವ ಪ್ರಕ್ರಿಯೆಯ ಬಗ್ಗೆ ತಾಂತ್ರಿಕ ಪ್ರಶ್ನೆಗಳನ್ನು ಎತ್ತಿ, ಪ್ರಕರಣವನ್ನು ಮರಳಿ ಹೈಕೋರ್ಟ್‌ನ ವಿಭಾಗೀಯ ಪೀಠದಲ್ಲಿ ಪ್ರಶ್ನಿಸಲು ಅರ್ಜಿದಾರರಿಗೆ ಕಾಲಾವಕಾಶ ಒದಗಿಸಿದೆ.

# ವಂ. ಕ್ಲೆಮೆಂಟ್ ಮಸ್ಕರೇನ್ಹಸ್‌ರಿಗೆ 22ನೇ ಕಲಾಕಾರ್ ಪುರಸ್ಕಾರ ಘೋಷಣೆ



ಮುಂಬಯಿ, ಅ.21; ಕಾರ್ವಾಲ್ ಮನೆತನ ಮತ್ತು ಮಾಂಡ್ ಸೊಭಾಣ್, ಪ್ರದರ್ಶನ ಕಲೆಗಳಲ್ಲಿ ಶ್ರೇಷ್ಠತೆ ಸಾಧಿಸಿದ ಕಲಾವಿದರಿಗೆ ನೀಡುವ, 22 ನೇ ವರ್ಷದ ಕಲಾಕಾರ್ ಪುರಸ್ಕಾರವನ್ನು ಸಂಗೀತಗಾರ, ಸ್ವರ ಸಂಯೋಜಕ, ಕಾರ್ಕಳ ಟೌನ್ ಇಗರ್ಜಿಯ ಧರ್ಮಗುರು ವಂ ಕ್ಲೆಮೆಂಟ್ ಮಸ್ಕರೇನ್ಹಸ್ ಇವರಿಗೆ ಘೋಷಿಸಲಾಗಿದೆ. ಭಕ್ತಿ ಸಂಗೀತಕ್ಕೆ ನೀಡಿದ ಅನನ್ಯ ಕೊಡುಗೆ ಮತ್ತು ಯುವಜನರಿಗೆ ಸಂಗೀತದಲ್ಲಿ ನೀಡಿದ ಪ್ರೋತ್ಸಾಹವನ್ನು ಗುರುತಿಸಿ ಈ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ. 2026 ನ.1 ಭಾನುವಾರ ಸಂಜೆ 6.00 ಗಂಟೆಗೆ ಶಕ್ತಿನಗರದ ಕಲಾಂಗಣದಲ್ಲಿ ಈ ಕಾರ್ಯಕ್ರಮ ನಡೆಯಲಿದ್ದು, ಅನಿವಾಸಿ ಉದ್ಯಮಿ ಮತ್ತು ಕೊಡುಗೈ ದಾನಿ ರೊನಾಲ್ಡ್ ಪಿಂಟೊ, ಅಬುಧಾಬಿ ಮುಖ್ಯ ಅತಿಥಿಯಾಗಿ ಹಾಗೂ ಗೌರವ ಅತಿಥಿಯಾಗಿ ಭಾಷಾ ತಜ್ಞಡೊ ಪ್ರತಾಪ್ ನಾಯ್ಕ್ ಗೋವಾ ಭಾಗವಹಿಸಲಿದ್ದಾರೆ. ಸಭೆಯ ಅಧ್ಯಕ್ಷತೆಯನ್ನು ಲುವಿ ಜೆ. ಪಿಂಟೊ ವಹಿಸಲಿದ್ದಾರೆ. ಪುರಸ್ಕಾರವು ಶಾಲು, ಫಲಪುಷ್ಪ, ಸ್ಮರಣಿಕೆ, ಪ್ರಮಾಣ ಪತ್ರದೊಂದಿಗೆ ರೂ 50,000/– ನಗದು ಒಳಗೊಂಡಿದೆ.

ಕ್ರೈಸ್ತ ಧರ್ಮಗುರು, ಶಿಕ್ಷಕ, ಸಂಗೀತಗಾರ, ಸ್ವರ ಸಂಯೋಜಕ, ಆಡಳಿತಗಾರ ಹೀಗೆ ಬಹುಮುಖಿ ಪ್ರತಿಭೆಗಳ ಆಗರ ವಂ. ಕ್ಲೆಮೆಂಟ್ (1954) ಕೆಂಲ್ಬೆಟ್–ಬೋಳದಲ್ಲಿ ಜನಿಸಿದರು. 1981 ರಲ್ಲಿ ಯಾಜಕೀ ದೀಕ್ಷೆ ಪಡೆದ ನಂತರ ವಿವಿಧ ಇಗರ್ಜಿಗಳಲ್ಲಿ ಹಾಗೂ ಶೈಕ್ಷಣಿಕ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಅವರ ಶೈಕ್ಷಣಿಕ ಸೇವೆ ಗುರುತಿಸಿ ದಕ್ಷಿಣ ಕನ್ನಡ ಜಿಲ್ಲಾಡಳಿತವು 2005 ನೇ ಸಾಲಿನ ಉತ್ತಮ ಶಿಕ್ಷಕ ಪ್ರಶಸ್ತಿ ನೀಡಿ ಗೌರವಿಸಿದೆ. ಉಡುಪಿ ಧರ್ಮ ಪ್ರಾಂತ್ಯದ ಶಿಕ್ಷಣ ಮಂಡಳಿಯ ಪ್ರಥಮ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ.

1994 ರಲ್ಲಿ ವಂ. ವಲೇರಿಯನ್ ಮೆಂಡೋನ್ಸಾ ಇವರೊಡಗೂಡಿ ಸಂಗೀತ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ ಇವರು ಕೊಂಕಣಿಯ ಲಕ್ಷ್ಮೀಕಾಂತ್ ಪ್ಯಾರೇಲಾಲ್ ಎಂಬ ಪ್ರಸಿದ್ಧಿ ಪಡೆದರು. ಭಕ್ತಿ ಗೀತೆಯ 49 ಧ್ವನಿ ಸುರುಳಿಗಳನ್ನು ಲೋಕಾರ್ಪಣೆ ಮಾಡಿದ್ದಾರೆ. ವಲೇರಿಯನ್ ಇವರ ಮರಣಾನಂತರವೂ ತಮ್ಮ ಸಂಗೀತ ಪಯಣ ಮುಂದುವರಿಸಿದ ವಂ. ಕ್ಲೆಮೆಂಟ್ ಇದುವರೆಗೆ 51 ಧ್ವನಿಸುರುಳಿಗಳ 500 ಕ್ಕೂ ಮಿಕ್ಕಿ ಗೀತೆಗಳಿಗೆ ಸಾಹಿತ್ಯ ರಚಿಸಿದ್ದಾರೆ. ಸ್ವರ ಸಂಯೋಜಿಸಿದ್ದಾರೆ.

ಸಂಗೀತದಲ್ಲಿ ಅವರ ಕಾರ್ಯಕ್ಷೇತ್ರದ ವ್ಯಾಪ್ತಿ ವಿಸ್ತಾರವಾದುದು. ಸೇವೆ ಸಲ್ಲಿಸಿದ ಇಗರ್ಜಿಗಳ ಗಾಯನ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ಅವಕಾಶ ನೀಡಿದ್ದಾರೆ. ಇಗರ್ಜಿಯ ಧಾರ್ಮಿಕ ಕ್ರಮಗಳಲ್ಲಿ ಹಾಡುವ ಹಲವಾರು ಗೀತೆಗಳನ್ನು ರಚಿಸಿದ್ದಾರೆ. ಹಲವಾರು ಸಾಮಾಜಿಕ ಹಾಡುಗಳನ್ನು ರಚಿಸಿದ್ದು ಅವು ಹಿಂದಿಗೆ ಭಾಷಾಂತರ ಗೊಂಡಿವೆ. ಯೂ ಟ್ಯೂಬ್ ಮತ್ತು ಸಾಮಾಜಿಕ ಮಾಧ್ಯಮಗಳಲ್ಲೂ ಅವರ ಹಾಡುಗಳನ್ನು ಕೇಳಬಹುದು. ಶಾಲೆಗಳಲ್ಲಿ ಹಾಗೂ ಇತರ ಕಾರ್ಯಕ್ರಮಗಳಲ್ಲಿ ಅವರು ರಚಿಸಿದ ಪ್ರಾರ್ಥನಾ ಗೀತೆ ಹಾಗೂ ನೃತ್ಯ ಗೀತೆಗಳನ್ನು ಬಳಸುತ್ತಾರೆ.

ಸನ್ಮಾನ ಕಾರ್ಯಕ್ರಮದ ನಂತರ ತಿಂಗಳ ವೇದಿಕೆ ಸರಣಿಯ 299 ನೇ ಕಾರ್ಯಕ್ರಮವಾಗಿ ನೆಲ್ಲು ಪೆರ್ಮನ್ನೂರ್ ವಿರಚಿತ ಕೊಮಿಡಿ ಕಂಪೆನಿ ಪ್ರಸ್ತುತ ಪಡಿಸುವ ಮೆಲ್ಲ್ಯಾಂಚೆ ಉಪಾದ್ರ್ ಹೊಸ ಕೊಂಕಣಿ ನಾಟಕದ ಪ್ರಥಮ ಪ್ರದರ್ಶನ ನಡೆಯಲಿದೆ. ಸರ್ವರಿಗೂ ಉಚಿತ ಪ್ರವೇಶ ಎಂದು ಸಂಘಟಕರು ತಿಳಿಸಿದ್ದಾರೆ

# ಮಂಗಳೂರಿನಲ್ಲಿ ನ.03–15; ಪ್ರಥಮ ವಿಶ್ವ ಕೊಂಕಣಿ ಸಂಗೀತ ಮಹಾ ಸಮ್ಮೇಳನ

## ಕೊಂಕಣಿ ಭಾಷೆ ಜಾಗತಿಕವಾಗಿಸುವ ಪ್ರಯತ್ನ ನಮ್ಮದಾಗಿದೆ : ಲೂಯಿಸ್ ಜೆ.ಪಿಂಟೊ



ಮುಂಬಯಿ, ಅ.21: ಕರ್ನಾಟಕ ಕರಾವಳಿಯ ಮಂಗಳೂರುನಲ್ಲಿನ 'ಮಾಂಡ್ ಸೊಭಾಣ್' ಸಂಸ್ಥೆಯು ತನ್ನ ಪ್ರಥಮ ವಿಶ್ವ ಕೊಂಕಣಿ ಸಂಗೀತ ಮಹಾ ಸಮ್ಮೇಳನವನ್ನು ಇದೇ ನ.03ರಿಂದ 15ರ ವರೆಗೆ ಮಂಗಳೂರಿನ ಶಕ್ತಿನಗರದಲ್ಲಿರುವ ಮಾಂಡ್ ಸೊಭಾಣ್‌ನ ಪರಂಪರಾ ಸಾಂಸ್ಕೃತಿಕ ಕೇಂದ್ರ ತೆರೆದಾಂಗಣದ 'ಕಲಾಂಗಣ್'ನಲ್ಲಿ ಆಯೋಜಿಸಿದ್ದು, ಮುಂಬಯಿ ಸೇರಿದಂತೆ ವಿಶ್ವದಾದ್ಯಂತದ ಸುಮಾರು 6,789 ಗಾಯಕರ ಸುಮಾರು 300 ತಂಡಗಳು ಭಾಗವಹಿಸಿ 5,000ಕ್ಕೂ ಅಧಿಕ ಕೊಂಕಣಿ ಹಾಡುಗಳನ್ನಾಡಿ ಇದು ಗಿನ್ನೆಸ್ ವಿಶ್ವ ದಾಖಲೆ ನಿರ್ಮಿಸುವ ಗುರಿ ಹೊಂದಿದೆ ಎಂದು ಮಾಂಡ್ ಸೊಭಾಣ್ ಸಂಸ್ಥೆಯ ಅಧ್ಯಕ್ಷ ಲೂಯಿಸ್ ಜೆ.ಪಿಂಟೊ ತಿಳಿಸಿದರು.

ಗಿನ್ನೆಸ್ ವಿಶ್ವದಾಖಲೆ ನಿರ್ಮಾಣ ಕಾರ್ಯಕ್ರಮದ ಬಗ್ಗೆ ಬುಧವಾರ ಸಂಜೆ ಬಾಂದ್ರಾ ಪಶ್ಚಿಮದ ಹಿಲ್ ರೋಡ್‌ನಲ್ಲಿನ ಮಿಲಾಗ್ರಿಸ್ ಹೌಸ್ ಕಟ್ಟಡದಲ್ಲಿನ ಮಾಡೆಲ್ ಬ್ಯಾಂಕ್‌ನ ಸಮಾಲೋಚನಾ ಸಭಾಗೃಹದಲ್ಲಿ ಆಯೋಜಿಸಲ್ಪಟ್ಟ ಸಭೆಯನ್ನುದ್ದೇಶಿಸಿ ಲೂಯಿ ಪಿಂಟೊ ಮಾಹಿತಿಯನ್ನಿತ್ತು ಮಹಾರಾಷ್ಟ್ರದ (ಮುಂಬಯಿ) ಜನತೆಗೆ ಲೂಯಿ ಜೆ.ಪಿಂಟೊ ಕರೆಯೋಲೆಯನ್ನಿತ್ತು ಆಹ್ವಾನಿಸಿದರು.

ಕೊಂಕಣಿ ಭಾಷೆ, ಕಲೆ ಮತ್ತು ಸಂಸ್ಕೃತಿಯ ಸಂರಕ್ಷಣೆ ಹಾಗೂ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತಿರುವ ಪ್ರತಿಷ್ಠಿತ ಸಾಂಸ್ಕೃತಿಕ ಸಂಸ್ಥೆ ವಿಶ್ವದ ಪ್ರಮುಖ ಕೊಂಕಣಿ ಸಾಂಸ್ಕೃತಿಕ ಸಂಸ್ಥೆಗಳಲ್ಲಿ ಒಂದಾಗಿದ್ದು, 40ನೇ ವರ್ಷದ ಸಾಂಸ್ಕೃತಿಕ ಸೇವಾ ಸಂಭ್ರಮದಲ್ಲಿದೆ. ಇದೀಗ ಪ್ರಥಮ ವಿಶ್ವ ಕೊಂಕಣಿ ಸಂಗೀತ ಮಹಾ ಸಮ್ಮೇಳನವನ್ನು ಆಯೋಜಿಸಿದ್ದು ಈ ಐತಿಹಾಸಿಕ ಕಾರ್ಯಕ್ರಮವನ್ನು 'ಮಾಂಡ್ ಸೊಭಾಣ್' ಸಂಸ್ಥಾಪಕ, ಕೊಂಕಣಿ ಹೋರಾಟಗಾರ ಸ್ವರ್ಗೀಯ ಎರಿಕ್ ಒಜಾರಿಯೊ ಅವರಿಗೆ ವಿಶೇಷ ಗೌರವಾಗಿ ಸಮರ್ಪಿಸಲಾಗಿ ಗಿನ್ನೆಸ್ ವಿಶ್ವ ದಾಖಲೆ ನಿರ್ಮಿಸುವ ಮಹತ್ವಾಕಾಂಕ್ಷಿ ಪ್ರಯತ್ನವಾಗಿದೆ ಎಂದರು.

ನಿರಂತರ ಗಾಯನ ಮ್ಯಾರಥಾನ್‌ನೊಂದಿಗೆ 12 ದಿನಗಳ ಸಮ್ಮೇಳನದಲ್ಲಿ ಸಂಗೀತ ವಿಚಾರ ಸಂಕಿರಣ, ಸಾಂಸ್ಕೃತಿಕ ಪ್ರದರ್ಶನ ಸೇರಿದಂತೆ ಸಂಗೀತ ಕ್ಷೇತ್ರದ ಹಿರಿಯ ಸಾಧಕರಿಗೆ ಗೌರವ ಮತ್ತು ಹಲವು ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಕೊಂಕಣಿ ಸಂಗೀತದ ಶ್ರೀಮಂತ ಪರಂಪರೆಯನ್ನು ಜಾಗತಿಕ ಮಟ್ಟದಲ್ಲಿ ಪರಿಚಯಿಸುವುದು, ವಿವಿಧ ಪ್ರದೇಶಗಳ ಸಂಗೀತ ಶೈಲಿಗಳನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸುವುದು ಹಾಗೂ ಕೊಂಕಣಿ ಭಾಷೆ ಮತ್ತು ಸಂಸ್ಕೃತಿಯ ವೈವಿಧ್ಯತೆಯನ್ನು ಸಂಭ್ರಮಿಸುವುದು ಈ ಮಹಾ ಸಮ್ಮೇಳನದ ಪ್ರಮುಖ ಉದ್ದೇಶವಾಗಿದೆ. ಆದ್ದರಿಂದ ಈ ಸಂಗೀತ ಮಹಾ ಸಮ್ಮೇಳನವನ್ನು ಯಶಸ್ವೀಗೊಳಿಸುವಂತೆ ಲೂಯಿ ಜೆ.ಪಿಂಟೊ ಕರೆಯಿತ್ತರು.

ಮಾಂಡ್ ಸೊಭಾಣ್ ಸಂಸ್ಥೆಯ ಕಲಾಂಗಣ್‌ನ ಪಿರ್ಜೆಂತ್ ರೋಯ್ ಕ್ಯಾಸ್ತೆಲಿನೊ (ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ) ಸ್ವಾಗತಿಸಿ ಮಾತನಾಡಿ 'ಬಹು ಗಾಯಕರು ಭಾಗವಹಿಸುವ ಅತಿ ದೀರ್ಘ ನಿರಂತರ ಗಾಯನ ಮ್ಯಾರಥಾನ್' ವಿಭಾಗದಲ್ಲಿ ಗಿನ್ನೆಸ್ ವಿಶ್ವ ದಾಖಲೆ ನಿರ್ಮಿಸುವ ಪ್ರಯತ್ನ ನಡೆಯಲಿದ್ದು ಇದು ಸಮ್ಮೇಳನದ ಪ್ರಮುಖ ಆಕರ್ಷಣೆಯಾಗಲಿದೆ. ನ.03ರ ಮಂಗಳವಾರ ಬೆಳಿಗ್ಗೆ 6:00 ಗಂಟೆಗೆ ಆರಂಭವಾಗುವ ಗಾಯನ ಕಾರ್ಯಕ್ರಮವು ಒಟ್ಟು 12 ದಿನ, 12 ಗಂಟೆ ಮತ್ತು 12 ನಿಮಿಷಗಳ ಕಾಲ ನಿರಂತರವಾಗಿ ನಡೆಯಲಿದ್ದು ನ.15ರ ಭಾನುವಾರ ಸಂಜೆ 6:12 ಗಂಟೆಗೆ ಸಮಾಪನಗೊಳ್ಳಲಿದೆ. ಇದರಲ್ಲಿ ವಿವಿಧ ಪ್ರಾದೇಶಿಕ ಉಪಭಾಷೆಗಳು ಮತ್ತು ಸಮುದಾಯಗಳ ಸಂಗೀತ ಪರಂಪರೆಯನ್ನು ಪ್ರತಿನಿಧಿಸುವ ಕ್ರೈಸ್ತ, ಗೌಡ ಸಾರಸ್ವತ ಬ್ರಾಹ್ಮಣ (ಜಿಎಸ್‌ಬಿ), ಕುಡ್ಮಿ, ದಾಲ್ದಿ, ಖಾರ್ವಿ, ಸಿದ್ದಿ ಹಾಗೂ ಸಿರಿಯನ್ ಆರ್ಥೊಡಾಕ್ಸ್ ಸಮುದಾಯಗಳ ಸಂಗೀತ ಪರಂಪರೆಗಳಿಗೆ ಸೇರಿದ ಕೊಂಕಣಿ ಹಾಡುಗಳನ್ನು ಪ್ರಸ್ತುತಪಡಿಸಲಿದ್ದಾರೆ ಎಂದರು.

ಮಾಡೆಲ್ ಕೋ–ಆಪರೇಟಿವ್ (ಶೆಡ್ಯೂಲ್ಡ್) ಬ್ಯಾಂಕ್ ಲಿಮಿಟೆಡ್‌ನ ಕಾರ್ಯಾಧ್ಯಕ್ಷ ಆಲ್ಬರ್ಟ್ ಡಬ್ಲ್ಯೂ. ಡಿ'ಸೋಜಾ ಸಭಾಧ್ಯಕ್ಷತೆ ವಹಿಸಿ ಸಾಂಪ್ರದಾಯಿಕವಾಗಿ ವೀಳ್ಯದೆಲೆ, ಅಡಿಕೆ, ನೀರು ನೀಡಿ ಸಂಗೀತ ಮಹಾಸಮ್ಮೇಳನಕ್ಕೆ ಮುಂಬಯಿ ಜನತೆಗೆ ಆಹ್ವಾನಿಸಿದರು. ಸದ್ಯ ಕೊಂಕಣಿ ಜನರಲ್ಲಿನ ಯುವ ಜನಾಂಗದಲ್ಲಿ ಮಾತೃಭಾಷಾ ಮೋಹ, ಭಾಷಾಭಿಮಾನ ಹೆಚ್ಚುತ್ತಿದ್ದು ಇಂತಹ ಸಮ್ಮೇಳನೂ ಇದಕ್ಕೆ ಪೂರಕವಾಗಿದೆ ಎಂದು ಶುಭಹಾರೈಸಿದರು.

ಈ ಸಂದರ್ಭದಲ್ಲಿ ಮಾಡೆಲ್ ಬ್ಯಾಂಕ್‌ನ ಉಪ ಕಾರ್ಯಾಧ್ಯಕ್ಷ ಮ್ಯಾಕ್ಸಿಮ್ ಐ.ಪಿಂಟೋ, ನಿರ್ದೇಶಕ ಜೋರ್ಜ್ ಕಾಸ್ತೇಲಿನೊ, ಕ್ರಿಶ್ಚನ್ ಛೇಂಬರ್ ಆಫ್ ಕಾಮರ್ಸ್ ಎಂಡ್ ಇಂಡಸ್ಟ್ರೀಸ್‌ನ ಸಂಸ್ಥಾಪಕ ಕಾರ್ಯಾಧ್ಯಕ್ಷ ವಿನ್ಸೆಂಟ್ ಮಥಾಯಸ್, ಉಪ ಕಾರ್ಯಾಧ್ಯಕ್ಷ ಅಡ್ವಕೇಟ್ ಪಿಯೂಸ್ ವಾಸ್, ಮಾಜಿ ಕಾರ್ಯಾಧ್ಯಕ್ಷ ಹೆನ್ರಿ ಲೋಬೊ, ನಿರ್ದೇಶಕ ಗ್ರೆಗೋರಿ ಡಿಸೋಜಾ, ಮಾಂಡ್ ಸೊಭಾಣ್ ಕಲಾಂಗಣ್ ಆಡಳಿತ ಮಂಡಳಿಯ ಅಧ್ಯಕ್ಷ ರೊನಾಲ್ಡ್ ಮೆಂಡೋನ್ಸಾ ಬಾಂದ್ರಾ, ಮುಂಬಯಿ ಪ್ರಾದೇಶಿಕ ಪ್ರತಿನಿಧಿ ಲಿಯೋ ಫೆರ್ನಾಂಡಿಸ್ ಜೆರಿಮೆರಿ (ಕೊಂಕಣ್ ಅಸೋಸಿಯೇಶನ್ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷ) ಕೊಂಕಣ್ ಟ್ರಸ್ಟ್‌ನ ಜೊತೆ ಕಾರ್ಯದರ್ಶಿ ವಿನ್ಸೆಂಟ್ ಕಾಸ್ತೆಲಿನೋ, ಜೋನ್ ರೋಡ್ರಿಗಸ್, ಉದ್ಯಮಿಗಳಾದ ಗ್ಯಾಬ್ರಿಯಲ್ ಮೆಂಡೋನ್ಸಾ, ಪಾವ್ಲ್ ಮಸ್ಕರೇನ್ಹಾಸ್, ಜೋನ್ ರೆಬೆಲ್ಲೋ ಸಯಾನ್, ಶಾನ್ ರೆಬೆಲ್ಲೋ, ಹೆರಾಲ್ಡ್ ಕಾಸ್ತೆಲಿನೋ, ವಿಲಿಯಂ ಡಿಸೋಜಾ ವಕೋಲ, ಸಂಗೀತಕಾರ ಚಾರ್ಲ್ಸ್ ಡಿ'ಕುನ್ಹಾ, ಕೊಂಕಣಿ ಭಾಷಾ ಮಂಡಳ್ ಮಹಾರಾಷ್ಟ್ರ ಗೌ| ಪ್ರ| ಕಾರ್ಯದರ್ಶಿ ಲಾರೆನ್ಸ್ ಡಿಸೋಜಾ ಕಮಾನಿ ಮತ್ತಿತರ ಗಣ್ಯರು ಉಪಸ್ಥಿತರಿದ್ದು ಶುಭಾರೈಸಿದರು.

(ಚಿತ್ರ / ವರದಿ : ರೋನ್ಸ್ ಬಂಟ್ವಾಳ್)

# ಆರ್‌ಎಸ್‌ಎಸ್ ವಿಜಯದಶಮಿ ಪಥಸಂಚಲನ: ಮಾಹಿತಿಯಷ್ಟೇ, ಅನುಮತಿಗಾಗಿ ಬರೆದ ಪತ್ರವಲ್ಲ: ಸಚಿವ ಪ್ರಿಯಾಂಕ್ ಖರ್ಗೆ

**ಆರ್‌ಎಸ್‌ಎಸ್ ಚಟುವಟಿಕೆಗಳಿಗೆ ಅನುಮತಿ ಪಡೆಯಿರಿ: ಪೊಲೀಸರು ಸಂಘದ ಗುಲಾಮರ ಮಕ್ಕಳಲ್ಲ: ಪ್ರಿಯಾಂಕ್ ಖರ್ಗೆ ವಾಗ್ದಾಳಿ**

**ಬೆಂಗಳೂರು, ಅ.21:** ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ವಿರುದ್ಧ ತಮ್ಮ ವಾಗ್ದಾಳಿ ಮುಂದುವರಿಸಿರುವ ಗೃಹ ಸಚಿವ ಪ್ರಿಯಾಂಕ್ ಖರ್ಗೆ, ಅಕ್ಟೋಬರ್ 25ರಂದು ನಡೆಯಲಿರುವ ವಿಜಯದಶಮಿ ಪಥಸಂಚಲನಕ್ಕೆ ಕಡ್ಡಾಯವಾಗಿ ಪೂರ್ವಾನುಮತಿ ಪಡೆಯುವಂತೆ ಸೂಚಿಸಿದ್ದಾರೆ.

ಪಥಸಂಚಲನ ನಡೆಸುವ ಕುರಿತು ಆರ್‌ಎಸ್‌ಎಸ್ ಕೇವಲ ಪೊಲೀಸರಿಗೆ ಮಾಹಿತಿ ನೀಡುತ್ತಿರುವ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಸಚಿವರು, ಪೊಲೀಸರು ಆರ್‌ಎಸ್‌ಎಸ್ ಗುಲಾಮರ ಮಕ್ಕಳಲ್ಲ ಎಂದು ಸುದ್ದಿಗಾರರ ಮುಂದೆ ಕಟುವಾಗಿ ಟೀಕಿಸಿದರು.

ಇದಕ್ಕೂ ಮುನ್ನ, ಮಹಾಲಕ್ಷ್ಮಿ ಲೇಔಟ್ ಮತ್ತು ನಂದಿನಿ ಲೇಔಟ್ ಪೊಲೀಸ್ ಠಾಣೆಗಳಿಗೆ ಆರ್‌ಎಸ್‌ಎಸ್ ಪ್ರತಿನಿಧಿಗಳು ಬರೆದಿದ್ದ ಎರಡು ಪತ್ರಗಳನ್ನು ಖರ್ಗೆ ಅವರು ಟ್ವೀಟ್ ಮಾಡಿದ್ದರು. ಮೊದಲ ಪತ್ರದಲ್ಲಿ ಕಾರ್ಯಕ್ರಮಕ್ಕೆ ಸಹಕಾರ ಕೋರಿದ್ದರೆ, ಎರಡನೇ ಪತ್ರದಲ್ಲಿ ಕೇವಲ ಮಾಹಿತಿ (ಇಂಟಿಮೇಷನ್) ನೀಡಲಾಗಿತ್ತು. ಈ ಬಗ್ಗೆ ಪ್ರತಿಕ್ರಿಯಿಸಿದ ಅವರು, ಆರ್‌ಎಸ್‌ಎಸ್‌ನ ನನ್ನ ಪ್ರೀತಿಯ ಸ್ವಯಂಸೇವಕರೇ, ಗೃಹ ಇಲಾಖೆಗೆ ಕೇವಲ ಮಾಹಿತಿ ನೀಡುವುದು ಅಥವಾ ಅಗತ್ಯ ವ್ಯವಸ್ಥೆ ಮಾಡಲು ಹೇಳುವುದು ಅನುಮತಿ ಪಡೆದಂತೆ ಆಗುವುದಿಲ್ಲ. ದಯವಿಟ್ಟು ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿ, ಸಕ್ಷಮ ಪ್ರಾಧಿಕಾರದಿಂದ ಔಪಚಾರಿಕ ಅನುಮತಿಗಾಗಿ ಕಾಯಿರಿ ಎಂದು ಟ್ವೀಟ್‌ನಲ್ಲಿ ಬರೆದುಕೊಂಡಿದ್ದರು. ಅಖಿಲ ಭಾರತೀಯ ಪ್ರತಿನಿಧಿ ಸಭಾದ 2025-26ನೇ ಸಾಲಿನ ವಾರ್ಷಿಕ ವರದಿಯನ್ನು ಉಲ್ಲೇಖಿಸಿ ಮಾತನಾಡಿದ ಖರ್ಗೆ, ಕರ್ನಾಟಕ ದಾದ್ಯಂತ ಆರ್‌ಎಸ್‌ಎಸ್ 562 ಪಥಸಂಚಲನ ಗಳನ್ನು ನಡೆಸಿದ್ದು, ಅದರಲ್ಲಿ 2.21 ಲಕ್ಷ ಸಮವಸ್ತ್ರಧಾರಿಗಳು ಭಾಗವಹಿಸಿದ್ದಾರೆ ಎಂದು ಮಾಹಿತಿ ನೀಡಿದರು. ಒಂದೇ ದಿನ ಲಕ್ಷಾಂತರ ಮಂದಿ ಬೀದಿಗಿಳಿದು ಪಥಸಂಚಲನ ನಡೆಸುವಾಗ, ಪೊಲೀಸ್ ಇಲಾಖೆಯು ಸಿಬ್ಬಂದಿ ನಿಯೋಜನೆ, ಸಾರಿಗೆ, ಸಂಚಾರ ನಿರ್ವಹಣೆ ಮತ್ತು ಭದ್ರತೆ ಸೇರಿ ಸಾಕಷ್ಟು ಸಿದ್ಧತೆ ಮಾಡಿಕೊಳ್ಳಬೇಕಾಗುತ್ತದೆ. ಇದಕ್ಕೆ ಪೂರ್ವಯೋಜನೆ, ಮಾನವ ಸಂಪನ್ಮೂಲ ಹಾಗೂ ಸಾರ್ವಜನಿಕ ಸಂಪನ್ಮೂಲಗಳ ಅಗತ್ಯವಿರುತ್ತದೆ ಎಂದು ವಿವರಿಸಿದರು. ಹೀಗಾಗಿ ಅರ್ಜಿ ಸಲ್ಲಿಸಿ ಔಪಚಾರಿಕ ಅನುಮತಿ ಪಡೆಯಿರಿ ಎಂದು ಅವರು ಸೂಚಿಸಿದರು.

ಆರ್‌ಎಸ್‌ಎಸ್ ಕಾನೂನಿಗಿಂತ ಮೇಲಿಲ್ಲ. ಗಣೇಶ ಮೆರವಣಿಗೆ ಅಥವಾ ರಸ್ತೆಯಲ್ಲಿ ನಡೆಯುವ ಯಾವುದೇ ಕಾರ್ಯಕ್ರಮಕ್ಕೆ ನೀವು ಅನುಮತಿ ಪಡೆಯುವುದಿಲ್ಲವೇ ಅದೇ ಕಾನೂನು ಆರ್‌ಎಸ್‌ಎಸ್‌ಗೂ ಅನ್ವಯಿಸುತ್ತದೆ ಎಂದು ಅವರು ಸ್ಪಷ್ಟಪಡಿಸಿದರು. ನಾವು ಸರ್ಕಾರ ನಡೆಸುತ್ತಿದ್ದೇವೆ. ನನಗೂ ಸೇರಿದಂತೆ ಎಲ್ಲರಿಗೂ ಒಂದೇ ನಿಯಮವಿದೆ. ನಿಮ್ಮ ಕೋರಿಕೆ ಸೂಕ್ತವಾಗಿದ್ದರೆ ಖಂಡಿತಾ ಅನುಮತಿ ನೀಡುತ್ತೇವೆ, ನಾವು ಅನುಮತಿ ನಿರಾಕರಿಸುವುದಿಲ್ಲ ಎಂದು ಭರವಸೆ ನೀಡಿದರು.





ಮಂಗಳೂರಿನಲ್ಲಿ ಬುಧವಾರ ನಡೆದ ದಸರಾ ಮೆರವಣಿಗೆಯ ವೇಳೆ ಶಾರದಾ ದೇವಿಯ ವಿಗ್ರಹದ ಮೆರವಣಿಗೆ.

## ಆರ್‌ಎಸ್‌ಎಸ್ ಪುರುಷ ಪ್ರಧಾನ ಸಂಘಟನೆ: ರಾಹುಲ್‌ಗಾಂಧಿ ಹೇಳಿಕೆಯನ್ನು ವಿಶಾಲ ದೃಷ್ಟಿಯಿಂದ ನೋಡಿ: ಡಾ. ಆನಂದಕುಮಾರ್

**ಬೆಂಗಳೂರು, ಅ.21:** ಆರ್.ಎಸ್.ಎಸ್ ಮಹಿಳೆಯರನ್ನು ಪುರುಷರ ಅಧೀನದಲ್ಲಿಡುವ ಪುರುಷ ಪ್ರಧಾನ ಸಂಘಟನೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ನೀಡಿರುವ ಹೇಳಿಕೆ ನವರಾತ್ರಿ ಸಂದರ್ಭದಲ್ಲಿ ಅತ್ಯಂತ ಸಕಾಲಿಕ ವಾಗಿದ್ದು, ಮಹಿಳೆಯರ ಸಬಲೀಕರಣ ಎಂಬುದು ಭಾಷಣ, ಘೋಷಣೆ, ದೇವಿಯ ಆರಾಧನೆಗಳಿಗೆ ಸೀಮಿತವಾಗಬಾರದು. ಅದು ಅಧಿಕಾರ ಹಂಚಿಕೆ, ಸಮಾನ ಅವಕಾಶ, ಸ್ವತಂತ್ರ ನಿರ್ಧಾರ ಮತ್ತು ನಾಯಕತ್ವದಲ್ಲಿ ಮಹಿಳೆಯ ಸ್ಥಾನಮಾನ ಪ್ರತಿಫಲಿಸುವಂತಿರಬೇಕು ಎಂದು ಎಐಸಿಸಿ ಎಸ್.ಸಿ ವಿಭಾಗದ ರಾಷ್ಟ್ರೀಯ ಸಂಯೋಜಕ ಹಾಗೂ ಮಹಾರಾಷ್ಟ್ರ ಉಸ್ತುವಾರಿ ಡಾ. ಆನಂದ ಕುಮಾರ್ ಹೇಳಿದ್ದಾರೆ.

ಸ್ವಾತಂತ್ರ ಸಂಗ್ರಾಮದಲ್ಲಿ ಭಾಗಿಯಾಗದ, ರಾಷ್ಟ್ರಧ್ವಜ, ರಾಷ್ಟ್ರಗೀತೆ ಬಗ್ಗೆ ಬಹುಕಾಲ ಅನಾದರಣೆ ಹೊಂದಿದ್ದ ಆರ್.ಎಸ್.ಎಸ್ ಈವರೆಗೆ ಮಹಿಳೆಯರಿಗೆ ಸಮಾನ ಅವಕಾಶವನ್ನೇ ನೀಡಿಲ್ಲ. ಶೋಷಿತ ಸಮುದಾಯಗಳಿಗೂ ಪ್ರಾತಿನಿಧ್ಯ ಕಲ್ಪಿಸಿಲ್ಲ. ಮನುಸ್ಮೃತಿ, ಮನುವಾದಿ ಸಿದ್ಧಾಂತ ಆಚರಿಸುವ ಆರ್.ಎಸ್.ಎಸ್ ಬಗ್ಗೆ ಜಾಗತಿಕವಾಗಿ ವಿರೋಧದ ಧ್ವನಿ ಕೇಳಿ ಬರುತ್ತಿದೆ. ರಾಹುಲ್ ಗಾಂಧಿ ಅವರ ವಿಚಾರವನ್ನು ಟೀಕೆ ಎಂದು ಭಾವಿಸದೇ ಸಂಘ ಪರಿವಾರದ ಪ್ರಮುಖರು ವಿಶಾಲ ಮನೋಭಾವನೆಯಿಂದ ನೋಡಿ, ಪರಿವಾರದ ಸಂಘಟನೆಯಲ್ಲಿ ಬದಲಾವಣೆ ಮಾಡಲು ಇದು ಸಕಾಲ. ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಡಾ. ಆನಂದ ಕುಮಾರ್, ಮಹಿಳೆ ಅನುಯಾಯಿ ಅಲ್ಲ, ನಿರ್ಧಾರ ರೂಪಿಸುವ ನಾಯಕಿಯಾಗಬೇಕು. ಮಹಿಳೆಯರಿಗೆ ಗೌರವ ನೀಡುವುದು ಎಂದರೆ ಅವರ ಪರವಾಗಿ ಎಲ್ಲ ನಿರ್ಧಾರಗಳನ್ನು ತೆಗೆದುಕೊಳ್ಳುವುದಲ್ಲ. ಅವರೇ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಮತ್ತು ಅಧಿಕಾರವನ್ನು ಒಪ್ಪಿಕೊಳ್ಳುವುದು ಮುಖ್ಯವಾಗಲಿದೆ. ಮಹಿಳೆಯರಿಗೆ ವೇದಿಕೆ ನೀಡಿ, ಅಲ್ಲಿ ಅವರ ಧ್ವನಿಗೆ ನಿರ್ಧಾರ ಬದಲಿಸುವ ಶಕ್ತಿ ಇರಬೇಕು. ಮಹಿಳೆಯನ್ನು ಪೂಜಿಸುವ ಸಮಾಜಕ್ಕಿಂತ, ಮಹಿಳೆ ಯನ್ನು ಸಮಾನ ಹಕ್ಕುಗಳಿರುವ ನಾಯಕಿಯಾಗಿ ಸ್ವೀಕರಿಸುವ ಸಮಾಜವೇ ನಿಜವಾದ ಪ್ರಗತಿಪರ ಸಮಾಜ. ಆ ಗುರಿಯತ್ತ ಸಾಗಲು



ರಾಹುಲ್ ಗಾಂಧಿ ಎತ್ತಿರುವ ಪ್ರಶ್ನೆಯೂ ಸೇರಿದಂತೆ ಎಲ್ಲ ಸಾರ್ವಜನಿಕ ಚರ್ಚೆಗಳು ವ್ಯಕ್ತಿಗತ ದೂಷಣೆಯನ್ನು ಮೀರಿ, ಮಹಿಳೆಯರ ನೈಜ ಹಕ್ಕು ಮತ್ತು ಪ್ರಾತಿನಿಧ್ಯದ ಕುರಿತು ಕೇಂದ್ರೀಕೃತ ವಾಗಬೇಕು. ದೇವಿಯ ಆರಾಧನೆಯನ್ನು ಮಹಿಳೆಯರ ಸಬಲೀಕರಣದವರೆಗೆ ದೇಶದಲ್ಲಿ ಚರ್ಚೆಯಾಗಬೇಕು ಎಂದು ಪ್ರತಿಪಾದಿಸಿದ್ದಾರೆ.

ನಾಯಕತ್ವದಲ್ಲಿ ಮಹಿಳೆಯರ ಅಭಿಪ್ರಾಯಕ್ಕೆ ಎಷ್ಟು ಮಹತ್ವ ನೀಡಲಾಗುತ್ತದೆ ಎಂಬುದೂ ಮುಖ್ಯ. ಸಂಘಟನೆಯ ನಿರ್ಧಾರ ಪ್ರಕ್ರಿಯೆಯಲ್ಲಿ ಮಹಿಳೆಯರ ಸ್ಥಾನಮಾನ ಕುರಿತು ಸ್ಪಷ್ಟ ಮಾಹಿತಿ ನೀಡಿದರೆ ರಾಹುಲ್ ಗಾಂಧಿ ಎತ್ತಿರುವ ಚರ್ಚೆ ಅರ್ಥಪೂರ್ಣ ವಾಗುತ್ತದೆ. ಪ್ರಶ್ನೆಗಳಿಗೆ ವಾಸ್ತವಾಂಶಗಳ ಮೂಲಕ ಉತ್ತರಿಸು ವುದು ಸಂಘಟನೆಗಳ ಜವಾಬ್ದಾರಿ ಎಂದರು.

## ಘೋಷಿಸಿದ್ದ ಅಲ್ಪ ಪರಿಹಾರವೂ ರೈತರಿಗೆ ಸೇರಿಲ್ಲ: ರಾಜಕೀಯವೇ: ಛಲವಾದಿ ನಾರಾಯಣಸ್ವಾಮಿ ಪ್ರಶ್ನೆ

**ಬೆಂಗಳೂರು, ಅ.21:** ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ. ಕೇವಲ 2,500 ರೂ. ಪರಿಹಾರ ಧನ ಘೋಷಿಸಿದ ಸರ್ಕಾರವು ಒಂದು ರೂಪಾಯಿಯನ್ನೂ ಅವರ ಖಾತೆಗೆ ಹಾಕದೇ ಇರುವುದು ರಾಜಕೀಯವೇ ಎಂದು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಪ್ರಶ್ನಿಸಿದ್ದಾರೆ.

ನಗರದಲ್ಲಿ ಬುಧವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಾವು ಒಂದು ಹೆಕ್ಟೇರ್‌ಗೆ 25 ಸಾವಿರ ಕೊಡಬೇಕೆಂದು ಬೇಡಿಕೆ ಇಟ್ಟರೆ ಅದು ರಾಜಕೀಯವೇ ಎಂದು ಕೇಳಿದ್ದರು. ಮೊದಲು 25 ಸಾವಿರ ರೂಪಾಯಿ ಪರಿಹಾರ ಘೋಷಿಸಿ; ಬಳಿಕ ಕೇಂದ್ರದ ಬಳಿ ಹೋಗೋಣ. ಎಸ್‌ಡಿಆರ್‌ಎಫ್ ಪರಿಹಾರ ಮೊದಲು ಕೊಡಲಿ; ಬಳಿಕ ಎನ್‌ಡಿಆರ್‌ಎಫ್ ಹಣ



ಕೇಳೋಣ ಎಂದರು. ನಿಯೋಗದಲ್ಲಿ ಹೋಗುವುದಿಲ್ಲ ಎಂದು ನಾವು ಹೇಳಿಲ್ಲ; ಒಂದು ರೂಪಾಯಿಯೂ ಕೊಟ್ಟಿಲ್ಲ; ಸರ್ಕಾರ ದಿವಾಳಿ ಆಗಿದೆಯೇ ಎಂದು ಪ್ರಶ್ನಿಸಿದ ಛಲವಾದಿ, ಶ್ರೀಮಂತಿಕೆ ಮೆರೆಯುವ ರೀತಿಯಲ್ಲಿ ಮಾತನಾಡುತ್ತಾರೆ. ಇಲ್ಲಿ ಭಿಕ್ಷಾಪಾತ್ರೆ ಹಿಡಿದು ನಿಂತಿರುವುದು; ಕಾಂಗ್ರೆಸ್ ಬಂಡವಾಳ ನಮಗೆ ಗೊತ್ತಿದೆ ಎಂದು ಟೀಕಿಸಿದರು. ಭಿಕ್ಷೆಯಾದರೂ ಎತ್ತಿ; ಆದರೆ ರೈತರ ಸಮಸ್ಯೆಗೆ ಸ್ಪಂದಿಸಿ ಎಂದು ಛಲವಾದಿ ಆಗ್ರಹಿಸಿದರು.

## ಬೆಂಗಳೂರಿನ ಸಂಚಾರ ದಟ್ಟಣೆ, ಸಂಪರ್ಕ ಸುಧಾರಿಸಲು 1640 ಕೋಟಿ ವೆಚ್ಚದ ಯೋಜನೆಗಳಿಗೆ ಟೆಂಡರ್ ಆಹ್ವಾನ

**ಬೆಂಗಳೂರು, ಅ.21:** ನಗರದಾದ್ಯಂತ ಸಂಚರ ದಟ್ಟಣೆ ಕಡಿಮೆ ಮಾಡಲು ಮತ್ತು ಸಂಪರ್ಕ ಸುಧಾರಿಸಲು ಅಧಿಕಾರಿಗಳು ಪ್ರಯತ್ನಿ ಸುತ್ತಿರುವುದರಿಂದ, ಬೆಂಗಳೂರಿನ ಪ್ರಮುಖ ಸಂಚಾರ ಅಡಚಣೆಗಳಲ್ಲಿ ಫ್ಲೈಓವರ್‌ಗಳು, ಎಲಿವೇಟೆಡ್ ರಸ್ತೆಗಳು ಮತ್ತು ಗ್ರೇಡ್ ಸೆಪರೇಟರ್ ಗಳನ್ನು ಒಳಗೊಂಡ ಆರು ಮೂಲ ಸೌಕರ್ಯ ಯೋಜನೆಗಳನ್ನು ಯೋಜಿಸಲಾಗುತ್ತಿದೆ. ಒಟ್ಟು 1,640 ಕೋಟಿ ರೂ. ವೆಚ್ಚದ ಅಂದಾಜು ಯೋಜನೆಗಳಿಗೆ ಬಿ-ಸ್ಮೈಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.



ಪ್ರಸ್ತಾವಿತ ಕಾಮಗಾರಿಗಳು ಭಾರೀ ಸಂಚಾರವು ಆಗಾಗ್ಗೆ ಚಲನೆಯನ್ನು ನಿಧಾನಗೊಳಿಸುವ ಮತ್ತು ಪ್ರಯಾಣಿಕರಿಗೆ ವಿಳಂಬವನ್ನು ಉಂಟುಮಾಡುವ ಜನನಿಬಿಡ ಛೇದಕಗಳನ್ನು ಗುರಿಯಾಗಿರಿಸಿ ಕೊಂಡಿವೆ. ಯೋಜನೆಗಳು ಗ್ರೇಡ್-ಬೇರ್ಪಡಿಸಿದ ಮಾರ್ಗಗಳನ್ನು ಒದಗಿಸಲು ಉದ್ದೇಶಿಸಲಾಗಿದೆ,

ವಾಹನಗಳು ಆಯ್ದ ಜಂಕ್ಷನ್‌ಗಳನ್ನು ಬೈಪಾಸ್ ಮಾಡಲು ಅನುವು ಮಾಡಿಕೊಡುತ್ತದೆ ಮತ್ತು ವಿವಿಧ ದಿಕ್ಕುಗಳಲ್ಲಿ ಚಲಿಸುವ ಸಂಚಾರದ ನಡುವಿನ ಸಂಘರ್ಷಗಳನ್ನು ಕಡಿಮೆ ಮಾಡುತ್ತದೆ. ಬೆಂಗಳೂರಿನ ಮಧ್ಯಭಾಗದಲ್ಲಿ, ಮಿನರ್ವ ವೃತ್ತ ಮತ್ತು ಹಡ್ಸನ್ ವೃತ್ತದ ನಡುವೆ ಲೂಪ್ ಫ್ಲೈಓವರ್ ಅನ್ನು ಪ್ರಸ್ತಾಪಿಸಲಾಗಿದೆ.

ಬಾಲಗಂಗಾಧರನಾಥ ಸ್ವಾಮೀಜಿ ಫ್ಲೈಓವರ್‌ನಿಂದ ಟೌನ್‌ಹಾಲ್ ಕಡೆಗೆ ಲೂಪ್ ಸಂಪರ್ಕವನ್ನು ಮತ್ತು ನೃಪತುಂಗ ರಸ್ತೆಯಲ್ಲಿರುವ ಸಂಗೊಳ್ಳಿ ರಾಯಣ್ಣ ವೃತ್ತ ಮತ್ತು ಕೆ.ಆರ್. ವೃತ್ತದ ನಡುವಿನ ಸಂಪರ್ಕವನ್ನು ಸಹ ಯೋಜನೆಯು ಕಲ್ಪಿಸುತ್ತದೆ. ಈ ಸಂಪರ್ಕಗಳು ನಗರದ ಕೆಲವು ಪ್ರಮುಖ ಕೇಂದ್ರ ರಸ್ತೆಗಳ ಸುತ್ತಲೂ ಸಂಚಾರವನ್ನು ಸುಧಾರಿಸುವ ನಿರೀಕ್ಷೆಯಿದೆ.

ಹೊಸೂರು ರಸ್ತೆ ಕಾರಿಡಾರ್‌ನಲ್ಲಿ ಶೂಲೇ ವೃತ್ತದಿಂದ ಮಡಿವಾಳ ಚೆಕ್‌ಪೋಸ್ಟ್ ಕಡೆಗೆ ಫ್ಲೈಓವರ್ ಅಥವಾ ಎಲಿವೇಟೆಡ್ ರಸ್ತೆಯನ್ನು ನಿರ್ಮಾಣ ಪ್ರಮುಖ ಪ್ರಸ್ತಾವನೆಯಾಗಿದೆ. ಈ ಜೋಡಣೆಯು ಆನೆಪಾಳ್ಯ ಮತ್ತು ಆಡುಗೋಡಿ ಮೂಲಕ ಹಾದುಹೋಗುವ ನಿರೀಕ್ಷೆಯಿದೆ ಮತ್ತು ಸೇಂಟ್ ಜಾನ್ಸ್ ಆಸ್ಪತ್ರೆ ರಸ್ತೆಯವರೆಗೆ ವಿಸ್ತರಿಸುವ ನಿರೀಕ್ಷೆಯಿದೆ.

ಈ ಯೋಜನೆಯು ಏಳು ಜಂಕ್ಷನ್‌ಗಳನ್ನು ಬೈಪಾಸ್ ಮಾಡುವ ಗುರಿಯನ್ನು ಹೊಂದಿದೆ, ಇದು ಜನನಿಬಿಡ ಮಾರ್ಗದಲ್ಲಿ ಸಂಚಾರವನ್ನು ಹೆಚ್ಚು ಸುಗಮವಾಗಿ ಸಾಗಿಸಲು ಸಹಾಯ ಮಾಡುತ್ತದೆ. ಉತ್ತರ ಬೆಂಗಳೂರಿನಲ್ಲಿ, ದೊಡ್ಡಬಳ್ಳಾಪುರ ರಸ್ತೆಯ ಪೊಲೀಸ್ ಠಾಣೆ ಜಂಕ್ಷನ್‌ನಿಂದ ಹಳೆಯ ಯಲಹಂಕ ಮಾರ್ಗದ ಮೂಲಕ ರಾಹೆ-7 ರಲ್ಲಿ ನವಯುಗ ಫ್ಲೈಓವರ್‌ಗೆ ಸುಮಾರು ನಾಲ್ಕು ಕಿಲೋಮೀಟರ್ ರಸ್ತೆಯನ್ನು ಯೋಜಿಸಲಾಗಿದೆ. ಪ್ರಸ್ತಾವಿತ ಸಂಪರ್ಕವು ಈ ಪ್ರದೇಶದಲ್ಲಿ ರಸ್ತೆ ಸಂಪರ್ಕವನ್ನು ಬಲಪಡಿಸುವ ನಿರೀಕ್ಷೆಯಿದೆ.

ಮತ್ತೊಂದು ಪ್ರಮುಖ ಯೋಜನೆಯು ಪೈಪ್‌ಲೈನ್ ರಸ್ತೆಯ ಉದ್ದಕ್ಕೂ 4.5-ಕಿಲೋಮೀಟರ್ ಗ್ರೇಡ್ ಸೆಪರೇಟರ್ ಒಳಗೊಂಡಿದೆ.

## ಕವಯತ್ರಿ ಗೊರೂರು ಪಂಕಜಾಗೆ ಕೈಯ್ಯಾರ ಕಿಞ್ಞಣ್ಣರೈ ರಾಷ್ಟ್ರೀಯ ಸದ್ಭಾವನ ಪ್ರಶಸ್ತಿ ಪ್ರದಾನ

**ಬೆಂಗಳೂರು, ಅ.21:** ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಉಳಿವು ಹಾಗೂ ಬೆಳವಣಿಗೆಗೆ ಸಂಘಟಿತ ಪ್ರಯತ್ನಗಳು ಅಗತ್ಯವಾಗಿವೆ ಎಂದು ಸಾಮಾಜಿಕ ಕಾರ್ಯಕರ್ತ ಶ್ರೀನಿವಾಸ ಬಹದ್ದೂರ್ ಹೇಳಿದರು.

ಕಾಸರಗೋಡು ದಸರಾ ಅಂಗವಾಗಿ ಗಡಿನಾಡು ಕಾಸರಗೋಡಿನ ಪಾಂಗೋಡಿನಲ್ಲಿ ಕನ್ನಡ ಭವನದ ವತಿಯಿಂದ ನಡೆದ ಕನ್ನಡ ಸಾಂಸ್ಕೃತಿಕೋತ್ಸವ ಮತ್ತು ಕವಿ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿ ಮಾತನಾಡಿ, ಗಡಿನಾಡಿನಲ್ಲಿ ಕನ್ನಡದ ಅಸ್ಮಿತೆಯನ್ನು ಉಳಿಸಿ ಬೆಳೆಸುವಲ್ಲಿ ಕನ್ನಡಪರ ಸಂಘ-ಸಂಸ್ಥೆಗಳು ಹಾಗೂ ಸಾಹಿತ್ಯಿಕ ವೇದಿಕೆಗಳ ಪಾತ್ರ ಮಹತ್ವದ್ದಾಗಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮ ಉದ್ಘಾಟಿಸಿದ ಡಾ. ಎಂ.ಜಿ.ಆರ್. ಅರಸು, ಕವಿ ಸಮ್ಮೇಳನವು ಕವಿಗಳ ಸೃಜನಶೀಲ ಅಭಿವ್ಯಕ್ತಿಗೆ ಮಾತ್ರ ಸೀಮಿತವಾಗದೆ, ಕನ್ನಡದ ಮನಸ್ಸುಗಳನ್ನು ಬೆಸೆಯುವ ಹಾಗೂ ಭಾಷೆಯ ಮೇಲಿನ ಪ್ರೀತಿಯನ್ನು ಗಟ್ಟಿಗೊಳಿಸುವ ಸಾಂಸ್ಕೃತಿಕ ವೇದಿಕೆಯಾಗಬೇಕು ಎಂಬ ಆಶಯವನ್ನು ಅವರು ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಬೆಂಗಳೂರಿನ ಖ್ಯಾತ ಕವಯತ್ರಿ ಗೊರೂರು ಪಂಕಜ ಅವರಿಗೆ ನಾಡೋಜ ಡಾ. ಕಯ್ಯಾರ ಕಿಞ್ಞಣ್ಣ



ರೈ ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಗೊರೂರು ಪಂಕಜ, ಗಡಿನಾಡು ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಕನ್ನಡದ ಕಾರ್ಯಕ್ರಮ ನಡೆಸುವ ಮೂಲಕ ಕನ್ನಡದ ಅಸ್ಮಿತೆಯನ್ನು ಸ್ಥಾಪಿಸುವ ಜೊತೆಗೆ ಸಂಸ್ಕೃತಿಯನ್ನು ಉಳಿಸು ವುದು, ಕನ್ನಡಿಗರ ಆತ್ಮ ಗೌರವವನ್ನು ಎತ್ತಿ ಹಿಡಿಯುವ ನಿಟ್ಟಿನಲ್ಲಿ ಸರ್ಕಾರ ಯೋಜನೆ ರೂಪಿಸಬೇಕು ಎಂದು ಅಭಿಪ್ರಾಯ ಪಟ್ಟರು.

ಗಡಿನಾಡಿನ ಕನ್ನಡಿಗರು ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ವಿಚಾರದಲ್ಲಿ ಜಾಗೃತರಾಗಿರಬೇಕು. ಕಾಸರಗೋಡಿನಲ್ಲಿ ಕನ್ನಡದ ಕಾಯಕವನ್ನು ನಿರಂತರವಾಗಿ ನಡೆಸುತ್ತಿರುವ ಕನ್ನಡ ಭವನದ ರೂವಾರಿ ಡಾ. ವಾಮನರಾವ್ ಬೇಕಲ್ ಅವರು ತಮ್ಮ ಮನೆಯನ್ನೇ ಕನ್ನಡಮಯವಾಗಿಸಿದ್ದಾರೆ. ಯಾರೇ ಕನ್ನಡಿಗರು ಅಲ್ಲಿ ಹೋಗಿ ಉಳಿಯುವ ಅವಕಾಶ ಕಲ್ಪಿಸಿರುವುದು ಪ್ರಶಂಸನೀಯ ಎಂದು ವಾಮನರಾವ್ ಸೇವೆಯನ್ನು ಸ್ಮರಿಸಿದರು.

## ಬ್ರಾಹ್ಮಣ ಅಭಿವೃದ್ಧಿ ಮಂಡಳಿಯಲ್ಲಿ ಮಧ್ವಾಚಾರ್ಯ ಜಯಂತಿ ಆಚರಣೆ
## ಜಾತ್ಯತೀತ ಸಮಾಜ ನಿರ್ಮಾಣ ಮಧ್ವಾಚಾರ್ಯರ ಬೋಧನೆಯ ತಿರುಳು: ವ್ಯಾಸನಕೆರೆ ಪ್ರಭಂಜನಾಚಾರ್ಯ

**ಬೆಂಗಳೂರು, ಅ.21:** ಜಾತ್ಯತೀತ ಸಮಾಜ ನಿರ್ಮಾಣವೇ ಸಮಾಜ ಸುಧಾರಕ ಮಧ್ವಾಚಾರ್ಯರ ಬೋಧನೆಯ ಮುಖ್ಯ ತಿರುಳಾಗಿತ್ತು ಎಂದು ಹಿರಿಯ ವಿದ್ವಾಂಸ ವ್ಯಾಸನಕೆರೆ ಪ್ರಭಂಜನಾಚಾರ್ಯ ಬುಧವಾರ ಪ್ರತಿಪಾದಿಸಿದ್ದಾರೆ.

ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಕಚೇರಿಯಲ್ಲಿ ಏರ್ಪಡಿಸಿದ್ದ ಮಧ್ವಾಚಾರ್ಯ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಜಾತಿರಹಿತ, ವರ್ಗರಹಿತ ಸಮಾಜ ನಿರ್ಮಾಣ ಮತ್ತು ಮಾನವ ಧರ್ಮವೇ ಉಳಿದೆಲ್ಲ ಧರ್ಮಗಳಿಗಿಂತ ಶ್ರೇಷ್ಠ ಎಂಬುದನ್ನು ಸಾರಿದ್ದಾರೆ. ಸಕಲ ಜೀವಿಗಳಿಗೂ ಒಳಿತನ್ನು ಬಯಸುವುದೇ ಮನುಷ್ಯರು ಭಗವಂತನನ್ನು ಕಾಣುವ ದಾರಿಯಾಗಿದೆ. ಮೂಢನಂಬಿಕೆ ವಿರೋಧಿಸುವವರು ಸತ್ಯದ ಪ್ರತಿಪಾದಕರಾಗಿರುತ್ತಾರೆ. ಸಾಮರಸ್ಯ, ಸಹಬಾಳ್ವೆಯ ವಿಶಾಲ ದೃಷ್ಟಿಕೋನ ಹೊಂದಿದ್ದ ಮಧ್ವಾಚಾರ್ಯರು ದಾಸ ಮತ್ತು ವ್ಯಾಸ ಸಾಹಿತ್ಯಕ್ಕೂ ಪ್ರೇರಕ ಶಕ್ತಿಯಾಗಿ 37ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದರು ಎಂದು ಅವರು ವಿವರಿಸಿದರು.



ಮಂಡಳಿ ಅಧ್ಯಕ್ಷ ಅಸಗೋಡು ಜಯಸಿಂಹ ಮಾತನಾಡಿ, ಪ್ರತಿವರ್ಷ ಅ.21ರಂದು ರಾಜ್ಯಾದ್ಯಂತ ಮಧ್ವಾಚಾರ್ಯ ಜಯಂತಿ ಆಚರಣೆಗೆ ಸರ್ಕಾರ ನಿರ್ಧರಿಸಿರುವುದು ಸಮಂಜಸ ಮತ್ತು ಸ್ವಾಗತಾರ್ಹ ಎಂದು ಸಂತಸ ವ್ಯಕ್ತಪಡಿಸಿ, ಈ ಮೂಲಕ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕೊಡುಗೆಗಳನ್ನು ಗೌರವಿಸುವ ಕರ್ನಾಟಕದ ಪರಂಪರೆಯನ್ನು ಸರ್ಕಾರ ಮುಂದುವರಿಸಿದೆ ಎಂದರು. ಕಾರ್ಯಕ್ರಮದಲ್ಲಿ ಮಂಡಳಿಯ ಪದಾಧಿಕಾರಿಗಳು ಹಾಜರಿದ್ದರು.

## ಯತ್ನಾಳ್ ಬಿಜೆಪಿ ಘರ್‌ವಾಪ್ಸಿ ಪ್ರಕ್ರಿಯೆ ಆರಂಭ

**ಬೆಂಗಳೂರು, ಅ.21:** ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತವರ ಕುಟುಂಬ ಸದಸ್ಯರ ವಿರುದ್ಧ ತಿರುಗಿ ಬಿದ್ದಿದ್ದ ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಧಾರವಾಡದ ಛಬ್ಬಿಯಲ್ಲಿ ನಡೆದ ಖಾಸಗಿ ಕಾರ್ಯ ಕ್ರಮದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರನ್ನು ಭೇಟಿಯಾದ ಬೆನ್ನಲ್ಲೇ ತಮ್ಮ ಬದ್ಧದ್ವೇಷಿ ಮಾಜಿ ಸಚಿವ ಮುರುಗೇಶ್ ನಿರಾಣಿ ಅವರೊಂದಿಗೆ ಚರ್ಚಿಸಿರುವುದು ರಾಜಕೀಯ ವಲಯದಲ್ಲಿ ವ್ಯಾಪಕ ಚರ್ಚೆಗೆ ಕಾರಣವಾಗಿದೆ.

ಈ ಮೂಲಕ ಬಿಜೆಪಿ ಫೈರ್‌ಬ್ರ್ಯಾಂಡ್‌ಗಳಾದ ಯತ್ನಾಳ್ ಹಾಗೂ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಅವರು ಬಿಜೆಪಿ ಘರ್‌ವಾಪ್ಸಿಗೆ ತೆರೆಮರೆಯಲ್ಲಿ ಸಿದ್ಧತೆಗಳು ನಡೆಯುತ್ತಿವೆ. ಬಸನಗೌಡ ಪಾಟೀಲ್ ಯತ್ನಾಳ್ ಹಾಗೂ ವಿಜಯೇಂದ್ರ ಭೇಟಿ ಬೆನ್ನಲ್ಲೇ ಯತ್ನಾಳ್ ಅವರು ಮುರುಗೇಶ್ ನಿರಾಣಿ ಅವರನ್ನು ಭೇಟಿಯಾಗಿದ್ದಾರೆ. ಬಾಗಲಕೋಟೆ ಯಲ್ಲಿರುವ ಬಿಜೆಪಿಯ ಹಿರಿಯ ನಾಯಕ ಮತ್ತು ರಾಜ್ಯಸಭಾ ಸದಸ್ಯರೂ ಆಗಿರುವ ನಾರಾಯಣಸಾ ಭಾಂಡಾ ಮನೆಗೆ ಯತ್ನಾಳ್ ಆಹ್ವಾನದ ಮೇರೆಗೆ ಆಗಮಿಸಿದ್ದರು.

ಆವೇಳೆ, ಅಲ್ಲಿ ಮುರುಗೇಶ್ ನಿರಾಣಿ ಕೂಡಾ ಹಾಜರಿದ್ದರು. ಸುಮಾರು ಎರಡು ಗಂಟೆಗಳ ಕಾಲ ಭಾಂಡಗೆ ನಿವಾಸದಲ್ಲಿದ್ದ ನಾಯಕರು ರಾಜಕೀಯ ವೈಷಮ್ಯ ಬಿಟ್ಟು ಮಾತುಕತೆ ನಡೆಸಿದರು ಎನ್ನಲಾಗಿದೆ.

ಬನ್ರೀ.. ಹಿಂದೂ ಹೃದಯ ಸಾಮ್ರಾಟ್ ಎಂದು ಯತ್ನಾಳ್ ಅವರನ್ನು ಆಹ್ವಾನಿಸಿದ ನಾರಾಯಣಸಾ ಭಾಂಡಾ, ಅವರನ್ನು ಸೋಫಾದಲ್ಲಿ ಕೂರಿಸಿದರು. ಸೋಫಾದ ಒಂದು ಕಡೆ ಯತ್ನಾಳ್, ಇನ್ನೊಂದು ಕಡೆ ನಿರಾಣಿ, ಮಧ್ಯದಲ್ಲಿ ಭಾಂಡಾ ಅವರಿದ್ದರು. ಯತ್ನಾಳ್ ಮತ್ತು ನಿರಾಣಿ, ಇಬ್ಬರೂ ತಮ್ಮ ನಡುವೆ ಏನೂ ಭಿನ್ನಾಭಿಪ್ರಾಯವಿಲ್ಲ ಎನ್ನುವ ರೀತಿಯಲ್ಲಿ ನಗುನಗುತ್ತಾ ಸಮಯ ವನ್ನು ಕಳೆದರು.

ರಾಜಕೀಯದಲ್ಲಿ ಯಾರೂ ಶಾಶ್ವತ ಮಿತ್ರರೂ ಇಲ್ಲ, ಶತ್ರುಗಳೂ ಅಲ್ಲ. ಯತ್ನಾಳ್ ನಮ್ಮ ಪಾರ್ಟಿ ಯಿಂದಲೇ ಶಾಸಕರಾದವರು, ಈಗ, ಅವರು ಉಚ್ಚಾಟನೆಗೊಂಡಿರ



ಬಹುದು. ಯತ್ನಾಳ್ ಅವರು ವಾಪಸ್ ಬರಬೇಕು ಎನ್ನುವುದು ನಮ್ಮೆಲ್ಲರ ಆಶಯ ಮತ್ತು ಒತ್ತಾಯ ಕೂಡಾ" ಎಂದು ಮುರುಗೇಶ್ ನಿರಾಣಿ ಹೇಳಿದ್ದಾರೆ.

ಬಿ.ವೈ. ವಿಜಯೇಂದ್ರ ಮತ್ತು ಯತ್ನಾಳ್ ಭೇಟಿ ವಿಚಾರದ ಬಗ್ಗೆ ಎಂಎಲ್‌ಸಿ ಸಿ.ಟಿ. ರವಿ ಪ್ರತಿಕ್ರಿಯಿಸಿದ್ದಾರೆ. ರಾಜಕೀಯ ಭೇಟಿಯೂ ವೈಯಕ್ತಿಕ ಭೇಟಿಯೋ ಗೊತ್ತಿಲ್ಲ. ದೌರ್ಬಲ್ಯಗಳು ಎಲ್ಲರಲ್ಲೂ ಇವೆ. ದೌರ್ಬಲ್ಯಗಳನ್ನು ದೂರ ಮಾಡಿಕೊಂಡು ಒಟ್ಟಾಗಿ ಹೋದರೆ ಖಂಡಿತವಾಗಿಯೂ ಒಂದು ಒಳ್ಳೆಯ ಸಂದೇಶ ಸಿಗಲಿದೆ. ಒಟ್ಟಾಗುವುದನ್ನು ಯಾರು ಬೇಡ ಅಂತಾರೆ. ಒಟ್ಟಾಗಬೇಕು. ದೌರ್ಬಲ್ಯ ಗಳನ್ನು ದೂರ ಮಾಡ್ಕೊಂಡು ಒಟ್ಟಾದರೆ ಒಳ್ಳೆ ಫಲಿತಾಂಶ ಖಂಡಿತ ಬರುತ್ತದೆ ಎಂದು ಹೇಳಿದ್ದರು.

## ದೇವಿಯನ್ನು ಭೀತಿಯಿಂದಲ್ಲ, ಪ್ರೀತಿಯಿಂದ ಆರಾಧಿಸಿ: ರಾಘವೇಶ್ವರ ಶ್ರೀ

- ನಮ್ಮೊಳಗಿರುವ ದೇವಿಯನ್ನು ಕಾಣಲು ನವರಾತ್ರಿ ಸೂಕ್ತ ಕಾಲ
- ಉಪವಾಸದಿಂದ ಆರೋಗ್ಯ ವೃದ್ಧಿ; ಹೋಮ, ಪಾರಾಯಣಗಳಿಂದ ಅಂತರ್ಮುಖಿ ದರ್ಶನ
- ಶ್ರೀಗಳ ಆಶೀರ್ವಾದ ಪಡೆದ ಸಂಸದ ತೇಜಸ್ವಿ ಸೂರ್ಯ, ಡಾ. ಟಿ. ಶ್ಯಾಮ್ ಭಟ್



ದೇವಿಯನ್ನು ಪ್ರೀತಿಯಿಂದ ಆರಾಧಿಸಬೇಕು ಹೊರತು ಭೀತಿ ಯಿಂದಲ್ಲ. ಪ್ರೀತಿಯಿಂದ ಮಾಡಿದಾಗ ಆಚರಣೆಗೆ ಅರ್ಥ ಬರುತ್ತದೆ. ಭೀತಿಯಿಂದ ಮಾಡಿದಾಗ ಯಾವುದೇ ಅರ್ಥವಿಲ್ಲ ಎಂದು ಶ್ರೀರಾಮಚಂದ್ರಾಪುರ ಮಠದ ಜಗದ್ಗುರು ಶಂಕರಾಚಾರ್ಯ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ಹೇಳಿದರು.

ಬೆಂಗಳೂರಿನ ಗಿರಿನಗರದಲ್ಲಿರುವ ಶ್ರೀರಾಮಚಂದ್ರಾಪುರ ಮಠದ ಶಾಖೆಯಲ್ಲಿ ಬುಧವಾರ ನಡೆದ 'ನವರಾತ್ರ ನಮಸ್ಯಾ' ಮಹಾ ಸಮಾರೋಪದ ಧರ್ಮ ಸಭೆಯಲ್ಲಿ ಮಾತನಾಡಿದ ಶ್ರೀಗಳು, ನಮ್ಮೊಳಗೇ ದೇವಿಯ ಸಾನ್ನಿಧ್ಯವಿದ್ದು, ನಮ್ಮ ಹೃದಯ ಮಂದಿರದಲ್ಲಿರುವ ದೇವಿಯನ್ನು ಅಂತರ್ಮುಖಿಗಳಾಗಿ ನೋಡಲು ಸೂಕ್ತ ಕಾಲ ಈ ನವರಾತ್ರಿ. ಹೋಮ, ಪಾರಾಯಣ, ದೀಪ ನಮಸ್ಕಾರ ಎಲ್ಲವೂ ನಮ್ಮೊಳಗಿರುವ ದೇವಿಯ ಸಾನ್ನಿಧ್ಯವನ್ನು ಕಾಣಲು ಇರುವ ಉಪಕರಣಗಳು. ಸತ್ತ್ವ - ರಜೋ - ತಮೋಗುಣಗಳಿಂದಲೇ ಪ್ರಪಂಚ ನಿರ್ಮಿತವಾಗಿದೆ. ಆ ಮೂರು ಗುಣಗಳೇ ತ್ರಿಗುಣಾತ್ಮಿಕಾ ದೇವಿಯಾಗಿದ್ದು, ಆ ಮೂರು ಗುಣಗಳ ಸಮತೋಲನವನ್ನು ಕಲಿತರೆ ನಾವು ಜೀವನವನ್ನು ಗೆಲ್ಲಬಹುದು ಎಂದರು.

ನವರಾತ್ರಿಯಲ್ಲಿ ಉಪವಾಸದ ಆಚರಣೆಯು ವಿಶೇಷವಾಗಿದೆ. ಸರಿಯಾದ ಉಪವಾಸದ ಆಚರಣೆಯಿಂದ ಆರೋಗ್ಯ ವೃದ್ಧಿಯನ್ನು ಕಾಣಬಹುದಾಗಿದ್ದು, ಇದು ನವರಾತ್ರಿ ಆಚರಣೆಯ ಬಾಹ್ಯ ಫಲವಾಗಿದೆ. ನವರಾತ್ರಿಯಲ್ಲಿರುವ 'ನವ'ವನ್ನು ಹೊಸತನದ ಕಾಲ ಎಂಬುದಾಗಿಯೂ ಪರಿಗಣಿಸಬಹುದಾಗಿದ್ದು, ನಮ್ಮ ಜೀವನದ ತಪ್ಪುಗಳನ್ನು ತಿದ್ದಿಕೊಳ್ಳಲು ಈ ನವರಾತ್ರಿಯ ವ್ರತವನ್ನು ಬಳಸಿಕೊಳ್ಳಬಹುದು ಎಂದು ಅಭಿಪ್ರಾಯಪಟ್ಟರು.

ದೇವಿ ಪಾರಾಯಣ ಎಂಬುದು ಕೇವಲ ಕಾಟಾಚಾರದ ಕ್ರಮವಾಗ ಬಾರದು. ಸಪ್ತಶತೀ, ಲಲಿತೋಪಾಖ್ಯಾನ ಗಳಲ್ಲಿ ದೇವಿಯ ಅವತಾರ ವಿಶೇಷತೆಗಳಿದ್ದು, ಅದನ್ನು ಓದಿದಾಗ ದೇವಿಯನ್ನು ನಮ್ಮ ಮನಸ್ಸಿನೊಳಗೆ ದೇವಿಯ ಲೀಲೆಯನ್ನು ತುಂಬಿಕೊಳ್ಳಬಹುದು. ಧ್ಯಾನದಲ್ಲಿ ದೇವಿಯನ್ನು ಗಂಟೆಗಟ್ಟಲೆ ತಂದುಕೊಳ್ಳುವುದು ಎಲ್ಲರಿಗೂ ಕಷ್ಟಸಾಧ್ಯ. ಆದರೆ ಪಾರಾಯಣಗಳಿಂದ ಸುಲಭವಾಗಿ ಗಂಟೆಗಟ್ಟಲೆ ದೇವಿಯನ್ನು ನಾವು ನಮ್ಮ ಮನಸ್ಸಿನಲ್ಲಿ ತುಂಬಿಕೊಳ್ಳಬಹುದು ಎಂದರು.

ಸಂಸದ ತೇಜಸ್ವಿ ಸೂರ್ಯ, ಖ್ಯಾತ ಗಾಯಕಿ ಶಿವಶ್ರೀ ಸ್ಕಂದಪ್ರಸಾದ್ ಶ್ರೀಗಳ ಆಶೀರ್ವಾದ ಪಡೆದರು. ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಡಾ.ಟಿ.ಶ್ಯಾಂಭಟ್ ಗುರುಭಿಕ್ಷಾ ಸೇವೆ ಸಮರ್ಪಿಸಿ ಆಶೀ ರ್ವಾದ ಪಡೆದರು. ಹಿರಿಯ ನ್ಯಾಯವಾದಿ ರಾಜಶೇಖರ ಹಿಲ್ಯಾರ್, ಖ್ಯಾತ ಗಾಯಕ ಗರ್ತಿಕೆರೆ ರಾಘಣ್ಣ ಶ್ರೀಗಳ ಆಶೀರ್ವಾದ ಪಡೆದರು. ಪ್ರಧಾನ ಸಂಚಾಲಕ ರಮೇಶ ಹೆಗಡೆ ಕೊರಮಂಗಲ ಸಭಾ ಪೂಜೆ ನೆರವೇರಿಸಿದರು. ಸಂಚಾಲಕ ದೀಪಕ ಹೆಗಡೆ ಗೋಳಿಕೈ ಕಾರ್ಯಕ್ರಮದ ಅವಲೋಕನ ಮಾಡಿದರು. ಶ್ರೀಮಠದ ಪ್ರಶಾನಾಧಿಕಾರಿ ಸಂತೋಷ ಹೆಗಡೆ, ವಿತ್ತಾಧ್ಯಕ್ಷ ಗಣೇಶ ಜೆ.ಎಲ್, ಹವ್ಯಕ ಮಹಾಮಂಡಲದ ಅಧ್ಯಕ್ಷ ಡಾ. ವೈ. ವಿ. ಕೃಷ್ಣಮೂರ್ತಿ, ಕಾರ್ಯದರ್ಶಿ ಮಹೇಶ ಚಟ್ನಳ್ಳಿ, ಕಾರ್ಯಕ್ರಮದ ಸಂಚಾಲಕ ವಾದಿರಾಜ ಸಾಮಗ, ಶ್ರೀವತ್ಸ ಮೂಡುಗೋಡು, ಗಾಯತ್ರೀ ಭಾಗ್ವತ್, ಶಿವರಾಜ ಪೆರ್ಮುಖ ಉಪಸ್ಥಿತರಿದ್ದರು.

## ಕರ್ನಾಟಕದ ನೂತನ ರಾಜ್ಯಪಾಲರಿಗೆ ಶುಭಹಾರೈಸಿದ ವಿಧಾನ ಪರಿಷತ್ ಸದಸ್ಯ ರಮೇಶ್ ಬಾಬು

**ಬೆಂಗಳೂರು, ಅ.21-**ಕರ್ನಾಟಕದ ರಾಜ್ಯಪಾಲರಾಗಿ ಗೌರವಾನ್ವಿತ ಹುದ್ದೆಯನ್ನು ಅಲಂಕರಿಸಿರುವ ನಿಮಗೆ ಹೃತ್ಪೂರ್ವಕ ಅಭಿನಂದನೆಗಳು ಹಾಗೂ ಶುಭಾಶಯಗಳನ್ನು ಸಲ್ಲಿಸುತ್ತೇನೆ.

ಪ್ರಜಾಪ್ರಭುತ್ವದ ನಾಯಕಿಯಾಗಿ ನೀವು ಗಳಿಸಿರುವ ದೀರ್ಘಕಾಲದ ಅನುಭವ, ಸಾರ್ವಜನಿಕ ಜೀವನದ ಕುರಿತಾದ ನಿಮ್ಮ ತಿಳಿವಳಿಕೆ ಹಾಗೂ ಪ್ರಜಾಪ್ರಭುತ್ವದ ಪ್ರಕ್ರಿಯೆಗಳೊಂದಿಗಿನ ನಿಮ್ಮ ಒಡನಾಟವು ಕರ್ನಾಟಕದ ಜನರಲ್ಲಿ ಹೆಚ್ಚಿನ ನಿರೀಕ್ಷೆಗಳನ್ನು ಮೂಡಿಸಿದೆ. ನಿಮ್ಮ ಅಧಿಕಾರಾವಧಿಯಲ್ಲಿ ಸಾಂವಿಧಾನಿಕ ಮೌಲ್ಯಗಳು, ಪ್ರಜಾಪ್ರಭುತ್ವದ ಸಂಪ್ರದಾಯಗಳು, ಸಾಮಾಜಿಕ ಸಾಮರಸ್ಯ ಹಾಗೂ ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿಯ ಆಶಯಗಳು ಮತ್ತಷ್ಟು ಬಲಗೊಳ್ಳಲಿವೆ ಎಂಬ ಪ್ರಾಮಾಣಿಕ ನಿರೀಕ್ಷೆ ನನ್ನದು.

ಕರ್ನಾಟಕವು ಪ್ರಗತಿಪರ ಚಿಂತನೆ, ಸಾಮಾಜಿಕ ಸುಧಾರಣೆ, ಸಮಾನತೆ ಮತ್ತು ಜನರ ಪಾಲ್ಗೊಳ್ಳುವಿಕೆಯ ಶ್ರೀಮಂತ ಪರಂಪರೆಯನ್ನು ಹೊಂದಿದೆ. ಸಾಮಾಜಿಕ ಸುಧಾರಕರ ಕೊಡುಗೆಗಳಿಂದ ಹಿಡಿದು ವಿವಿಧ ಸರ್ಕಾರಗಳು ಜಾರಿಗೆ ತಂದ ಪ್ರಗತಿಪರ ನೀತಿಗಳವರೆಗೆ, ನಮ್ಮ ರಾಜ್ಯವು ಸಾಮಾಜಿಕ ನ್ಯಾಯ ಮತ್ತು ಸಮಾನ ಅವಕಾಶಗಳ ಆಶಯಗಳನ್ನು ಸಾಕಾರಗೊಳಿಸಲು ನಿರಂತರವಾಗಿ ಪ್ರಯತ್ನಿಸಿದೆ. ಕರ್ನಾಟಕದ ಸಾಂವಿಧಾನಿಕ ಮುಖ್ಯಸ್ಥರಾಗಿ ಈ ಮೌಲ್ಯಗಳನ್ನು ಸಂರಕ್ಷಿಸುವಲ್ಲಿ ಹಾಗೂ ಸಂವಿಧಾನದ ಆಶಯಗಳು ಸಾರ್ವಜನಿಕ ಜೀವನಕ್ಕೆ ಮಾರ್ಗದರ್ಶನ ನೀಡುವುದನ್ನು ಖಾತರಿಪಡಿಸುವಲ್ಲಿ ನಿಮ್ಮ ಹುದ್ದೆಯು ಮಹತ್ವದ ಸ್ಥಾನವನ್ನು ಹೊಂದಿದೆ.

ಕರ್ನಾಟಕದಲ್ಲಿ ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು ಮತ್ತು ದಲಿತರನ್ನು ಒಳಗೊಂಡ ಅಹಿಂದ ಸಮುದಾಯಗಳ ಜನಸಂಖ್ಯೆ ಗಣನೀಯವಾಗಿದೆ. ಇದರೊಂದಿಗೆ ಆರ್ಥಿಕವಾಗಿ ದುರ್ಬಲ ವರ್ಗಗಳು ಹಾಗೂ ಐತಿಹಾಸಿಕವಾಗಿ ಅವಕಾಶ ಗಳಿಂದ ವಂಚಿತವಾಗಿರುವ ಇತರ ಸಮುದಾಯಗಳೂ ಇವೆ. ಈ ವರ್ಗಗಳು ಸಮಾನ ಅವಕಾಶ, ಘನತೆಯ ಬದುಕು, ಸೂಕ್ತ ಪ್ರಾತಿನಿಧ್ಯ ಮತ್ತು ರಾಜ್ಯದ ಅಭಿವೃದ್ಧಿಯಲ್ಲಿ ನ್ಯಾಯಯುತ ಪಾಲು ಪಡೆಯಲು ಬಹುಕಾಲದಿಂದ ಆಶಿಸುತ್ತಿವೆ. ಅವರ ನಿರೀಕ್ಷೆಗಳು ಕೇವಲ ಕಲ್ಯಾಣ ಯೋಜನೆಗಳಿಗೆ ಸೀಮಿತವಾಗಿಲ್ಲ.



ಸಮಾನತೆ, ಸಾಂವಿಧಾನಿಕ ರಕ್ಷಣೆ, ಶಿಕ್ಷಣ ಮತ್ತು ಉದ್ಯೋಗದ ಅವಕಾಶಗಳು, ಸಾಮಾಜಿಕ ಭದ್ರತೆ ಹಾಗೂ ಪ್ರಜಾಸತ್ತಾತ್ಮಕ ಸಂಸ್ಥೆಗಳಲ್ಲಿ ಅರ್ಥಪೂರ್ಣ ಪಾಲ್ಗೊಳ್ಳುವಿಕೆಯೂ ಅವುಗಳಲ್ಲಿ ಸೇರಿವೆ.

ಈ ಹಿನ್ನೆಲೆಯಲ್ಲಿ, ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು, ಅಲ್ಪಸಂಖ್ಯಾತರು, ಮಹಿಳೆಯರು, ಕಾರ್ಮಿಕರು, ರೈತರು ಮತ್ತು ಇತರ ದುರ್ಬಲ ವರ್ಗಗಳು ಸೇರಿದಂತೆ ಸಮಾಜದ ಎಲ್ಲ ವರ್ಗಗಳಲ್ಲಿಯೂ ನಿಮ್ಮ ಅಧಿಕಾರಾವಧಿಯು ವಿಶ್ವಾಸ ಮೂಡಿಸಲಿದೆ ಎಂಬ ಆಶಯ ನನ್ನದು. ಪ್ರತಿಯೊಬ್ಬ ನಾಗರಿಕನ ಹಕ್ಕುಗಳು ಮತ್ತು ಘನತೆಯನ್ನು ರಕ್ಷಿಸುವ, ಸಮಾನತೆ ಹಾಗೂ ನಿಷ್ಪಕ್ಷಪಾತದ ಸಂಕೇತವಾಗಿ ನಿಮ್ಮ ಸಾಂವಿಧಾನಿಕ ಹುದ್ದೆ ಕಾರ್ಯನಿರ್ವಹಿಸಬಲ್ಲದು. ಕರ್ನಾಟಕದ ವೈವಿಧ್ಯಮಯ ಸಾಮಾಜಿಕ ವಾಸ್ತವಗಳನ್ನು ಹಾಗೂ ಹೆಚ್ಚಿನ ಅವಕಾಶ ಮತ್ತು ಸಾಮಾಜಿಕ ಪ್ರಗತಿಗಾಗಿ ಹಂಬಲಿಸುತ್ತಿರುವ ಸಮುದಾಯಗಳ ಆಶೋತ್ತರಗಳನ್ನು ಅರ್ಥಮಾಡಿಕೊಳ್ಳಲು ನಿಮ್ಮ ಪ್ರಜಾಸತ್ತಾತ್ಮಕ ಅನುಭವ ಸಹಕಾರಿಯಾಗಲಿದೆ ಎಂಬ ವಿಶ್ವಾಸ ನನಗಿದೆ.

ಭಾರತದ ಸಂವಿಧಾನದ ಅಡಿಯಲ್ಲಿ ಹಲವು ಜವಾಬ್ದಾರಿಗಳನ್ನು ನಿರ್ವಹಿಸುವ ಮಹತ್ವದ ಸಾಂವಿಧಾನಿಕ ಸಂಸ್ಥೆಯೇ ರಾಜ್ಯಪಾಲರ ಕಚೇರಿ. ಪ್ರಜಾಸತ್ತಾತ್ಮಕ ಸಂಸ್ಥೆಗಳ ಮೇಲೆ ಜನರ ವಿಶ್ವಾಸ ಉಳಿಯಬೇಕೆಂಬ ನಿರೀಕ್ಷೆ ಹೆಚ್ಚಿರುವ ಇಂದಿನ ದಿನಗಳಲ್ಲಿ ಸಾಂವಿಧಾನಿಕ ಕರ್ತವ್ಯಗಳನ್ನು ನಿಷ್ಪಕ್ಷಪಾತವಾಗಿ ನಿರ್ವಹಿಸುವುದು ವಿಶೇಷ ಮಹತ್ವವನ್ನು ಹೊಂದಿದೆ.ನಿಮ್ಮ ಅಧಿಕಾರಾವಧಿಯಲ್ಲಿ ಸಾಂವಿಧಾನಿಕ ನೈತಿಕತೆ, ಒಕ್ಕೂಟ ವ್ಯವಸ್ಥೆ, ಜಾತ್ಯತೀತತೆ, ಸಾಮಾಜಿಕ ನ್ಯಾಯ ಮತ್ತು ಪ್ರಜಾಸತ್ತಾತ್ಮಕ ಹೊಣೆಗಾರಿಕೆಯ ತತ್ವಗಳು ಎತ್ತಿಹಿಡಿಯಲ್ಪಡಲಿವೆ ಎಂದು ಆಶಿಸುತ್ತೇನೆ.

ಜನರಿಂದ ಆಯ್ಕೆಯಾದ ಸರ್ಕಾರದ ಜನಾದೇಶಕ್ಕೆ ಗೌರವ ನೀಡುವುದು, ಸಂವಿಧಾನಬದ್ಧ ಅಧಿಕಾರ ಮತ್ತು ಜವಾಬ್ದಾರಿಗಳ ವಿಭಜನೆಯನ್ನು ಪಾಲಿಸುವುದು ಹಾಗೂ ರಾಜ್ಯಪಾಲರು ಮತ್ತು ಚುನಾಯಿತ ರಾಜ್ಯ ಸರ್ಕಾರದ ನಡುವಿನ ಸಂಬಂಧಗಳಿಗೆ ಸಂಬಂಧಿಸಿದ ಸ್ಥಾಪಿತ ಸಂಪ್ರದಾಯಗಳನ್ನು ಗೌರವಿಸುವುದು ಕರ್ನಾಟಕದ ಪ್ರಜಾಪ್ರಭುತ್ವದ ಅಡಿಪಾಯವನ್ನು ಮತ್ತಷ್ಟು ಬಲಪಡಿಸಲಿದೆ. ರಾಜಭವನ/ಲೋಕಭವನದಲ್ಲಿ ಸಾಂವಿಧಾನಿಕ ಜವಾಬ್ದಾರಿಗಳನ್ನು ಪಾರದರ್ಶಕತೆ, ಘನತೆ ಮತ್ತು ಜನರ ಕಾಳಜಿಗಳಿಗೆ ಸ್ಪಂದಿಸುವ ಮನೋಭಾವ ದೊಂದಿಗೆ ನಿರ್ವಹಿಸಲಾಗುತ್ತದೆ ಎಂಬ ನಿರೀಕ್ಷೆಯೂ ನನ್ನದಾಗಿದೆ. ಕರ್ನಾಟಕದ ಮಾಜಿ ರಾಜ್ಯಪಾಲೆ ವಿ.ಎಸ್. ರಮಾದೇವಿ ರಾಜಭವನವನ್ನು ಸಾರ್ವಜನಿಕರಿಗೆ ಮುಕ್ತಗೊಳಿಸಲು ಕೈಗೊಂಡಿದ್ದ ಶ್ಲಾಘನೀಯ ಪ್ರಯತ್ನಗಳತ್ತ ನಿಮ್ಮ ಗಮನ ಸೆಳೆಯಲು ಬಯಸುತ್ತೇನೆ ಎಂದು ರಮೇಶ್ ಬಾಬು ತಿಳಿಸಿದ್ದಾರೆ.

# ಒಳ್ಳೆಯ ಕಾಲ ಬರಲಿದೆ ತಾಳ್ಮೆಯಿಂದಿರಿ ಕಾರ್ಯಕರ್ತರಿಗೆ ಎಚ್‌ಡಿಕೆ ಕಿವಿಮಾತು



**ಮದ್ದೂರು, ಅ.21:** ರಾಜ್ಯ ರಾಜಕೀಯದಲ್ಲಿ ಸ್ಟಿಂಗ್ ಆಪರೇಷನ್ ಕಿಚ್ಚು ಹತ್ತಿಕೊಂಡಿರುವ ಹೊತ್ತಿನಲ್ಲೇ, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಬೆಂಬಲಿಗರನ್ನು ಸಮಾಧಾನ ಪಡಿಸುವ ಮೂಲಕ ಹೊಸ ಸಂಚಲನ ಮೂಡಿಸಿದ್ದಾರೆ.

ನಾಗಮಂಗಲಕ್ಕೆ ತೆರಳುವ ಮಾರ್ಗಮಧ್ಯೆ ಮದ್ದೂರಿನಲ್ಲಿ ನೆರೆದಿದ್ದ ನೂರಾರು ಜೆಡಿಎಸ್ ಕಾರ್ಯಕರ್ತರು, ಕುಮಾರಸ್ವಾಮಿ ಅವರ ವಿರುದ್ಧ ಕೇಳಿಬರುತ್ತಿರುವ ನಿಂದನಾತ್ಮಕ ಮಾತುಗಳಿಂದ ಆಕ್ರೋಶಗೊಂಡು ರೊಚ್ಚಿಗೆದ್ದಿದ್ದರು. ತಮ್ಮ ನಾಯಕನ ವಿರುದ್ಧದ ವಾಗ್ದಾಳಿಗಳನ್ನು ಸಹಿಸಲಾಗದೆ ಭಾವುಕರಾದ ಕಾರ್ಯ ಕರ್ತರನ್ನು ಕಂಡು ಕುಮಾರಸ್ವಾಮಿ ಅವರು, ಒಳ್ಳೆಯ ಕಾಲ ಬರಲಿದೆ ಸುಮ್ಮನಿರಿ, ನಿಂದಿಸು ವವರ ಬಗ್ಗೆ ತಲೆಕೆಡಿಸಿಕೊಳ್ಳ ಬೇಡಿ, ನಾವೆಲ್ಲವೂ ನ್ಯಾಯಯುತವಾಗಿ ಹೋರಾಟ ಮಾಡೋಣ. ತಾಯಿ ಚಾಮುಂಡೇಶ್ವರಿ ಆಶೀರ್ವಾದ ನಮ್ಮ ಮೇಲಿದೆ, ಭಗವಂತ ಎಲ್ಲವನ್ನೂ ನೋಡಿ ಕೊಳ್ಳುತ್ತಾನೆ. ಸದ್ಯಕ್ಕೆ ಎಲ್ಲವನ್ನೂ ಸಹಿಸಿಕೊಳಿ ಎಂದಿದ್ದಾರೆ.

**ಸಿದ್ದರಾಮಯ್ಯ ಕ್ಯಾಂಪ್‌ನಲ್ಲಿ ತಡರಾತ್ರಿ ಸಭೆ:** ಇತ್ತ ಕುಮಾರಸ್ವಾಮಿ ಅವರು ಕಾರ್ಯಕರ್ತರಲ್ಲಿ ವಿಶ್ವಾಸ ತುಂಬುತ್ತಿದ್ದರೆ, ಅತ್ತ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಟಿಂಗ್ ಆಪರೇಷನ್ ಹೆಸರಿನಲ್ಲಿ ನಡೆಯುತ್ತಿರುವ ಪಿತೂರಿಯನ್ನು ಮೆಟ್ಟಿ ನಿಲ್ಲಲು ಭರ್ಜರಿ ತಯಾರಿ ನಡೆಸಿದ್ದಾರೆ. ತಡರಾತ್ರಿ ತಮ್ಮ ಸರ್ಕಾರಿ ನಿವಾಸದಲ್ಲಿ ಆಪ್ತ ಸಚಿವರ ಜೊತೆ ಸುಮಾರು ಎರಡು ಗಂಟೆ ಕಾಲ ಸುದೀರ್ಘ ಚರ್ಚೆ ನಡೆಸಿದ ಮುಖ್ಯಮಂತ್ರಿಗಳು, ವಿರೋಧ ಪಕ್ಷಗಳ ದಾಳಿಗೆ ಹೇಗೆ ತಿರುಗೇಟು ನೀಡಬೇಕು ಎಂಬ ಬಗ್ಗೆ ರಹಸ್ಯ ವ್ಯೂಹ ರಚಿಸಿದ್ದಾರೆ. ಈ ಸಭೆಯಲ್ಲಿ ಕೆ.ಎಚ್.ಮುನಿಯಪ್ಪ, ಚಲುವರಾಯಸ್ವಾಮಿ, ಜಮೀರ್ ಅಹಮದ್ ಹಾಗೂ ಕೃಷ್ಣ ಬೈರೇಗೌಡ ಅವರಂತಹ ಪ್ರಭಾವಿ ಸಚಿವರು ಭಾಗಿಯಾಗಿದ್ದರು ಎನ್ನಲಾಗಿದೆ.

# ಕನ್ನಡ ಉಳಿಸುವ ಹೊಣೆ ಯುವಜನರ ಮೇಲಿದೆ: ಸಂಜೀವಕುಮಾರ ಅತಿವಾಳೆ




ಬೀದರ ನಗರದ ಆದರ್ಶ ಐಟಿಐ ಕಾಲೇಜ್‌ನಲ್ಲಿ ಜಿಲ್ಲಾ ಗೊಂಡ ವಿದ್ಯಾರ್ಥಿ ಸಂಘದ ವತಿಯಿಂದ ಆಯೋಜಿಸಿದ್ದ ಕನ್ನಡ ಜಾಗೃತಿ ಕಾರ್ಯಕ್ರಮವನ್ನು ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಸಂಜೀವಕುಮಾರ ಅತಿವಾಳೆ ಅವರು ಉದ್ಘಾಟಿಸಿದರು.

**ಬೀದರ್, ಅ.21:** ಕನ್ನಡ ಭಾಷೆ, ನಾಡು, ನುಡಿ ಹಾಗೂ ಸಂಸ್ಕೃತಿಯನ್ನು ಉಳಿಸುವ ಹೊಣೆ ಯುವಜನರ ಮೇಲಿದೆ ಎಂದು ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಸಂಜೀವಕುಮಾರ ಅತಿವಾಳೆ ಹೇಳಿದರು.

ಕನ್ನಡ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಯುವ ಜನರು ಕನ್ನಡ ಭಾಷೆಯ ಮಹತ್ವ ಅರಿತು, ದೈನಂದಿನ ಬದುಕಿನಲ್ಲಿ ಕನ್ನಡಕ್ಕೆ ಆದ್ಯತೆ ನೀಡಬೇಕು. ಭಾಷೆಯ ಮೇಲಿನ ಅಭಿಮಾನ ಕೇವಲ ಮಾತಿಗೆ ಸೀಮಿತ ವಾಗದೆ, ಅದರ ಬಳಕೆ ಹಾಗೂ ಬೆಳವಣಿಗೆಯ ಮೂಲಕ ವ್ಯಕ್ತವಾಗಬೇಕು. ಕನ್ನಡಕ್ಕೆ ತನ್ನದೇ ಶ್ರೀಮಂತ ಇತಿಹಾಸ, ಸಾಹಿತ್ಯಿಕ ಪರಂಪರೆ ಹಾಗೂ ಸಾಂಸ್ಕೃತಿಕ ವೈಭವವಿದೆ. ಇಂತಹ ಪರಂಪರೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಕಾರ್ಯವಾಗಬೇಕು. ವಿದ್ಯಾರ್ಥಿಗಳು ಕನ್ನಡ ಸಾಹಿತ್ಯ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಕನ್ನಡದ ನೆಲ, ಜಲ, ಭಾಷೆ ಹಾಗೂ ಸಂಸ್ಕೃತಿಯ ಬಗ್ಗೆ ಗೌರವ ಹೊಂದುವುದು ಬಹಳ ಮುಖ್ಯ. ಅಧ್ಯಕ್ಷತೆ ವಹಿಸಿದ್ದ ಸಾಹಿತಿ ಆತ್ಮಾನಂದ ಬಂಬುಳಗಿ ಮಾತನಾಡಿ, ಕನ್ನಡ ಜಾಗೃತಿ ಎನ್ನುವುದು ಒಂದು ದಿನದ ಕಾರ್ಯಕ್ರಮಕ್ಕೆ ಸೀಮಿತವಾಗ ಬಾರದು. ವಿದ್ಯಾರ್ಥಿಗಳಲ್ಲಿ ಕನ್ನಡ ಭಾಷೆಯ ಬಗ್ಗೆ ಪ್ರೀತಿ, ಅಭಿಮಾನ ಹಾಗೂ ಗೌರವ ಬೆಳೆಸುವ ನಿರಂತರ ಪ್ರಯತ್ನ ನಡೆಯಬೇಕು ಎಂದರು.

ಸಾಹಿತಿ ಮಲ್ಲಿಕಾರ್ಜುನ ಮುರ್ಕೆ ವಿಶೇಷ ಉಪನ್ಯಾಸ ನೀಡಿ, ವಿದ್ಯಾರ್ಥಿಗಳು ಕನ್ನಡ ಸಾಹಿತ್ಯವನ್ನು ಅಭ್ಯಾಸ ಮಾಡುವುದರೊಂದಿಗೆ ನಾಡಿನ ಇತಿಹಾಸ ಮತ್ತು ಮಹನೀಯರ ಜೀವನಾದರ್ಶಗಳನ್ನು ತಿಳಿದುಕೊಳ್ಳಬೇಕು. ಭಾಷೆಯ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಹಾಗೂ ನಾಡಿನ ಬಗ್ಗೆ ಅಭಿಮಾನ ಬೆಳೆಸಲು ಸಹಕಾರಿಯಾಗುತ್ತವೆ ಎಂದರು.

## ಒಗ್ಗಟ್ಟಿನಿಂದ ಹೋದರೆ ಬಿಜೆಪಿ ದೊಡ್ಡ ವಿಜಯ ಸಾಧಿಸುವ ವಿಶ್ವಾಸ: ಬಸವರಾಜ ಬೊಮ್ಮಾಯಿ

# ಸ್ಟಿಂಗ್ ತನಿಖೆ, ಕರ್ನಾಟಕ ಪೊಲೀಸರಿಂದ ಸತ್ಯ ಹೊರಬರಲು ಸಾಧ್ಯವಿಲ್ಲ

ಹಾವೇರಿ, ಅ.21– ಮುಂಬರುವ ದಿನಗಳಲ್ಲಿ ಒಗ್ಗಟ್ಟಿನಿಂದ ಒಂದು ಧ್ವನಿಯಾಗಿ ಹೋದರೆ ಬಿಜೆಪಿ ಬಹಳ ದೊಡ್ಡ ಪ್ರಮಾಣದ ವಿಜಯವನ್ನು ಸಾಧಿಸಬಹುದು ಅನ್ನುವುದು ನಮ್ಮೆಲ್ಲರ ಅಭಿಪ್ರಾಯ, ಕಾರ್ಯಕರ್ತರ ಅಭಿಪ್ರಾಯವೂ ಆಗಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯ ಪಟ್ಟಿದ್ದಾರೆ.

ಹಾವೇರಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿ, ಬಿಜೆಪಿಯ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಭೇಟಿಯ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ರಾಜಕಾರಣದಲ್ಲಿ ಯಾರು ಶಾಶ್ವತ ಶತ್ರುಗಳಿಲ್ಲ. ನನ್ನ ಪ್ರಕಾರ ಯಾರು ಶತ್ರುಗಳೇ ಇಲ್ಲ. ವೈಪೋಟಿ ಇರುತ್ತೆ ಅಷ್ಟೇ. ಹೀಗಾಗಿ ಕೂಡಿ ಹೋಗುವುದು ಬಹಳ ಒಳ್ಳೆಯದು. ಒಗ್ಗಟ್ಟಿನಿಂದ ಹೋಗುವುದು ಬಹಳ ಒಳ್ಳೆಯದು. ಒಳ್ಳೆಯ ಲಕ್ಷಣ. ಒಗ್ಗಟ್ಟಿನಿಂದ ಒಂದು ಧ್ವನಿಯಾಗಿ ಹೋದರೆ ಖಂಡಿತ ಬಿಜೆಪಿ ಬಹಳ ದೊಡ್ಡ ಪ್ರಮಾಣದ ಒಂದು ವಿಜಯವನ್ನು ಸಾಧಿಸಬಹುದು ಅನ್ನುವುದು ನಮ್ಮೆಲ್ಲರ ಅಭಿಪ್ರಾಯ, ಕಾರ್ಯ ಕರ್ತರ ಅಭಿಪ್ರಾಯ ಅದೇ ಆಗಿದೆ. ಆ ಹಿನ್ನಲೆಯಲ್ಲಿ ಬರುವಂತಹ ದಿನಗಳಲ್ಲಿ ಇಂತಹ ಇನ್ನೂ ಹಲವಾರು ಬೆಳವಣಿಗೆಗಳನ್ನು ನಾವು ನೋಡುತ್ತೇವೆ ಅಂತ ಆಶಾಭಾವನೆ ಇದೆ ಎಂದು ಹೇಳಿದರು.

**ಸ್ಟಿಂಗ್ ಸಿಬಿಐ ತನಿಖೆಯಾಗಲಿ**

ರಾಜ್ಯದಲ್ಲಿ ನಡೆಯುತ್ತಿರುವ ಸ್ಟಿಂಗ್ ವಿಚಾರದ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಅದು ತನಿಖೆ ಆಗಬೇಕು. ಬರಿ ಹೇಳಿಕೆಗಳಿಂದ ಏನು ಗೊತ್ತಾಗಲ್ಲ. ತನಿಖೆ ಆಗಬೇಕು. ಈಗ ಸಿದ್ಧರಾಮಯ್ಯ ಅವರು ಕೊಟ್ಟಿರುವ ಒಂದು ಮನವಿಯ ಮೇಲೆ ತನಿಖೆ ಆಗುತ್ತಿದೆ. ಆದ್ದರಿಂದ ಗಂಭೀರವಾದ ತನಿಕೆ ಆಗುತ್ತಿಲ್ಲ. ಸಂಪೂರ್ಣ ಯಾರ್‍ಯಾರ ಮೇಲೆ ಸ್ಟಿಂಗ್ ಆಗಿದೆ ಅದಕ್ಕೆ ಕಾರಣೀಭೂತರು ಹಲವಾರು ಜನ ಇದ್ದಾರೆ,

ಹಲವಾರು ರೀತಿಯಲ್ಲಿದೆ. ಅದಕ್ಕೆ ಸಮಗ್ರವಾದಂತ ತನಿಖೆ ಆಗಬೇಕು. ಯಾವುದೋ ಒಂದು ದೂರನ್ನು ಸುಮ್ಮನೆ ತನಿಖೆ ಮಾಡೋಕೆ ಸಾಧ್ಯವಿಲ್ಲ. ಸಮಗ್ರವಾಗಿ ಏನು ಈ ವ್ಯವಹಾರ ನಡೀತಾ ಇದೆ ಕರ್ನಾಟಕದ ರಾಜಕಾರಣದಲ್ಲಿ ನೈತಿಕ ನೆಲ ಮಟ್ಟ ಕುಸಿಯುವಂತಹ ಒಂದು ಪ್ರಸಂಗ ಬಂದಿದೆ. ಇದಕ್ಕೆ ಸ್ವಚ್ಛ ಆಗಬೇಕಾದರೆ ಸಿಬಿಐ ತನಿಖೆ ಆಗಬೇಕು. ಈ ಕರ್ನಾಟಕ ಪೊಲೀಸ್ ರವರಿಂದ ಸ್ವತಂತ್ರವಾದ ತನಿಖೆ ಆಗಲು ಸಾಧ್ಯವಿಲ್ಲ. ಎಷ್ಟು ಎಸ್.ಐ.ಟಿ ಗಳನ್ನು ಮಾಡಿದ್ದಾರೆ, ಎಲ್ಲ ಮಾಡಿದ್ದಾರೆ. ಯಾವುದಾದರೂ ಅದರಲ್ಲಿ ಸತ್ಯ ಬಂದಿದಿಯಾ? ಆದ್ದರಿಂದ




ಜನಕ್ಕೆ ವಿಶ್ವಾಸ ಇಲ್ಲ. ಮತ್ತು ಇದನ್ನು ನಮ್ 'ಡೆ ಒಂದು ಗಾದೆ ಇದೆ. ಹೆಗ್ಗಣ ಒಳಗೆ ಇಟ್ಟು ಗುದ್ದು ಮುಚ್ಚಿದ ಹಾಗೆ ಹಂಗಾಗಬಾರದು. ಸಮಗ್ರ ತನಿಖೆ ಆಗಬೇಕು. ಅದು ಸಿಬಿಐ ತನಿಖೆ ಆಗಬೇಕು ಎಂದು ಆಗ್ರಹಿಸಿದರು.

ಗೃಹಸಚಿವ ಪ್ರಿಯಾಂಕ್ ಖರ್ಗೆ ರಾಜ್ಯ ಪೊಲಿಸರಿಂದ ಸೂಕ್ತ ತನಿಖೆ ನಡೆಯುತ್ತಿದೆ ಸಿಬಿಐ ಯಾಕೆ ಬೇಕು ಎನ್ನುವ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಗೃಹಸಚಿವರು ಸರ್ಟಿಫಿಕೇಟ್ ಕೊಡುವುದಲ್ಲ. ಅವರ ಟ್ರ್ಯಾಕ್ ರೆಕಾರ್ಡ್ ನೋಡಬೇಕು. ಕರ್ನಾಟಕ ಪೊಲೀಸರು ಎಸ್.ಐ.ಟಿ ಮಾಡಿದರೆ ಟ್ರ್ಯಾಕ್ ರೆಕಾರ್ಡ್ ಅಲ್ಲಿ ಯಾವುದು ಕೂಡ ಸಮಗ್ರವಾಗಿ ತನಿಖಾ ಆಗ್ತಾ ಇಲ್ಲ ಮತ್ತು ಈ ವಿಚಾರದಲ್ಲಿ ವಿಶೇಷವಾಗಿ ಕರ್ನಾಟಕದ ಪೊಲೀಸರು ಒತ್ತಡಕ್ಕೆ ಸಿಲುಕುವಂತಹ ಪ್ರಸಂಗ ಬರುತ್ತದೆ. ಅದಕ್ಕಾಗಿ ಸಿಬಿಐಗೆ ಕೊಡಬೇಕು ಎಂದು ಹೇಳಿದರು

ಸ್ಟಿಂಗ್ ವಿಚಾರದಲ್ಲಿ ಸಿದ್ದರಾಮಯ್ಯ ಅವರಿಗೆ ಅವಮಾನ ಮಾಡುವ ಪ್ರಯತ್ನ ನಡೆದಿದೆಯೇ ಎನ್ನುವ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಈ ವಿಚಾರ ಬಂದ ಮೇಲೆ ಸಿದ್ದರಾಮಯ್ಯ ಏನೂ ಮಾತನಾಡಿಲ್ಲ. ಅವರ ಮನದಾಳದ ಮಾತುಗಳು ಸೂಕ್ತ ಸಮಯದಲ್ಲಿ ಜನರ ಮುಂದೆ ಹೊರಹಾಕುತ್ತಾರೆ.

**ತನಿಖೆಯಿಂದ ಸತ್ಯ ಬರಲಿದೆ**

ಅಧಿಕಾರ ಹಸ್ತಾಂತರಕ್ಕಾಗಿ ಸ್ಟಿಂಗ್ ಮಾಡಿಸಲಾಗಿತ್ತಾ ಎನ್ನುವ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಸಿದ್ದರಾಮಯ್ಯ ಅವರು ಯಾವಾಗಲೂ ಒಂದು ರೀತಿಯಲ್ಲಿ ಬಂಡಾಯ ಆಗಿ ರಾಜಕಾರಣ ಮಾಡಿದ್ದರು. ಅವರ ರಾಜಕೀಯ ಹಿನ್ನೆಲೆ ನೋಡಿದಾಗ ಸುಲಭವಾಗಿ ಅಧಿಕಾರ ಹಸ್ತಾಂತರ ಮಾಡಿದ ಹಿನ್ನೆಲೆಯಲ್ಲಿ ಈಗ ಸಿಎಂ ಅವರೇ ಈ ವಿಚಾರ ಪ್ರಸ್ತಾಪ ಮಾಡಿದಾಗ ಎಲ್ಲವನ್ನೂ ತಾಳೆ ಹಾಕಿ ನೋಡಿದಾಗ ಹಲವಾರು ಪ್ರಶ್ನೆಗಳು ಉದ್ಭವಿಸುತ್ತವೆ. ಅದಕ್ಕೆ ಸೂಕ್ತ ತನಿಖೆಯಿಂದಲೇ ಉತ್ತರ ದೊರೆಯಬೇಕು. ಬ್ಲ್ಯಾಕ್ ಮೇಲ್ ಮಾಡಿರುವ ಕುರಿತು ಕೇಳಿದ ಪ್ರಶ್ನೆಗೆ ಅದನ್ನು ಅವರೇ ಹೇಳಬೇಕು ಎಂದರು.

## ಎಸ್‌ಐಆರ್, ಕ್ಷೇತ್ರ ಪುನರ್ವಿಂಗಡಣೆ, ಮಹಿಳಾ ಮೀಸಲಾತಿ

# ಪ್ರಧಾನಿ ಮೋದಿಗೆ ಪತ್ರ ಕುರಿತು ಚರ್ಚೆ ನಡೆಯಲಿದೆ: ಮಲ್ಲಿಕಾರ್ಜುನ್ ಖರ್ಗೆ




**ಕಲಬುರಗಿ, ಅ. 21:** ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಸಂಭಾವ್ಯ ಪರಿಣಾಮ, ಪ್ರಸ್ತಾವಿತ ಕ್ಷೇತ್ರ ಪುನರ್ವಿಂಗಡಣೆ ಹಾಗೂ ಮಹಿಳಾ ಮೀಸಲಾತಿ ಜಾರಿಯಲ್ಲಿ ಆಗುತ್ತಿರುವ ವಿಳಂಬ ಸೇರಿದಂತೆ ಹಲವು ಪ್ರಮುಖ ರಾಜಕೀಯ ವಿಚಾರಗಳ ಕುರಿತು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಈಗಾಗಲೇ ಪತ್ರ ಬರೆದಿದ್ದು, ಈ ಕುರಿತು ಚರ್ಚಿಸುವುದಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಸುದ್ದಿಗಾರರೊಂದಿಗೆ, ಈ ಎಲ್ಲ ವಿಚಾರಗಳ ಕುರಿತು ಪ್ರಧಾನಿಗೆ ವೈಯಕ್ತಿಕವಾಗಿ ಈಗಾಗಲೇ ಎರಡು ಪತ್ರಗಳನ್ನು ಬರೆದಿದ್ದೇನೆ. ಆ ಪತ್ರಗಳು ಪ್ರಧಾನಿಯವರ ಬಳಿಯಿವೆ. ಗುರುವಾರ ನಡೆಯುವ ಚರ್ಚೆಯಲ್ಲಿ ಪತ್ರಗಳಲ್ಲಿ ಪ್ರಸ್ತಾಪಿಸಿರುವ ವಿಷಯಗಳ ಕುರಿತು ವಿವರವಾಗಿ ಮಾತನಾಡಲಾಗುವುದು.ಎಸ್‌ಐಆರ್ ಜಾರಿಯಿಂದ ಉಂಟಾಗಬಹುದಾದ ಪರಿಣಾಮಗಳ ಕುರಿತು ಆತಂಕವಿದೆ. ಮತದಾರರ ಹಕ್ಕುಗಳಿಗೆ ಧಕ್ಕೆಯಾಗದಂತೆ ಚುನಾವಣಾ ಪ್ರಕ್ರಿಯೆ ನಡೆಯಬೇಕು. ಇದೇ ವೇಳೆ ದೇಶದಲ್ಲಿ ಪ್ರಸ್ತಾಪವಾಗಿರುವ ಕ್ಷೇತ್ರ ಪುನರ್ವಿಂಗಡಣೆ ಪ್ರಕ್ರಿಯೆಯ ಬಗ್ಗೆಯೂ ಸ್ವಾರ್ಥವಿರಬಾರದು. ಈ ಹಿನ್ನೆಲೆಯಲ್ಲಿ ಚರ್ಚೆ ಅಗತ್ಯವಿದೆ ಎಂದರು.

ಮಹಿಳಾ ಮೀಸಲಾತಿ ಜಾರಿಗೆ ಸಂಬಂಧಿಸಿದ ವಿಚಾರವೂ ಚರ್ಚೆಯ ಪ್ರಮುಖ ವಿಷಯವಾಗಲಿದೆ. ಮಹಿಳೆಯರಿಗೆ ಸಂಸತ್ತು ಹಾಗೂ ವಿಧಾನಸಭೆಗಳಲ್ಲಿ ಸೂಕ್ತ ಪ್ರಾತಿನಿಧ್ಯ ದೊರೆಯಬೇಕಿದ್ದು, ಈ ಕುರಿತು ನಾವು ಮೊದಲಿಂದಲೂ ಹೇಳುತ್ತ ಬಂದಿದ್ದೇವೆ. ಆದ್ದರಿಂದ ಮೀಸಲಾತಿ ಜಾರಿ ಕುರಿತು ಸ್ಪಷ್ಟತೆ ಅಗತ್ಯವಾಗಿದೆ ಎಂದು ಹೇಳಿದರು.

ದಸರಾ ಹಬ್ಬದ ಹಿನ್ನೆಲೆ ದೇಶದ ಜನತೆಗೆ ಶುಭಾಶಯ ಕೋರಿದ ಖರ್ಗೆ, ರಾಜ್ಯದಲ್ಲಿ ಶೇ.40ಕ್ಕೂ ಹೆಚ್ಚು ಮಳೆ ಕೊರತೆಯಾಗಿರುವುದರಿಂದ ಜನರು ಸಂಕಷ್ಟ ಎದುರಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಜನರ ಸಮಸ್ಯೆಗಳಿಗೆ ಸ್ಪಂದಿಸುವುದು ಅಗತ್ಯ ಎಂದರು.

ಮೈಸೂರು ದಸರಾ ಮಾದರಿಯಲ್ಲಿ ಕಲ್ಯಾಣ ಕರ್ನಾಟಕದ ಕೇಂದ್ರಸ್ಥಾನ ಕಲಬುರಗಿಯಲ್ಲೂ ದೊಡ್ಡ ಮಟ್ಟದ ದಸರಾ ಆಚರಣೆ ನಡೆಯಬೇಕು ಎಂಬುದು ತಮ್ಮ ಆಶಯ. ಈ ನಿಟ್ಟಿನಲ್ಲಿ ಅಗತ್ಯ ಪ್ರಯತ್ನಗಳನ್ನು ನಡೆಸಲಾಗುವುದು ಎಂದೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

# ತುಂಗಭದ್ರಾ ಎಡದಂಡೆ ಕಾಲುವೆ ಕಾರ್ಮಿಕರಿಗೆ ಸೇರಬೇಕಿದ್ದ 1 ಕೋಟಿಗೂ ಅಧಿಕ ಕೂಲಿ ಹಣ ಗುಳುಂ!



**ರಾಯಚೂರು, ಅ. 21:** ಜಿಲ್ಲೆಯಲ್ಲಿ ತುಂಗಭದ್ರಾ ಎಡದಂಡೆ ಕಾಲುವೆ ನಿರ್ವಹಣೆ ಮಾಡುವ ಗ್ಯಾಂಗ್‌ಮ್ಯಾನ್ ಕಾರ್ಮಿಕರ ಕೂಲಿ ಹಣವನ್ನು ನೀರಾವರಿ ಇಲಾಖೆಯ ಕೆಲ ಇಂಜಿನಿಯರ್‌ಗಳು ಲಪಟಾಯಿಸಿರುವ ಗಂಭೀರ ಪ್ರಕರಣ ಬೆಳಕಿಗೆ ಬಂದಿದೆ. ಜಿಲ್ಲೆಯ 222 ಕಾರ್ಮಿಕರ 80 ದಿನಗಳ ಕೂಲಿ ಹಣವನ್ನು ಅಕ್ರಮವಾಗಿ ಬೇರೆಡೆಗೆ ವರ್ಗಾಯಿಸಿ ವಂಚಿಸಿರುವುದು ತನಿಖೆಯಿಂದ ಬಹಿರಂಗಗೊಂಡಿದೆ.

ಈ ಕುರಿತು ಕಲಬುರಗಿ ಕಾರ್ಮಿಕ ಪ್ರಾಧಿಕಾರಕ್ಕೆ ದೂರು ನೀಡಿದ ಕಾರ್ಮಿಕರು, 2025ರ ಏಪ್ರಿಲ್‌ನಿಂದ ಜೂನ್ ತಿಂಗಳವರೆಗೆ ಕಾಲುವೆ ನಿರ್ವಹಣೆಯಲ್ಲಿ ತೊಡಗಿದ್ದ 222 ಕಾರ್ಮಿಕರಿಗೆ ಸೇರಬೇಕಿದ್ದ ಒಟ್ಟು 1,01,01,000 ರೂ. ಕೂಲಿ ಹಣವನ್ನು ನೀರಾವರಿ ಇಲಾಖೆಯ ಇಂಜಿನಿಯರ್‌ಗಳು ಕಳ್ಳತನ ಮಾಡಿದ್ದಾರೆ.

ಈ ಬಗ್ಗೆ ಕಾರ್ಮಿಕರು ಪ್ರಶ್ನಿಸಿದಾಗ ಇಂಜಿನಿಯರ್‌ಗಳು ಹಾರಿಕೆ ಉತ್ತರಗಳನ್ನು ನೀಡಿ ಸಬೂಬು ಹೇಳುತ್ತಾ ಬಂದಿದ್ದರು. ಇದರಿಂದ ನೊಂದ ಕಾರ್ಮಿಕರು ಕಲಬುರಗಿ ಕಾರ್ಮಿಕ ಪ್ರಾಧಿಕಾರಕ್ಕೆ ದೂರು ದಾಖಲಿಸಿದ್ದರು.

ದೂರಿನ ಆಧಾರದ ಮೇಲೆ ಪ್ರಾಧಿಕಾರವು ತನಿಖೆ ಕೈಗೊಂಡಾಗ ಅಕ್ರಮ ಎಸಗಿರುವ ಸತ್ಯ ಹೊರ ಬಂದಿದೆ. ಪ್ರತಿಯೊಬ್ಬ ಕಾರ್ಮಿಕರ 40,000 ರೂ. ಕೂಲಿ ಹಣವನ್ನು ಇಂಜಿನಿಯರ್‌ಗಳು ಲೂಟಿ ಮಾಡಿರು ವುದು ವಿಚಾರಣೆ ವೇಳೆ ಸಾಬೀತಾಗಿದೆ.

ಅ.22 ರವರೆಗೆ ಗಡುವು: ಈ ವಂಚನೆ ಗಂಭೀರವಾಗಿ ಪರಿಗಣಿಸಿರುವ ಕಲಬುರಗಿ ಕಾರ್ಮಿಕ ಪ್ರಾಧಿಕಾರವು ಮೂವರು ಇಂಜಿ ನಿಯರ್‌ಗಳಿಗೆ ಬಿಸಿ ಮುಟ್ಟಿಸಿದ್ದು, ಕೂಡಲೇ ಕಾರ್ಮಿಕರಿಗೆ ಹಣ ಮರುಪಾವತಿಸುವಂತೆ ಕಟ್ಟುನಿಟ್ಟಿನ ಆದೇಶ ಹೊರಡಿಸಿದೆ. 222 ಕಾರ್ಮಿಕರಿಗೆ ತಲಾ 40,000 ರೂ. ವೇತನ ಹಾಗೂ ಪರಿಹಾರದ ಮೊತ್ತವಾಗಿ 5,500 ರೂ. ಸೇರಿಸಿ ಪಾವತಿಸಲು ಸೂಚಿಸಲಾಗಿದೆ. ಒಟ್ಟು 1,01,01,000 ರೂ. ಮೊತ್ತವನ್ನು ಒಂದು ತಿಂಗಳ ಒಳಗೆ ಕಾರ್ಮಿಕರಿಗೆ ಪಾವತಿಸುವಂತೆ ಆದೇಶಿಸಲಾಗಿದ್ದು, ಅಕ್ಟೋಬರ್ 22 ರವರೆಗೆ ಗಡುವು ನೀಡಲಾಗಿದೆ.

## ಮೈಸೂರು ಯುವ ದಸರಾ ವೇದಿಕೆ

# ಬೀದರ್‌ನ ಗಾಯಕಿ ರೇಖಾ ಸೌದಿ ಗಾಯನ




**ಬೀದರ್, ಅ. 21:** ವಿಶ್ವವಿಖ್ಯಾತ ಮೈಸೂರು ದಸರಾ ಉತ್ಸವದಲ್ಲಿ ಆಯೋಜಿಸಲಾದ ಯುವ ದಸರಾ ವೇದಿಕೆಯಲ್ಲಿ ಬೀದರ್‌ನ ಗಾಯಕಿ ಹಾಗೂ ಬಿದಿರಿ ಸಾಂಸ್ಕೃತಿಕ ವೇದಿಕೆ ಅಧ್ಯಕ್ಷೆ ರೇಖಾ ಸೌದಿ ಮತ್ತು ಅವರ ತಂಡವು ತಮ್ಮ ಗಾನ ವೈಭವದ ಮೂಲಕ ನೆರೆದಿದ್ದ ಲಕ್ಷಾಂತರ ಸಂಗೀತಾಸಕ್ತರ ಮನಸೂರೆಗೊಂಡಿತು.

ಮೈಸೂರಿನ ಉತ್ತನಹಳ್ಳಿ ರಿಂಗ್ ರಸ್ತೆಯಲ್ಲಿನ ಜ್ವಾಲಾಮುಖಿ ತ್ರಿಪುರಸುಂದರಿ ದೇವಸ್ಥಾನದ ಬಳಿ ನಿರ್ಮಿಸಲಾಗಿದ್ದ ಭವ್ಯವಾದ ಯುವ ದಸರಾ ವೇದಿಕೆ ಸಾವಿರಾರು ಯುವ ಪಡೆಯನ್ನು ತನ್ನತ್ತ ಆಕರ್ಷಿಸಿತ್ತು. ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ದಿಗ್ಗಜ ಕಲಾವಿದರು ಕಾರ್ಯಕ್ರಮ ನಡೆಸಿಕೊಡುವ ಈ ಪ್ರತಿಷ್ಠಿತ ವೇದಿಕೆಯಲ್ಲಿ ಬೀದರ್‌ನ ಕಲಾವಿದರು ತಮ್ಮ ಅದ್ಭುತ ಪ್ರದರ್ಶನದ ಮೂಲಕ ಪ್ರಮುಖ ಗಮನ ಸೆಳೆದರು.

ಕಾರ್ಯಕ್ರಮದಲ್ಲಿ 'ಈ ಕನ್ನಡ ಮಣ್ಣನು ಮರಿಬೇಡ' ಹಾಗೂ 'ಬಾಳ ಬಂಗಾರ ನೀನು' ಜನಪ್ರಿಯ ಗೀತೆಗಳನ್ನು ಪ್ರಸ್ತುತಪಡಿಸುತ್ತಿದ್ದಂತೆ ಸಭಾಂಗಣದಲ್ಲಿ ಚಪ್ಪಾಳೆಗಳ ಸುರಿಮಳೆಯಾಯಿತು. ತದನಂತರ 'ಪಿಯಾ ತು ಅಬ್ ತೋ ಆಜಾ', 'ದುನಿಯಾ ಮೇ ಲೋಗೋಂಕೋ', 'ದಮ್ ಮಾರೋ ದಮ್' ಹಾಗೂ 'ಏ ಮೇರಾ ದಿಲ್' ಮುಂತಾದ ಕನ್ನಡ ಮತ್ತು ಹಿಂದಿ ಮಧುರ ಹಿಂದಿ ಹಾಡುಗಳನ್ನು ಹಾಡಿ ಯುವಕರನ್ನು ರಂಜಿಸಿದರು. ಅಂತಿಮವಾಗಿ 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು' ಎಂಬ ಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

# ಹೊಸ ತಂತ್ರಜ್ಞಾನದಿಂದ ಕೃಷಿ ಉತ್ಪನ್ನ ಹೆಚ್ಚಿಸಿ: ಡಾ.ಜಾಬಾ ಜಗದೀಶ



ಬಸವಕಲ್ಯಾಣದಲ್ಲಿ ಆಯೋಜಿಸಿದ್ದ ರೈತ ಸಮಾವೇಶದಲ್ಲಿ ವಿಜ್ಞಾನಿ ಡಾ. ಜಾಬಾ ಜಗದೀಶ ಅವರಿಗೆ ಶರಣ ವಿಜ್ಞಾನಿ ಪುರಸ್ಕಾರ ಪ್ರದಾನ ಮಾಡಲಾಯಿತು. ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿ, ಪೂಜ್ಯ ಡಾ.ಗಂಗಾಂಬಿಕಾ ಅಕ್ಕ, ಬಸವರಾಜ ಬುಳ್ಳಾ, ಡಾ.ಮಹೇಶ ಪಾಟೀಲ್ ಇತರರಿದ್ದರು.

**ಬಸವಕಲ್ಯಾಣ, ಅ. 21:** ಹೊಸ ತಂತ್ರಜ್ಞಾನ ಬಳಸಿ ಕೃಷಿ ಉತ್ಪನ್ನ ಬೆಳೆಸಿ ಆದಾಯ ಹೆಚ್ಚಿಸಿಕೊಳ್ಳಬೇಕು ಎಂದು ಹೈದರಾಬಾದ್‌ನ ಅಂತಾರಾಷ್ಟ್ರೀಯ ಅರೆ, ಒಣಪ್ರದೇಶ ಸಂಶೋಧನಾ ಸಂಸ್ಥೆ ಹಿರಿಯ ವಿಜ್ಞಾನಿ ಡಾ.ಜಾಬಾ ಜಗದೀಶ ರೈತರಿಗೆ ಸಲಹೆ ನೀಡಿದರು.

ಹರಳಯ್ಯ ಗವಿಯಲ್ಲಿ ಶರಣ ವಿಜಯೋತ್ಸವ ನಾಡಹಬ್ಬ, ಹುತಾತ್ಮ ದಿನ ನಿಮಿತ್ತ ಗುರುವಾರ ಸಂಜೆ ಏರ್ಪಡಿಸಿದ್ದ ರೈತ ಸಮಾವೇಶದಲ್ಲಿ ಶರಣ ವಿಜ್ಞಾನಿ ಪುರಸ್ಕಾರ ಸ್ವೀಕರಿಸಿ ಮಾತನಾಡಿದ ಅವರು, ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸಿದ ತಳಿಗಳನ್ನು ರೈತರು ಬಳಸಿ ಕಡಿಮೆ ಅವಧಿಯಲ್ಲಿ ಹೆಚ್ಚಿನ ಇಳುವರಿ ಪಡೆಯಬಹುದು ಎಂದರು.

ಇಕ್ರಿಸ್ಯಾಟ್ ಎಂಬುದು ಒಣ ಭೂಮಿ ಕೃಷಿ ಮತ್ತು ಆಹಾರ ವ್ಯವಸ್ಥೆ ಸುಧಾರಿಸಲು ಶ್ರಮಿಸುವ ಲಾಭರಹಿತ ಸಂಸ್ಥೆಯಾಗಿದೆ. ಮಳೆ ಕಡಿಮೆಯಿರುವ ಪ್ರದೇಶಗಳಲ್ಲಿ ಬೆಳೆಗಳ ಇಳುವರಿ ಮತ್ತು ಗುಣಮಟ್ಟ ಹೆಚ್ಚಿಸಲು ಸಂಶೋಧನೆ ನಡೆಸುತ್ತದೆ. ಮಣ್ಣಿನ ಆರೋಗ್ಯ, ಜಲಾನಯನ ಅಭಿವೃದ್ಧಿ ಮತ್ತು ನೀರಿನ ಸಮರ್ಪಕ ಬಳಕೆ ತಂತ್ರಜ್ಞಾನ ರೈತರಿಗೆ ತಿಳಿಹೇಳುತ್ತಿದ್ದು, ಸದುಪಯೋಗ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಜಾಗತಿಕ ಲಿಂಗಾಯತ ಮಹಾ ಸಭಾ ಉಪಾಧ್ಯಕ್ಷ ಬಸವರಾಜ ಬುಳ್ಳಾ ಉದ್ಘಾಟಿಸಿ ಮಾತನಾಡಿ, ಶರಣರಿಗೆ ಕೃಷಿ ಬಗ್ಗೆ ಚಿಂತನೆ, ಅಭಿಮಾನ, ಪೂಜ್ಯಭಾವ ಇದೆ. ಸರ್ಕಾರ ಹೊಲದಲ್ಲಿ ರೈತರಿಗಾಗಿ ಕೃಷಿ ಕುಟಿರ ನಿರ್ಮಿಸಿಕೊಡಬೇಕು ಎಂದು ಕೋರಿದರು.

ಸಾನ್ನಿಧ್ಯ ವಹಿಸಿದ್ದ ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿ ಆಶೀರ್ವಚನ ನೀಡಿದರು. ಪೂಜ್ಯ ಡಾ.ಗಂಗಾಂಬಿಕಾ ಅಕ್ಕ ನೇತೃತ್ವ ವಹಿಸಿದ್ದರು. ಅಧ್ಯಕ್ಷತೆ ವಹಿಸಿದ್ದ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತ ಡಾ.ಮಹೇಶ ಪಾಟೀಲ್ ಮಾತನಾಡಿದರು. ಮಿಲ್ಲೆಟ್ ಮ್ಯಾನ್ ವೀರಶೆಟ್ಟಿ ತೊಗರಿ ತಳಿಗಳ ಕುರಿತು, ಪುನರ್ ವೈಭವ ಸಂಸ್ಥೆ ಸಂಸ್ಥಾಪಕ ಆಕಾಶ ಮೊಳಕೇರಿ ಗೋವುಗಳ ಮಹತ್ವ ತಿಳಿಸಿದರು.

# ಪ್ರಣಿತಾ ಪಿ. ರಂಗಪ್ರವೇಶ ನೃತ್ಯ ವೈಭವದ ಅನನ್ಯ ಅನಾವರಣ



**ಬೆಂಗಳೂರು, ಅ.21–** ನಗರದ ಪತಿ ಸಭಾಂಗಣದಲ್ಲಿ ನಡೆದ ಕುಮಾರಿ ಪ್ರಣಿತಾ ಪಿ. ರಂಗಪ್ರವೇಶ ಅತ್ಯಂತ ವೈಭವಯುತ, ಕಲಾತ್ಮಕ ಸೊಬಗು ಹಾಗೂ ನೃತ್ಯರಸದೊಂದಿಗೆ ನೆರವೇರಿತು.

ನೃತ್ಯಸಂಜೀವಿನಿ ಅಕಾಡೆಮಿಯ ಸಂಸ್ಥಾಪಕ ನಿರ್ದೇಶಕರಾದ ವಿದುಷಿ ಡಾ. ಫಣಿಮಾಲಾ ಎನ್.ಎ. ಶಿಷ್ಯೆಯಾಗಿರುವ ಪ್ರಣಿತಾ, ತಮ್ಮ ಸೊಗಸಾದ ನೃತ್ಯಾಭಿವ್ಯಕ್ತಿ, ಅಂಗಶುದ್ಧಿ, ಲಯಬದ್ಧತೆ ಹಾಗೂ ಮನಮೋಹಕ ಭಾವಾಭಿನಯದ ಮೂಲಕ ಪ್ರೇಕ್ಷಕರ ಮನಗೆದ್ದರು.

ಸಾಂಪ್ರದಾಯಿಕ ಪುಷ್ಪಾಂಜಲಿಯೊಂದಿಗೆ ಆರಂಭಗೊಂಡ ಕಾರ್ಯಕ್ರಮ ಭಕ್ತಿಭಾವಪೂರ್ಣ ದೇವರನಾಮದ ಮೂಲಕ ಮುಂದುವರಿಯಿತು. ಭರತನಾಟ್ಯದ ಸಂಪ್ರದಾಯಬದ್ಧ ನೃತ್ಯಕ್ರಮವಾದ ಸಂಪೂರ್ಣ ಮಾರ್ಗಂ ಅನ್ನು ಪ್ರಣಿತಾ ಅತ್ಯಂತ ಶ್ರದ್ಧೆ, ಆತ್ಮವಿಶ್ವಾಸ ಮತ್ತು ಪ್ರಬುದ್ಧತೆಯಿಂದ ಪ್ರಸ್ತುತಪಡಿಸಿದರು. ಪ್ರತಿಯೊಂದು ನೃತ್ಯ ಸಂಯೋಜನೆ ಯಲ್ಲಿಯೂ ಅವರ ಪರಿಶ್ರಮ, ಗುರುಗಳ ಮಾರ್ಗದರ್ಶನ ಹಾಗೂ ಕಲೆಯ ಮೇಲಿನ ಆಳವಾದ ಪ್ರೀತಿ ಎದ್ದುಕಾಣುತ್ತಿತ್ತು. ಅವರ ಸುಂದರ ಅಂಗಚಲನೆಗಳು, ಲಯದ ಮೇಲಿನ ಹಿಡಿತ ಮತ್ತು ಹೃದಯಸ್ಪರ್ಶಿ ಭಾವಾಭಿನಯ ಸಭಿಕರನ್ನು ಮಂತ್ರಮುಗ್ಧ ಗೊಳಿಸಿತು.

ಈ ಕಲಾತ್ಮಕ ಪಯಣಕ್ಕೆ ಗುರು ವಿದುಷಿ ನಿರ್ಮಲಾ ಜಗದೀಶ್ ಹಾಗೂ ಗುರು ವಿದುಷಿ ಸೌಮ್ಯಾ ಎಸ್. ಶರ್ಮಾ ಅವರು ಮುಖ್ಯ ಅತಿಥಿಗಳಾಗಿದ್ದರು.

ಕಾರ್ಯಕ್ರಮದ ಯಶಸ್ಸಿಗೆ ಸಮರ್ಥ ಸಂಗೀತ ತಂಡದ ಕೊಡುಗೆ ಅಪಾರವಾಗಿತ್ತು. ವಿದುಷಿ ಡಾ. ಫಣಿಮಾಲಾ ಅವರು ನಟುವಾಂಗವನ್ನು ಸಮರ್ಥವಾಗಿ ನಿರ್ವಹಿಸಿದರೆ, ಗಾಯನದಲ್ಲಿ ವಿದ್ವಾನ್ ಮಧುಸೂದನ್, ಮೃದಂಗದಲ್ಲಿ ವಿದ್ವಾನ್ ಜಿ.ಎಸ್. ನಾಗರಾಜ್, ಪಿಟೀಲು ವಾದನದಲ್ಲಿ ವಿದ್ವಾನ್ ಅರ್ಜುನ್ ಹಾಗೂ ಕೊಳಲು ವಾದನದಲ್ಲಿ ವಿದ್ವಾನ್ ಸ್ಕಂದಕುಮಾರ್ ಅವರು ತಮ್ಮ ಸುಮಧುರ ಮತ್ತು ಲಯಬದ್ಧ ಸಂಗೀತದ ಮೂಲಕ ನೃತ್ಯಪ್ರಸ್ತುತಿಗೆ ಮತ್ತಷ್ಟು ಮೆರುಗು ನೀಡಿದರು.

ಒಟ್ಟಾರೆಯಾಗಿ, ಪ್ರಣಿತಾ ಅವರ ರಂಗಪ್ರವೇಶವು ಕೇವಲ ನೃತ್ಯಪ್ರಸ್ತುತಿಯಲ್ಲ; ಅದು ಗುರು–ಶಿಷ್ಯ ಪರಂಪರೆಯ ಮಹತ್ವ, ನಿರಂತರ ಸಾಧನೆಯ ಫಲ ಮತ್ತು ಭಾರತೀಯ ಶಾಸ್ತ್ರೀಯ ನೃತ್ಯಕಲೆಯ ಶ್ರೀಮಂತಿಕೆಯನ್ನು ಸಾರುವ ಸ್ಮರಣೀಯ ಕಲಾನುಭವವಾಗಿತ್ತು.

# ರೊಚ್ಚಿಗೆದ್ದ ಆನೆ: ಶಿವಮೊಗ್ಗ ಜಂಬೂಸವಾರಿ ಅರ್ಧಕ್ಕೆ ಮೊಟಕು



**ಶಿವಮೊಗ್ಗ, ಅ.21:** ರಾಜ್ಯದ ಎರಡನೇ ಅತಿದೊಡ್ಡ ದಸರಾ ಎಂದೇ ಪ್ರಸಿದ್ಧವಾಗಿರುವ ಶಿವಮೊಗ್ಗ ದಸರಾ ಜಂಬೂಸವಾರಿ ಮೆರವಣಿಗೆಯ ವೇಳೆ ಭಾರೀ ಅನಾಹುತ ಸಂಭವಿಸಿದ್ದು, ಜಂಬೂಸವಾರಿಯನ್ನು ಅರ್ಧದಲ್ಲೇ ಮೊಟಕುಗೊಳಿಸಲಾಗಿದೆ. ಇದೇ ಮೊದಲ ಬಾರಿಗೆ ಬೆಳ್ಳಿ ಅಂಬಾರಿ ಹೊತ್ತಿದ್ದ ಸೋಮಣ್ಣ ಹೆಸರಿನ ಆನೆಯು ಏಕಾಏಕಿ ದಾರಿತಪ್ಪಿ ರೊಚ್ಚಿಗೆದ್ದ ಪರಿಣಾಮ, ದೇವಿಯ ಬೆಳ್ಳಿ ಅಂಬಾರಿಯು ಕೆಳಗೆ ಬಿದ್ದು ಸಂಪೂರ್ಣವಾಗಿ ಹಾನಿಗೊಳಗಾಗಿದೆ.

ಜನಸಂದಣಿಗೆ ಹೆದರಿದ ಆನೆ ಸೋಮಣ್ಣ ಅಡ್ಡಾದಿಡ್ಡಿ ಓಡಿದ ಪರಿಣಾಮ ಮೆರವಣಿಗೆಯ ವೇಳೆ ಭಾರೀ ಅನಾಹುತ ಸಂಭವಿಸಿದ್ದು, ಜಂಬೂಸವಾರಿಯನ್ನು ಅರ್ಧದಲ್ಲೇ ಮೊಟಕುಗೊಳಿಸಲಾಗಿದೆ. ಇದೇ ಮೊದಲ ಬಾರಿಗೆ ಬೆಳ್ಳಿ ಅಂಬಾರಿ ಹೊತ್ತಿದ್ದ ಸೋಮಣ್ಣ ಆನೆಯು ಏಕಾಏಕಿ ದಾರಿತಪ್ಪಿ ರೊಚ್ಚಿಗೆದ್ದ ಪರಿಣಾಮ, ದೇವಿಯ ಬೆಳ್ಳಿ ಅಂಬಾರಿಯು ಕೆಳಗೆ ಬಿದ್ದು ಸಂಪೂರ್ಣವಾಗಿ ಹಾನಿಗೊಳಗಾಗಿದೆ.

ಆನೆಗೆ ಅರಣ್ಯ ಇಲಾಖೆ ವೈದ್ಯರು ಆನೆಗೆ ಅರವಳಿಕೆ ಚುಚ್ಚುಮದ್ದು ನೀಡಿ ಹೆಚ್ಚಿನ ಅನಾಹುತಕ್ಕೆ ತಡೆ ಹಾಕಿದ್ದಾರೆ. ಮೈಸೂರಿನಂತೆ ಶಿವಮೊಗ್ಗದಲ್ಲೂ ಸಹ ತಾಯಿ ಚಾಮುಂಡೇಶ್ವರಿಯ ಬೆಳ್ಳಿ ಅಂಬಾರಿಯ ಮೆರವಣಿಗೆ ನಡೆಯುತ್ತಿದೆ. ಸಕ್ರೆಬೈಲಿನ ಮೂರು ಆನೆಗಳನ್ನು ಜಂಬೂ ಸವಾರಿಗೆ ಸಿದ್ಧಗೊಳಿಸಲಾಗಿತ್ತು. ನಗರದ ಕೋಟೆ ರಸ್ತೆಯ ಜಿಲ್ಲಾ ತರಬೇತಿ ಕೇಂದ್ರದಲ್ಲಿ ಇಂದು ಬೆಳಗ್ಗೆಯಿಂದಲೇ ಮಾವುತರು, ಕಾವಾಡಿಗಳು ಹಾಗೂ ಅರಣ್ಯ ಇಲಾಖೆಯವರು ಮೂರು ಆನೆಗಳಿಗೆ ಬಣ್ಣ ಹಚ್ಚಿ ಸಿಂಗಾರಗೊಳಿಸಿದ್ದರು. ಮಧ್ಯಾಹ್ನ 2:30ಕ್ಕೆ ಶಿವಪ್ಪ ನಾಯಕ ಕೋಟೆ ಮುಂಭಾಗದಲ್ಲಿ ಜಂಬೂಸವಾರಿ ಪ್ರಾರಂಭವಾವಾಗಿತ್ತು. ಸವಾರಿಗೂ ಮುನ್ನ ನಂದಿಧ್ವಜ ಪೂಜೆ ನಡೆಸಿ, ಮೆರವಣಿಗೆಗೆ ಜಿಲ್ಲಾಧಿ ಕಾರಿ ಪ್ರಭುಲಿಂಗ ಕವಳಿಕಟ್ಟಿ ಅವರು ಚಾಲನೆ ನೀಡಿದ್ದರು.

**ಸಾಗರ ಬದಲಿಗೆ ಸೋಮಣ್ಣನಿಂದ ಬಂಜೂ ಸವಾರಿ:** ಪ್ರತಿ ವರ್ಷ ತಾಯಿ ಚಾಮುಂಡೇಶ್ವರಿಯ ಅಂಬಾರಿಯನ್ನು ಸಾಗರ ಆನೆ ಹೊರುತ್ತಿತ್ತು. ಹಾಲಿ ಸಕ್ರೆಬೈಲಿನಿಂದ ಆಗಮಿಸಿದ್ದ ಸಾಗರ, ಸೋಮಣ್ಣ ಬಹದ್ದೂರ್ ಆನೆಗಳು ತಾಲೀಮು ನಡೆಸಿದ್ದವು. ನಿನ್ನೆ ಸಂಜೆಯಷ್ಟೇ ಅರಣ್ಯಾಧಿಕಾರಿಗಳು ಅಂಬಾರಿಯನ್ನು ಹೊರಲು ಸೋಮಣ್ಣ ಆಯ್ಕೆ ಮಾಡಿದ್ದರು.

## ಎಚ್‌ಡಿಕೆ ಕರಾವಳಿಯಿಂದ ಸ್ಪರ್ಧಿಸಿದರೆ ಗೆಲ್ಲಿಸುತ್ತೇವೆ: ಪ್ರಿಯಾಂಕ್ ಖರ್ಗೆಗೆ ಕರಾವಳಿ ಜನರ ಸವಾಲು

**ಮಂಗಳೂರು, ಅ.21:** ಸ್ಟಿಂಗ್ ಆಪರೇಷನ್ ಕುರಿತಂತೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ನಡುವೆ ವಾಗ್ಸಮರ ಮುಂದುವರಿದಿರುವ ನಡುವೆ ಕರಾವಳಿ ಜನತೆ ಕುಮಾರಸ್ವಾಮಿ ಪರವಾಗಿ ಪ್ರಿಯಾಂಕ್ ಖರ್ಗೆಗೆ ಸವಾಲು ಹಾಕಿದ್ದಾರೆ.

ಈ ಕುರಿತು ಅಲ್ಲೊಂದು, ಇಲ್ಲೊಂದು ಬ್ಯಾನರ್‌ಗಳನ್ನು ಹಾಕಲಾಗಿದೆ. ಸಚಿವ ಪ್ರಿಯಾಂಕ್ ಖರ್ಗೆ ನಿಮಗೆ ಹಾಕಿರುವ ಸವಾಲನ್ನು ಕೇವಲ ನೀವಲ್ಲ, ಕರಾವಳಿಯ ಜನತೆಯಾದ ನಾವು ನೇರವಾಗಿ ಸ್ವೀಕರಿಸಿದ್ದೇವೆ. ನೀವು ಕೇವಲ ಒಂದು ಕ್ಷೇತ್ರಕ್ಕೋ ಅಥವಾ ಒಂದು ಜಿಲ್ಲೆಗೋ ಸೀಮಿತರಾದ ನಾಯಕರಲ್ಲ. ಇಡೀ ನಾಡಿಗೆ ಬೇಕಾದ ಜನನಾಯಕರು ಎಂಬುದನ್ನು ಸಾಬೀತುಪಡಿಸಲು ಕರಾವಳಿಯ ಕನ್ನಡಿಗರು, ತುಳುವರು ಸಜ್ಜಾಗಿದ್ದಾರೆ ಎಂದು ಬ್ಯಾನರ್ ಹಾಕಲಾಗಿದೆ.

ಇಷ್ಟು ದಶಕಗಳ ಕಾಲ ಕರಾವಳಿ ಕೇವಲ ಭಾವನಾತ್ಮಕ ಮತ್ತು ರಾಜಕೀಯ ಜಿದ್ದಾಜಿದ್ದಿಗೆ ಮಾತ್ರ ಬಳಕೆಯಾಗುತ್ತಿದೆ. ಆದರೆ ಇಲ್ಲಿನ ಮೀನುಗಾರರ ಬವಣೆ, ಅಡಿಕೆ ಬೆಳೆಗಾರರ ಸಂಕಷ್ಟ, ಯುವಜನತೆಯ ನಿರುದ್ಯೋಗ ಮತ್ತು ನೈಜ ಅಭಿವೃದ್ಧಿಯ ವಿಚಾರಗಳು ಮೂಲೆಗುಂಪಾಗಿದೆ. ನಮಗೆ ಈ ಬೇಕಿರುವುದು ದ್ವೇಷದ ರಾಜಕಾರಣವಲ್ಲ, ಬದಲಾಗಿ ನಿಮ್ಮಂತಹ ಅಭಿವೃದ್ಧಿಪರ, ಸರ್ವರನ್ನೂ ಸಮನಾಗಿ ಕಾಣುವ, ದೂರದೃಷ್ಟಿಯುಳ್ಳ ನಾಯಕತ್ವದ ಸ್ಪರ್ಶ, ನಿಮ್ಮ ಜನಪರ ಆಡಳಿತದ ಶೈಲಿ ಕರಾವಳಿಯ ಮನೆಮನೆಗೂ ತಲುಪಿದೆ ಎಂದು ಬ್ಯಾನರ್‌ನಲ್ಲಿ ಬರೆಯಲಾಗಿದೆ.

ಹಾಗಾಗಿ ಈ ಬಾರಿ ತಾವು ಕರಾವಳಿಯ ಯಾವುದಾದರೂ ಕ್ಷೇತ್ರದಿಂದ ಸ್ಪರ್ಧಿಸಿ ನಿಮ್ಮನ್ನು ಕರಾವಳಿಯ ಜನತೆಯಾದ ನಾವು ಗೆಲ್ಲಿಸುತ್ತೇವೆ ಎಂದು ಕರಾವಳಿ ಭಾಗದ ಜನತೆ ಕುಮಾರಸ್ವಾಮಿ ಅವರಿಗೆ ಹೇಳಿದ್ದಾರೆ.

### ಲೋಹಿಯಾ ಸಮತಾ ಸಮಾಜದ ಬಹು ದೊಡ್ಡ ಕನಸುಗಾರ :ಬಿ ಆರ್ ಪಾಟೀಲ್

# ಲೋಹಿಯಾ ಕುರಿತ ನಟರಾಜ್ ಹುಳಿಯಾರ್ ಡಾಕ್ಟರ್ ಸಾಹೇಬ್ ಎರಡನೇ ಮುದ್ರಣ ಕೃತಿ ಬಿಡುಗಡೆ

**ಕಲಬುರಗಿ, ಅ.21–** ಡಾ. ರಾಮ ಮನೋಹರ್ ಲೋಹಿಯಾ ಭಾರತದಲ್ಲಿ ಸಮತಾ ಸಮಾಜ ನಿರ್ಮಾಣದ ಕನಸು ಹೊತ್ತ ಬಲುದೊಡ್ಡ ಹೋರಾಟಗಾರರು ಎಂದು ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷರು ಹಾಗೂ ಶಾಸಕರಾದ ಬಿ ಆರ್ ಪಾಟೀಲ್ ಹೇಳಿದರು.




ನಿಷ್ಠುರವಾದಿ ಚಿಂತಕರಾಗಿದ್ದು ನಾನು ಇರುವವರೆಗೆ ನನ್ನ ಮಾತುಗಳನ್ನು ಯಾರೂ ನಂಬುವುದಿಲ್ಲ. ಆದರೆ ನಾನು ಸತ್ತ ಮೇಲೆ ನನ್ನ ವಿಚಾರಗಳನ್ನು ಎಲ್ಲರೂ ನಂಬುತ್ತಾರೆ ಎಂದು ಸ್ವತಃ ಅವರೇ ಹೇಳಿದರಲ್ಲದೆ ಗಾಂಧೀಜಿಯವರ ಜೊತೆ ಸೇರಿ ಲೋಹಿಯಾ ಚಿಂತನೆಯನ್ನು ಪ್ರತಿಪಾದಿಸಿ ಸಾಮಾಜಿಕ ಪರಿವರ್ತನೆಗೆ ದೊಡ್ಡ ಕೊಡುಗೆ ನೀಡಿದ್ದಾರೆ. ವಿಕೇಂದ್ರಿಕೃತ ಆಡಳಿತ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟಿರುವ ಲೋಹಿಯಾ ಅವರು ಗ್ರಾಮ, ಜಿಲ್ಲೆ, ವಿಧಾನಸಭೆ ಮತ್ತು ಸಂಸತ್ ಆಡಳಿತ ಅಗತ್ಯ ಎಂದು ಪ್ರತಿಪಾದಿಸಿದವರು. ಚುನಾವಣೆ ಯಲ್ಲಿ ಹಣ ಬಳಕೆಯನ್ನು ಕಟುವಾಗಿ ವಿರೋಧಿಸಿ ಭಾರತದ ರಾಜಕಾರಣಕ್ಕೆ ಹೊಸ ಆಯಾಮ ನೀಡಿದ ರಾಜಕಾರಣಿಯಾಗಿದ್ದರು. ಅಕ್ಕಮಹಾದೇವಿಯವರ ಚಿಂತನೆಗಳಿಂದ ಪ್ರೇರಿತರಾಗಿ ಪುರುಷ ಪ್ರಧಾನ ವ್ಯವಸ್ಥೆಯನ್ನು ವಿರೋಧಿಸಿದರು. ಕಲಬುರಗಿಯ ಸಮಾಜವಾದಿ ಚಿಂತಕರಾಗಿದ್ದ ವೀರಣ್ಣ ತಿಮ್ಮಾಜಿ ಅವರ ಮೂಲಕ ಅಕ್ಕಮಹಾದೇವಿ, ಬಸವಣ್ಣ ತತ್ವಗಳನ್ನು ತಿಳಿದು ಕೊಂಡಿದ್ದರು. ಸಮೃದ್ಧ ಭಾರತ ನಿರ್ಮಾಣಕ್ಕೆ ಸಮತಾ ಸಮಾಜದ ಚಿಂತನೆ ಇಂದು ಅತ್ಯಂತ ಅಗತ್ಯವಾಗಿದೆ. ಆ ಕಾರಣಕ್ಕಾಗಿ ಕರ್ನಾಟಕದಲ್ಲಿ ಅನೇಕ ಸಮಾಜವಾದಿ ಚಿಂತಕರು ವಿಚಾರಧಾರೆಯಲ್ಲಿ ಬೆಳೆದರು. ಈ ಕೃತಿ ಲೋಹಿಯಾ ಚಿಂತನೆಗಳ ಪ್ರಚಾರಕ್ಕೆ ಪ್ರೇರಣೆ ನೀಡಲಿದೆ ಎಂದು ಹೇಳಿದರು.

ಲೋಹಿಯಾ ಮಾನವತಾವಾದಿ ವ್ಯಕ್ತಿತ್ವದವರು. ಭಾರತದ ಬಡತನ ಮತ್ತು ಹಸಿವನ್ನು ಹುಡುಕಿ ಹೊರಟ ದೂರದೃಷ್ಟಿಯ ಚಿಂತಕರಾಗಿದ್ದರು ಎಂದು ಸಾಹಿತಿ, ಅನುವಾದಕಿ ಡಾ.ಹೇಮಾ ಪಟ್ಟಣಶೆಟ್ಟಿ ಹೇಳಿದರು.

ಮಾನವೀಯತೆ, ತರ್ಕ ಬುದ್ಧಿ ಹೊಂದಿ ಸಮಾಜವಾದದ ಮೂಲಕ ಪ್ರಜಾಪ್ರಭುತ್ವದಲ್ಲಿ ಗಂಡು–ಹೆಣ್ಣಿನ ಸಮಾನತೆಯ ಬಗ್ಗೆ ತೀವ್ರ ಪ್ರತಿಪಾದಕರಾಗಿದ್ದರು. ಲೋಹಿಯಾ ಅವರ ಸಮಗ್ರ ವ್ಯಕ್ತಿತ್ವವನ್ನು ಲೇಖಕ ಹುಳಿಯಾರ್ ತಮ್ಮ ಮೂರು ದಶಕಗಳ ಧ್ಯಾನದ ಫಲವಾಗಿ ಸತ್ಯನಿಷ್ಠವಾಗಿ ಬರೆದು ಓದುಗರಿಗೆ ಕೃತಿ ನೀಡಿದ್ದಾರೆ. ಲೋಹಿಯಾ ಸಮಾನತವಾದಕ್ಕೆ ನೂರಾರು ಲೇಖಕರು ಆಕರ್ಷಿತರಾಗಿ ಬರಹ ಗಳನ್ನು ನೀಡಿದ್ದರು ಎಂದರು.

ಲೋಹಿಯಾ ಮತ್ತು ಅಂಬೇಡ್ಕರ್ ರಾಜಕಾರಣ ಕೂಡದ ಕಾಲಘಟ್ಟದಲ್ಲಿ ನಟರಾಜ ಹುಳಿಯಾರ್ ಒಳಗಣ್ಣಿನ ವಿಚಾರದಿಂದ ಕೃತಿಯನ್ನು ಕಟ್ಟಿ ಕೊಟ್ಟಿದ್ದಾರೆ ಎಂದು ಕೇಂದ್ರೀಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ ವಿಕ್ರಮ್ ವಿಸಾಜಿ ಹೇಳಿದರು.

ಈ ಕೃತಿಯು ಲೋಹಿಯಾ ಯಾ ವೈಯಕ್ತಿಕ ಜೀವನ ಲೋಹಿಯಾ ವಿಚಾರಧಾರೆ ಹಾಗೂ ರಾಜಕಾರಣದ ಸಾಧ್ಯತೆಗಳನ್ನು ಮತ್ತು ಭಾರತೀಯ ಸಂಸ್ಕೃತಿ ಗ್ರಹಿಸಿದ ರೀತಿಯನ್ನು ಜೀವನ ಯಾನದಲ್ಲಿ ಕಟ್ಟಿಕೊಡಲಾಗಿದೆ. ಚರಿತ್ರೆ ಓದುವ ಬಗೆಯ ಬಗ್ಗೆ ಎಚ್ಚರ ಕೊಟ್ಟ ಲೋಹಿಯಾ ಚಿಂತನೆಗಳನ್ನು ತಿಳಿಸಲಾಗಿದೆ.ನಿರಾಕರಣೆ ಮತ್ತು ಸ್ವೀಕರಣೆಯ ಬಗೆಯನ್ನು ತಿಳಿಸುವ ದೊಡ್ಡ ಕೃತಿ ಇದು ಎಂದರು.

ಇಂತಹ ಕೃತಿ ರಚನೆಗೊಳ್ಳಲು ಚಿಂತನೆಯ ಬರಹಗಾರರ ಅನೇಕ ಲೇಖನಗಳು ನನ್ನನ್ನು ಪ್ರೇರೇಪಿಸಿದ್ದು ಯಾವುದೇ ಲೇಖಕ ಕೃತಿಯನ್ನು ಬರೆಯಬೇಕಾದರೆ ಮೊದಲು ಆತ್ಮಕಥನದ ಮೂಲಕ ಸತ್ಯವನ್ನು ದಾಖಲಿಸುವ ಪ್ರಯತ್ನ ಮಾಡಬೇಕು ಆಗ ಮಾತ್ರ ನಿಜವಾದ ಲೇಖಕನಾಗಿ ಬೆಳೆಯಲು ಸಾಧ್ಯ ಇಂದು ಕೃತಿಕಾರ ಹೇಳಿದರು. ಮೊದಲ ಮುದ್ರಣವನ್ನು ಬಿಡುಗಡೆ ಮಾಡಿ ಎಲ್ಲ ಒಂದು ಸಾವಿರ ಕೃತಿಗಳು ಪೂರ್ಣ ಮಾರಾಟಗೊಂಡಿದ್ದು ಎರಡನೆಯ ಮುದ್ರಣಕ್ಕೆ ಬೇಡಿಕೆ ಬಂದಿರುವುದು ಓದುಗರಲ್ಲಿ ಲೋಹಿಯಾ ಅವರ ಚಿಂತನೆಗಳ ಮೇಲಿದ್ದ ಪ್ರೀತಿಗೆ ಸಾಕ್ಷಿ ಎಂದು ಹೇಳಿದರು.

# ದುಷ್ಟಗುಣಗಳನ್ನು ತೊಡೆದುಹಾಕಿ ವಿಜಯಶಾಲಿಗಳಾಗುವುದೇ ವಿಜಯದಶಮಿ: ಬೊಮ್ಮಾಯಿ

**ಗದಗ(ಲಕ್ಷೇಶ್ವರ), ಅ.21–** ಇಂದು ನಮ್ಮಲ್ಲಿರುವ ದೈತ್ಯಗುಣಗಳಾದ ಸಿಟ್ಟು ದ್ವೇಷ, ಅಸೂಯೆ ಅವುಗಳನ್ನು ಮನಸ್ಸಿನಿಂದ ತೊಡೆದು ಹಾಕುವ ಸಂಕಲ್ಪ ಮಾಡುವ ದಿನ. ನಮ್ಮಲ್ಲಿರುವ ದುಷ್ಟ ಗುಣಗಳನ್ನು ತೊಡೆದು ಹಾಕಿ ಅದರಲ್ಲಿ ವಿಜಯಶಾಲಿಗಳಾಗುವುದೇ ವಿಜಯದಶಮಿ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.



ಗದಗ ಜಿಲ್ಲೆಯ ಲಕ್ಷ್ಮೇಶ್ವರ ಪಟ್ಟಣದ ಕೋರ್ಟ್ ಸರ್ಕಲ್ ಹತ್ತಿರ ಇರುವ ಶ್ರೀ ಗ್ರಾಮದೇವಿ ದೊಡ್ಡ ದ್ಯಾಮವ್ವ ದೇವಿಯ ದೇವಸ್ಥಾನದ ಮಹಾದ್ವಾರ ಉದ್ಘಾಟನೆ, ಕಳಸಾರೋಹಣ ಹಾಗೂ ಫಲಕದ ಉದ್ಘಾಟನೆಯ ಸಮಾರಂಭದಲ್ಲಿ ಭಾಗವಹಿಸಿ, ದೇವಿಯ ದರ್ಶನಾಶೀರ್ವಾದ ಪಡೆದುಕೊಂಡು ಇಂದು ಬಹಳ ಶುಭ ದಿನ ವಿಜಯ ದಶಮಿಯ ದಿನ ನಾವು ದೊಡ್ಡ ದ್ಯಾಮವ್ವನ ಜೀರ್ಣೋದ್ಧಾರದ ಹಲವು ಕಾರ್ಯಕ್ರಮ ಹಮ್ಮಿಕೊಂಡು ಸ್ತುತ್ಯವಾದ ಕೆಲಸ ಮಾಡಿದ್ದೀರಿ. ಹೀಗಾಗಿ ಆಡಳಿತ ಮಂಡಳಿಯ ಎಲ್ಲರಿಗೂ ಅಭಿನಂದನೆ ಸಲ್ಲಿಸುತ್ತೇನೆ. ಎಲ್ಲರಿಗೂ ವಿಜಯ ದಶಮಿಯ ಶುಭಾಶಯಗಳು ಸಕಲ ಸಂಕಲ್ಪಗಳೂ ಈಡೇರಲಿ ಎಂದು ತಾಯಿಯಲ್ಲಿ ಬೇಡಿಕೊಳ್ಳುತ್ತೇನೆ ಎಂದು ಹೇಳಿದರು.

ನವರಾತ್ರಿಯ ಅಂತಿಮ ದಿನ ದಶಮಿಯ ದಿನ ಪವಿತ್ರ ದಿನ. ಒಂಭತ್ತು ದಿನ ದೇವಿಯ ಒಂದೊಂದು ಅವತಾರ ಇದೆ. ಅದರಲ್ಲಿ ಹಲವು ದೈತ್ಯರನ್ನು ಸಂಹಾರ ಮಾಡಿರುವುದು ಪುರಾಣದಲ್ಲಿದೆ. ದೈತ್ಯರನ್ನು ಸಂಹಾರ ಮಾಡಲು ಯಾರಿಂದಲೂ ಸಾಧ್ಯವಾಗದಿದ್ದಾಗ ತಾಯಿ ಬೇರೆ ಬೇರೆ ರೂಪದಲ್ಲಿ ಬಂದು ದೈತ್ಯರನ್ನು ಸಂಹಾರ ಮಾಡಿದ್ದಾಳೆ. ಅಂದು ರಕ್ತದ ಕೋಡಿ ಹರಿಯುತ್ತಿತ್ತು. ಈಗ ಅಂತಾ ದೈತ್ಯರು ಯಾರೂ ಇಲ್ಲ. ಆದರೆ, ದೈತ್ಯರ ಗುಣಗಳಿವೆ. ನಮ್ಮಲ್ಲಿರುವ ದೋಷಗಳು, ಸಿಟ್ಟು ದ್ವೇಷ, ಅಸೂಯೆ ಯಾವುದಾದರೂ ಇದ್ದರೆ ಅವುಗಳನ್ನು ಮನಸ್ಸಿನಿಂದ ತೊಡೆದು ಹಾಕುವ ಸಂಕಲ್ಪ ಮಾಡುವ ದಿನ. ನಮ್ಮಲ್ಲಿರುವ ದುಷ್ಟ ಗುಣಗಳನ್ನು ತೊಡೆದು ಹಾಕಿ ಅದರಲ್ಲಿ ವಿಜಯಶಾಲಿಗಳಾಗುವುದೇ ವಿಜಯದಶಮಿ ಆಚರಣೆ ಮಾಡುವುದು. ಪ್ರತಿ ವರ್ಷ ಮಾಡುವುದು ಮನುಷ್ಯ ಕಾಮ, ಕ್ರೋಧ, ಮದ . ಮಾತ್ಸರ್ಯದ ಸಂಕೋಲೆಯಲ್ಲಿ ಸಿಲುಕಿಕೊಳ್ಳುತ್ತೇವೆ. ಆಗ ದೇವಿಯನ್ನು ನೆನೆದು ತಾಯಿಯ ಆಶೀರ್ವಾದ ಪಡೆಯಬೇಕು ಎಂದರು.

ಅಗಾಧವಾದ ಶಕ್ತಿ ರಾವಣನಿಗೂ ಇತ್ತು. ದೈತ್ಯರಿಗೂ ಇತ್ತು ಅವರ ವಿಚಾರದಲ್ಲಿ ದೋಷ ಇದ್ದಿದ್ದರಿಂದ ಅವರ ಸಂಹಾರ ಆಯಿತು. ಮನುಷ್ಯನಲ್ಲಿ ಸದ್ಗುಣ ಮತ್ತು ದುರ್ಗುಣ ಇವೆ. ಇವೆರಡೂ ನಮಗೆ ಬರಲು ಸಾಧ್ಯತೆ ಇದೆ. ಅಧಿಕಾರ ದುಡ್ಡು ಬಂದಾಗ ಅಹಂಕಾರ ದುರ್ಬುದ್ಧಿ ಬರುತ್ತದೆ. ಅದೆಲ್ಲ ಭಗವಂತ ಕೊಟ್ಟಿದ್ದು ಅಂತ ಸದ್ಗುಣದಿಂದ ಜನರ ಸೇವೆ ಮಾಡಬೇಕು. ಹಣೆಬರಹ ಎಲ್ಲ ಸುಳ್ಳು ಒಳಗಿರುವ ಬುದ್ಧಿ ನಮ್ಮ ಭವಿಷ್ಯ ಬರೆಯುತ್ತದೆ. ಹೀಗಾಗಿ ನಾವೆಲ್ಲ ದುಷ್ಟ ಶಕ್ತಿ ದೂರ ಮಾಡಿ ಶಿಷ್ಟ ಶಕ್ತಿಗೆ ತಲೆಬಾಗಿ ದೇವಿಯ ಸ್ತುತಿ ಮಾಡಿ ಪುನೀತರಾಗೋಣ ಎಂದರು.

ಗ್ರಾಮದೇವತೆ ಸಂತುಷ್ಟಳಾದರೆ ಗಾಮಕ್ಕೂ ಒಳ್ಳೆಯದಾಗುತ್ತದೆ. ಹಿಂದೆ ಮಾರಿ ರೋಗ ಬಂದಾಗ ಗ್ರಾಮ ದೇವತೆಗಳನ್ನು ಮಾಡುತ್ತಿದ್ದರು. ಸೀಮೆ ಕಾಯಲು ಸೀಮೆ ಬಸವಣ್ಣ ಇದ್ದಾನೆ. ಅವುಗಳ ಹಿಂದೆ ಅರ್ಥ ಇದೆ. ಅದನ್ನು ನಾವು ತಿಳಿದುಕೊಳ್ಳಬೇಕು. ಮುಕ್ತಿ ಮಂದಿರ ಬಹಳ ದೊಡ್ಡ ಕೇಂದ್ರವಾಗುತ್ತಿದೆ. ಮುಕ್ತಿ ಮಂದಿರದ ವಿಮಲರೇಣುಕ ವೀರ ಮುಕ್ತಿಮುನಿ ಶಿವಾಚಾರ್ಯ ಮಹಾಸ್ವಾಮಿಗಳ ಇಪ್ಪತ್ತು ವರ್ಷಗಳ ಶ್ರಮ ಈಗ ಕಾಲ ಕೂಡಿ ಬರುತ್ತಿದೆ. ಕಲಾದಗಿ ಗುರುಗಳು ಇವರಿಗೂ ಬಹಳ ದೊಡ್ಡ ಸಂಬಂಧ ಇದೆ. ನನಗೂ ಮೂವತ್ತೈದು ವರ್ಷಗಳಿಂದ ಗುರುಗಳೊಂದಿಗೆ ಸಂಬಂಧ ಇದೆ. ಇವತ್ತು ನಮ್ಮ ಕಣ್ಣ ಮುಂದೆಯೇ ಲಿಂಗ ಸ್ಥಾಪನೆ ಮಾಡಿ ಅದ್ಭುತ ಕಾರ್ಯ ಮಾಡಿದ್ದಾರೆ. ನಾನು ನನ್ನ ಸಂಸದರ ನಿಧಿಯಿಂದ ಎರಡು ಕಂತಿನಲ್ಲಿ 20 ಲಕ್ಷ ರೂ. ನೀಡುತ್ತೇನೆ ಎಂದು ಹೇಳಿದರು.

ಹಿರಿಯರಾದ ಗಂಗಣ್ಣ ಮಹಾಂತಶೆಟ್ಟರ ಅವರೊಂದಿಗೆ ಉತ್ತಮ ಸಂಬಂಧ ಇದೆ. ಇವರಿಗೆ ಟಿಕೆಟ್ ಕೊಟ್ಟಿರಲಿಲ್ಲ ನಮ್ಮ ತಂದೆಯ ಬಳಿಯೇ ಬಿ ಫಾರ್ಮ್ ಇತ್ತು ಇವರಿಗೆ ಕೊಟ್ಟರೆ ನಾನು ಚುನಾಣೆಗೆ ಸ್ಪರ್ಧೆ ಮಾಡುತ್ತೇನೆ ಎಂದು ಹೇಳಿದೆ. ಗಂಗಣ್ಣವರ ಮೇಲೆ ನಮ್ಮ ತಂದೆಗೆ ವಿಶೇಷವಾದ ಪ್ರೀತಿ ಇತ್ತು.ಇವರು ಕೆಲಸದಲ್ಲಿ ಬಹಳ ಮುಂದೆ. ಸಾರ್ವಜನಿಕ ಜೀವನದಲ್ಲಿ ಜವಾಬ್ದಾರಿ ತೊಗೊಂಡವರು ಜವಾಬ್ದಾರಿ ಮರಿಯಬಾರದು ದುಡ್ಡು ಬಂಗಾರ ಎಲ್ಲಿಯೂ ಸೋರಬಾರದು ಎನ್ನುವುದು ಅವರ ತತ್ವ ಅದನ್ನು ಎಲ್ಲರೂ ಕಾಪಾಡುವ ವಿಶ್ವಾದ ಇದೆ ಎಂದು ಹೇಳಿದರು.



ನವರಾತ್ರಿ ಮುಕ್ತಾಯಗೊಂಡ ಹಿನ್ನೆಲೆಯಲ್ಲಿ, ಬುಧವಾರ ಬೆಂಗಳೂರಿನ ಹಲಸೂರು ಕೆರೆಯಲ್ಲಿ ನಡೆದ ದುರ್ಗಾ ಮೂರ್ತಿ ಮೆರವಣಿಗೆ ಮತ್ತು ವಿಸರ್ಜನಾ ಕಾರ್ಯಕ್ರಮದಲ್ಲಿ ಜನರು ಪಾಲ್ಗೊಂಡರು.

### ಕಲಬುರಗಿಯಲ್ಲಿ ಕಬ್ಬು ಬೆಳೆಗಾರರ ಹೋರಾಟ ಅಂತ್ಯ

# ನ.26ರ ದೆಹಲಿ ಸಭೆಯ ನಿರ್ಧಾರದತ್ತ ರೈತರ ಚಿತ್ತ

**ಕಲಬುರಗಿ, ಅ. 21:** ಕಬ್ಬಿಗೆ ನ್ಯಾಯಯುತ ಬೆಲೆ, ತೂಕ–ರಿಕವರಿಯಲ್ಲಿ ಪಾರದರ್ಶಕತೆ ಹಾಗೂ ಬೆಳೆಗಳಿಗೆ ವೈಜ್ಞಾನಿಕ ಬೆಂಬಲ ಬೆಲೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಮುಂದಿಟ್ಟುಕೊಂಡು ನಗರದ ಹೊರವಲಯದ ರಾಷ್ಟ್ರೀಯ ಹೆದ್ದರಿ ರಾಮಮಂದಿರ ವೃತ್ತದ ಬಳಿ ಕಳೆದ ಒಂದು ವಾರದಿಂದ ನಡೆಯುತ್ತಿದ್ದ ಕಬ್ಬು ಬೆಳೆಗಾರರ ಹೋರಾಟಕ್ಕೆ ವಿರಾಮ ನೀಡಲಾಯಿತು.



ಕಲಬುರಗಿ ನಗರದ ಹೊರವಲಯದ ರಾಮಮಂದಿರ ವೃತ್ತದಲ್ಲಿ ಒಂದು ವಾರದಿಂದ ನಡೆಯುತ್ತಿರುವ ಕಬ್ಬು ಬೆಳೆಗಾರರ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಸತ್ಯಾಗ್ರಹ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರ ಲಿಖಿತ ಭರವಸೆ ಮೇರೆಗೆ ಹಿಂತೆಗೆದುಕೊಳ್ಳಲಾಯಿತು. ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಮತ್ತು ಶಾಸಕ ಅಲ್ಲಮಪ್ರಭು ಪಾಟೀಲ್ ಅವರು ಮನವಿ ಸ್ವೀಕರಿಸಿ ಭರವಸೆ ನೀಡಿದರು.

ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರ ಭರವಸೆ ಹಾಗೂ ಬೇಡಿಕೆಗಳನ್ನು ಸರ್ಕಾರದ ಮಟ್ಟದಲ್ಲಿ ಚರ್ಚಿಸುವ ವಿಶ್ವಾಸದ ಹಿನ್ನೆಲೆಯಲ್ಲಿ ರೈತರು ಪ್ರತಿಭಟನೆ ಹಿಂಪಡೆದರು.

ಕರ್ನಾಟಕ ರಾಜ್ಯ ರೈತಸಂಘ ಹಾಗೂ ಹಸಿರು ಸೇನೆಯ ರಾಜ್ಯ ಕಾರ್ಯಾಧ್ಯಕ್ಷ ಮಹೇಶಗೌಡ ಎಂ. ಸುಬೇದಾರ್ ನೇತೃತ್ವದಲ್ಲಿ ರೈತ ಮುಖಂಡರು ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಜಿಲ್ಲಾಧಿಕಾರಿ ಇಕ್ರಂ ಶರೀಫ್ ಅವರಿಗೆ ಮನವಿ ಸಲ್ಲಿಸಿದರು. ನ.26ರಂದು ದೆಹಲಿಯಲ್ಲಿ ನಡೆಯಲಿರುವ ಸಭೆಯಲ್ಲಿ ಕಬ್ಬಿನ ದರ ಸೇರಿದಂತೆ ಪ್ರಮುಖ ಬೇಡಿಕೆಗಳ ಕುರಿತು ನಿರ್ಧಾರವಾಗುವ ನಿರೀಕ್ಷೆಯಿದ್ದು, ಅಲ್ಲಿ ನಿಗದಿಯಾಗುವ ದರವನ್ನೇ ರಾಜ್ಯದ ಎಲ್ಲ ಸಕ್ಕರೆ ಕಾರ್ಖಾನೆಗಳಿಗೂ ಅನ್ವಯಿಸಬೇಕು ಎಂದು ಆಗ್ರಹಿಸಿದರು.

ಕಬ್ಬಿಗೆ ಟನ್‌ಗೆ 5,500, ತೊಗರಿಗೆ ಕ್ವಿಂಟಲ್‌ಗೆ 15 ಸಾವಿರ, ಸಕ್ಕರೆಗೆ ಕೆ.ಜಿ.ಗೆ 60 ನಿಗದಿಪಡಿಸಬೇಕು. ಇತರ ಬೆಳೆಗಳಿಗೆ ಸ್ವಾಮಿನಾಥನ್ ಆಯೋಗದ ಶಿಫಾರಸಿನಂತೆ ವೈಜ್ಞಾನಿಕ ಬೆಲೆ ನೀಡಬೇಕು ಎಂದು ಒತ್ತಾಯಿಸಿದರು. ಕಬ್ಬು ಕಟಾವು ಮತ್ತು ಸಾಗಣೆ ವೆಚ್ಚ, ಕಾರ್ಖಾನೆಗಳಲ್ಲಿನ ತೂಕ–ರಿಕವರಿ ವ್ಯತ್ಯಾಸ, ಎಥನಾಲ್ ಕೋಟಾ ಹಾಗೂ ವಿದ್ಯುತ್‌ನಿಂದ ಹಾನಿಗೊಳಗಾದ ಕಬ್ಬಿಗೆ ಪರಿಹಾರ ನೀಡುವಂತೆಯೂ ಮನವಿಯಲ್ಲಿ ಆಗ್ರಹಿಸಲಾಗಿದೆ.

ಮನವಿ ಸ್ವೀಕರಿಸಿ ಮಾತನಾಡಿದ ಜಿಲ್ಲಾಧಿಕಾರಿ ಇಕ್ರಂ ಶರೀಫ್, ರೈತರೊಂದಿಗೆ ಹತ್ತು ದಿನಗಳ ಹಿಂದೆಯೇ ಸಭೆ ನಡೆಸಿ ಕಬ್ಬು ಬೆಳೆಗಾರರ ಸಮಸ್ಯೆಗಳ ಕುರಿತು ಚರ್ಚಿಸಲಾಗಿದೆ. ರೈತರ ಹಕ್ಕೊತ್ತಾಯಗಳನ್ನು ಸರ್ಕಾರದ ಮುಂದೆ ಸಮರ್ಥವಾಗಿ ಮಂಡಿಸಲಾಗುವುದು. ಎಲ್ಲ ರೈತರಿಗೂ ನ್ಯಾಯವಾಗುವಂತೆ ಸಮಾನ ದರ ನಿಗದಿಪಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಜಿಲ್ಲೆಯಲ್ಲಿ ಬರ ಪರಿಸ್ಥಿತಿ ತೀವ್ರವಾಗಿದ್ದು, ಮಳೆ–ನೀರಿನ ಕೊರತೆ, ಗೊಬ್ಬರ, ಬೀಜ ಹಾಗೂ ಕೀಟನಾಶಕಗಳ ಬೆಲೆ ಏರಿಕೆಯ ನಡುವೆ ರೈತರ ಉತ್ಪನ್ನಗಳಿಗೆ ಸೂಕ್ತ ಬೆಲೆ ದೊರೆಯುತ್ತಿಲ್ಲ. ತೊಗರಿ ಸೇರಿದಂತೆ ವಿವಿಧ ಬೆಳೆಗಾರರ ಸಮಸ್ಯೆಗಳನ್ನೂ ಜಿಲ್ಲಾಡಳಿತ ಗಂಭೀರವಾಗಿ ಪರಿಗಣಿಸಿದೆ. ರೈತರ ಬೆವರಿಗೆ ಬೆಲೆ ದೊರೆಯಬೇಕು. ರೈತರಿಗೆ ಅನ್ಯಾಯವಾಗಲು ಜಿಲ್ಲಾಡಳಿತ ಬಿಡುವುದಿಲ್ಲ ಎಂದು ಹೇಳಿದರು.

### ಪೊಲೀಸ್ ಹುತಾತ್ಮರ ದಿನಾಚರಣೆಯಲ್ಲಿ ಜಿಲ್ಲಾ ನ್ಯಾಯಾಧೀಶ ಸಿದ್ದಲಿಂಗಪ್ರಭು ಅಭಿಮತ

# ಪೊಲೀಸ್–ನ್ಯಾಯಾಂಗ ಪರಸ್ಪರ ಪೂರಕವಾಗಿ ಕಾರ್ಯನಿರ್ವಹಿಸಿದರೆ ಕಾನೂನುಬದ್ಧ ಆಡಳಿತ ಸಾಧ್ಯ

ಬಳ್ಳಾರಿ,ಅ.21.ಪೊಲೀಸ್ ಇಲಾಖೆ ಹಾಗೂ ನ್ಯಾಯಾಂಗ ಇಲಾಖೆಗಳು ಪರಸ್ಪರ ಪೂರಕವಾಗಿ ಕಾರ್ಯನಿರ್ವಹಿಸಿದಾಗ ಮಾತ್ರ ದೇಶದಲ್ಲಿ ಕಾನೂನುಬದ್ಧ ಆಡಳಿತವನ್ನು ಬಲವಾಗಿ ಎತ್ತಿಹಿಡಿಯಲು ಸಾಧ್ಯ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಸಿದ್ದಲಿಂಗ ಪ್ರಭು ಅವರು ಹೇಳಿದರು.




ಕಳೆದ ಸಾಲಿನಲ್ಲಿ ಕರ್ತವ್ಯದ ವೇಳೆ ಹುತಾತ್ಮರಾದ ಕರ್ನಾಟಕ ಸೇರಿದಂತೆ ದೇಶಾದ್ಯಂತ ಒಟ್ಟು 154 ವೀರ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗಳ ತ್ಯಾಗ ಮತ್ತು ಬಲಿದಾನವನ್ನು ಅವರು ಸ್ಮರಿಸಿ, ಅವರ ಕುಟುಂಬಗಳಿಗೆ ಸಾಂತ್ವನ ತಿಳಿಸಿದರು.

ದೇಶದ ಆಂತರಿಕ ಭದ್ರತೆ, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು, ಅಪರಾಧಗಳನ್ನು ತಡೆಗಟ್ಟುವುದು ಮತ್ತು ಬೇರುಸಹಿತ ಕಿತ್ತೊಗೆಯುವಲ್ಲಿ ಪೊಲೀಸ್ ಇಲಾಖೆಯ ಪಾತ್ರ ಅತ್ಯಂತ ಮಹತ್ವದ್ದು. ನಾಗರಿಕರ ಮೂಲಭೂತ ಹಕ್ಕುಗಳನ್ನು ಸಂರಕ್ಷಿಸುವಲ್ಲಿ ಪೊಲೀಸರು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದರು.

ಮೈಸೂರಿನಲ್ಲಿ ದಸರಾ ವಸ್ತುಪ್ರದರ್ಶನದ ವೇಳೆ ನಡೆದ ಅಪ್ರಾಪ್ತ ಬಾಲಕಿಯ ಅಪಹರಣ, ಅತ್ಯಾಚಾರ ಹಾಗೂ ಕೊಲೆ ಪ್ರಕರಣವನ್ನು ಪೊಲೀಸರು ಸಮರ್ಥವಾಗಿ ತನಿಖೆ ನಡೆಸಿ, ಯಾವುದೇ ಪ್ರತ್ಯಕ್ಷ ಸಾಕ್ಷ್ಯಾಧಾರಗಳಿಲ್ಲದಿದ್ದರೂ ಎಲೆಕ್ಟ್ರಾನಿಕ್ ಸಾಕ್ಷ್ಯಗಳ ಆಧಾರದಲ್ಲಿ ಕೇವಲ ಒಂದು ವರ್ಷದೊಳಗೆ ಮರಣದಂಡನೆ ಕೊಡಿಸುವಲ್ಲಿ ಯಶಸ್ವಿಯಾದ ನಿದರ್ಶನವನ್ನು ಅವರು ಶ್ಲಾಘಿಸಿದರು.

ಪೊಲೀಸ್ ಅಧಿಕಾರಿಗಳು ಪ್ರಕರಣಗಳ ತನಿಖೆ ವೇಳೆ ಕೇವಲ ಸಂಖ್ಯೆಗೆ ಮಹತ್ವ ನೀಡದೆ, ಗುಣಮಟ್ಟದ ತನಿಖೆ ನಡೆಸಿ ನ್ಯಾಯಾಲಯಕ್ಕೆ ಸೂಕ್ತ ಸಾಕ್ಷ್ಯಾಧಾರಗಳನ್ನು ಸಲ್ಲಿಸಬೇಕು. ಇದು ಸಮಾಜದ ಶಾಂತಿ ಕದಡುವ ದುಷ್ಟ ಶಕ್ತಿಗಳಿಗೆ ತಕ್ಕ ಪಾಠ ಕಲಿಸಲು ನೆರವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್ ಡಿ. ಪೆನ್ನೇಕರ್ ಅವರು ಮಾತನಾಡಿ, 1959ರಲ್ಲಿ ಲಡಾಖ್‌ನ ಹಾಟ್‌ಸ್ಪ್ರಿಂಗ್ ಪ್ರದೇಶದಲ್ಲಿ ಚೀನಾ ಸೈನಿಕರ ಅನಿರೀಕ್ಷಿತ ದಾಳಿಯ ವಿರುದ್ಧ ಡಿವೈಎಸ್‌ಪಿ ಕರಣ್ ಸಿಂಗ್ ಅವರ ನೇತೃತ್ವದಲ್ಲಿ ಧೈರ್ಯದಿಂದ ಹೋರಾಡಿ ವೀರಮರಣವನ್ನಪ್ಪಿದ 10 ಮಂದಿ ಸಿಆರ್‌ಪಿಎಫ್ ಜವಾನರ ತ್ಯಾಗವನ್ನು ಸ್ಮರಿಸಿ, ಪ್ರತಿವರ್ಷ ಅಕ್ಟೋಬರ್ 21 ರಂದು ರಾಷ್ಟ್ರದಾದ್ಯಂತ ಈ ದಿನವನ್ನು ಆಚರಿಸಲಾಗುತ್ತದೆ ಎಂದು ತಿಳಿಸಿದರು.

ಕಳೆದ ಒಂದು ವರ್ಷದ ಅವಧಿಯಲ್ಲಿ ಕರ್ತವ್ಯ ಪಾಲನೆ ಮಾಡುತ್ತಾ ದೇಶಾದ್ಯಂತ ಒಟ್ಟು 154 ಮಂದಿ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಹುತಾತ್ಮರಾಗಿದ್ದಾರೆ.

ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದವರಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಪಡೆಯ ಇನ್‌ಸ್ಪೆಕ್ಟರ್ ಪಂಚಯ್ಯ ವೀರಯ್ಯ ಸಾಲಿಮಠ, ಎಎಸ್‌ಐ ಬಸವರಾಜ್ ಎಂ.ಎಲ್., ಹೆಡ್ ಕಾನ್‌ಸ್ಟೇಬಲ್ ಬೀರಲಿಂಗ, ಹೆಡ್‌ಕಾನ್‌ಸ್ಟೇಬಲ್ ಎ.ಎಂ. ಸಲ್ಮಾನ್ ತಾಪಿ ಹೆಡ್ ಕಾನ್‌ಸ್ಟೇಬಲ್ ಇಸ್ಮಾಯಿಲ್ ಸೇರಿದಂತೆ ಐವರು ಸಿಬ್ಬಂದಿ ಸೇರಿದ್ದಾರೆ ಎಂದರು.

# ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆ ಸಮಿತಿ ಸದಸ್ಯರಾಗಿ ಎಚ್.ತಿಮ್ಮನಗೌಡ ನೇಮಕ

ಬಳ್ಳಾರಿ,ಅ.21: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ಕರ್ನಾಟಕ ರಾಜ್ಯ ಘಟಕದ ಕಾರ್ಯನಿರ್ವಾಹಕ ಸಮಿತಿ ಸದಸ್ಯರಾಗಿ ಬಳ್ಳಾರಿಯ ಎಚ್. ತಿಮ್ಮನಗೌಡ ಅವರನ್ನು ನೇಮಕ ಮಾಡಲಾಗಿದೆ.

ಮಹಾಸಭೆಯ ರಾಷ್ಟ್ರೀಯ ಘಟಕವು ಅ. 14ರಂದು ಹೊರಡಿಸಿರುವ ನೇಮಕಾತಿ ಪತ್ರದಲ್ಲಿ ಈ ವಿಷಯ ತಿಳಿಸಿದ್ದು, ಮಹಾಸಭೆಯ ಸಂವಿಧಾನದ ನಿಯಮ 42(2) ರ ಅನ್ವಯ ಅವರನ್ನು ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರನ್ನಾಗಿ ನೇಮಿಸಲಾಗಿದೆ.

ಮಹಾಸಭೆಯ ಗುರಿ ಹಾಗೂ ಧ್ಯೇಯೋದ್ದೇಶಗಳ ಈಡೇರಿಕೆಗೆ ಶ್ರಮಿಸುವಂತೆ ನೇಮಕಾತಿ ಪತ್ರದಲ್ಲಿ ಸೂಚಿಸಲಾಗಿದೆ. ಎಚ್. ತಿಮ್ಮನಗೌಡ ಅವರು ಬಳ್ಳಾರಿ ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ಬಗರ್‌ಹುಕುಂ ಸಮಿತಿ ಅಧ್ಯಕ್ಷರಾಗಿ, ಬಳ್ಳಾರಿ ಜಿಲ್ಲಾ ಕೃಷಿ ಪರಿಕರಗಳ ಮಾರಾಟಗಾರರ ಸಂಘದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸು ತ್ತಿದ್ದಾರೆ. ಅಲ್ಲದೆ, ಕರ್ನಾಟಕ ರಾಜ್ಯ ಕೃಷಿ ಪರಿಕರಗಳ ಮಾರಾಟಗಾರರ ಸಂಘದ ಖಜಾಂಚಿಯಾಗಿ ಹಾಗೂ ವೀರಶೈವ ಲಿಂಗಾಯತ ಸಮಾಜದ ಮುಖಂಡರಾಗಿ ವಿವಿಧ ಚಟುವಟಿಕೆ ಗಳಲ್ಲಿ ತೊಡಗಿಸಿ ಕೊಂಡಿದ್ದಾರೆ.



ಹಾಗೂ ಕ್ಷೇತ್ರಗಳಲ್ಲಿ ಸಾಮಾಜಿಕ ಸಂಘಟನಾತ್ಮಕ ತೊಡಗಿಸಿ ಕೊಂಡಿರುವ ಅವರನ್ನು ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭೆಯು ರಾಜ್ಯ ಕಾರ್ಯನಿರ್ವಾ ಹಕ ಸಮಿತಿಗೆ ನೇಮಕ ಮಾಡಿರುವುದು ಅವರ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಿದೆ.

# ಬಳ್ಳಾರಿಯ ಕನಕದುರ್ಗಮ್ಮ ದೇವಸ್ಥಾನದಲ್ಲಿ ಅವ್ಯವಸ್ಥೆ ಆರೋಪ ನವರಾತ್ರಿಗೆ ಬಂದ ಭಕ್ತರಿಗೆ ನಿರಾಸೆ!

**ಬಳ್ಳಾರಿ, ಅ 21.** ನವರಾತ್ರಿಯ ಕೊನೆಯ ದಿನ ಹಾಗೂ ದಸರಾ ಸಂದರ್ಭದಲ್ಲಿ ಬಳ್ಳಾರಿಯ ಕನಕದುರ್ಗಮ್ಮ ದೇವಸ್ಥಾನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ದೇವಿಯ ದರ್ಶನ ಪಡೆದು ಆಶೀರ್ವಾದ ಪಡೆಯುವ ನಿರೀಕ್ಷೆಯಿತ್ತು. ಆದರೆ ದೇವಸ್ಥಾನದಲ್ಲಿ ಸೂಕ್ತ ವ್ಯವಸ್ಥೆಗಳಿಲ್ಲ ಎಂಬ ಆರೋಪ ಕೇಳಿಬಂದಿದ್ದು, ಭಕ್ತರು ತೀವ್ರ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.



ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವ ಅರ್ಚಕರ ನೇಮಕಾತಿ, ಅವರ ಜವಾಬ್ದಾರಿ ಹಾಗೂ ಸಂಬಂಧಿತ ವ್ಯವಸ್ಥೆಗಳ ಕುರಿತು ಗೊಂದಲಗಳಿವೆ ಎಂಬ ಮಾತುಗಳೂ ಕೇಳಿಬರುತ್ತಿವೆ. ಭಕ್ತರಿಗೆ ಶಾಂತಿಯುತವಾಗಿ ಪೂಜೆ ಸಲ್ಲಿಸಲು ಹಾಗೂ ದೇವಿಯ ಆಶೀರ್ವಾದ ಪಡೆಯಲು ಅಗತ್ಯ ಸೌಲಭ್ಯಗಳು ಇಲ್ಲವೆಂದು ಸಾರ್ವಜನಿಕರ ಅಗ್ರಹ, ಶಾಪ ಹಾಕಿದ್ದಾರೆ.

ಈ ಹಿಂದೆ ನಡೆದ ಪತ್ರಿಕಾಗೋಷ್ಠಿಯಲ್ಲಿಯೂ ನವರಾತ್ರಿ ಸಂದರ್ಭದಲ್ಲಿ ಗರ್ಭಗುಡಿಯಲ್ಲಿ ಪೂಜೆ ಸಲ್ಲಿಸಲು ವ್ಯವಸ್ಥೆ ಕಲ್ಪಿಸುವುದು, ಅಗತ್ಯವಿದ್ದಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸುವ ಅರ್ಚಕರನ್ನು ನಿಯೋಜಿಸುವುದು ಹಾಗೂ ಭಕ್ತರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವುದು ಕುರಿತು ಪತ್ರಕರ್ತರು ಗಮನ ಸೆಳೆದಿದ್ದರು. ಆದರೂ ಸಮಸ್ಯೆಗಳಿಗೆ ಪರಿಹಾರ ದೊರೆತಿಲ್ಲ ಎಂಬುದು ಭಕ್ತರ ಅಸಮಾಧಾನವಾಗಿದೆ.

ದೇವಸ್ಥಾನವು ಸರ್ಕಾರದ ಅಧೀನದಲ್ಲಿದ್ದರೂ ನಿರ್ವಹಣೆಯಲ್ಲಿ ಸಮರ್ಪಕ ನಿಯಂತ್ರಣವಿದೆಯೇ ಎಂಬ ಪ್ರಶ್ನೆ ಸಾರ್ವಜನಿಕರಲ್ಲಿ ಮೂಡಿದೆ. ದೇವಸ್ಥಾನದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸೆಲ್ವಮಣಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಈ ಕುರಿತು ಗಮನಹರಿಸಿ, ದೇವಸ್ಥಾನದ ಆಡಳಿತ ಮತ್ತು ಪೂಜಾ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರಬೇಕು ಎಂಬ ಒತ್ತಾಯ ಕೇಳಿಬರುತ್ತಿದೆ.

ಜಿಲ್ಲಾಡಳಿತ ಮತ್ತು ಜಿಲ್ಲಾಧಿಕಾರಿಗಳು ಕೂಡ ದೇವಸ್ಥಾನದಲ್ಲಿ ನಡೆಯುತ್ತಿರುವ ವ್ಯವಸ್ಥೆಗಳ ಕುರಿತು ಪರಿಶೀಲನೆ ನಡೆಸಿ, ಭಕ್ತರ ಸಮಸ್ಯೆಗಳಿಗೆ ಸ್ಪಂದಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ದೇವಿಯ ದರ್ಶನ ಪಡೆದು ನೆಮ್ಮದಿಯಿಂದ ಮನೆಗೆ ಮರಳಬೇಕೆಂಬ ಭಕ್ತರ ಆಶಯಕ್ಕೆ ವಿರುದ್ಧವಾಗಿ, ನಿರಾಸೆ ಮತ್ತು ಅಸಮಾಧಾನದಿಂದ ದೇವಸ್ಥಾನದಿಂದ ಹೊರಬರಬೇಕಾದ ಪರಿಸ್ಥಿತಿ ಎದುರಾಗಿದೆ ಎಂಬುದು ನೋವಿನ ಸಂಗತಿಯಾಗಿದೆ. ಭಕ್ತರ ನಂಬಿಕೆ ಮತ್ತು ಧಾರ್ಮಿಕ ಭಾವನೆಗಳಿಗೆ ಗೌರವ ನೀಡುವ ನಿಟ್ಟಿನಲ್ಲಿ ದೇವಸ್ಥಾನದ ಆಡಳಿತ ಮಂಡಳಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳು, ಸಂಪೂರ್ಣ ವಿಫಲ ಆಗಿದ್ದಾರೆ.

# ರಾಜ್ಯದಲ್ಲಿ 2.84 ಲಕ್ಷ ಹುದ್ದೆಗಳು ಖಾಲಿ: ಎನ್.ರವಿಕುಮಾರ್




ಕಲಬುರಗಿಯಲ್ಲಿ ವಿಧಾನ ಪರಿಷತ್ ಬಿಜೆಪಿ ಮುಖ್ಯ ಸಚೇತಕ ಎನ್.ರವಿಕುಮಾರ ಮಾಧ್ಯಮಗಳೊಂದಿಗೆ ಮಾತನಾಡಿದರು. ಈಶಾನ್ಯ ಶಿಕ್ಷಕರ ಕ್ಷೇತ್ರದ ಅಭ್ಯರ್ಥಿ ಶಶಿಲ್ ಜಿ. ನಮೋಶಿ, ಮಾಜಿ ಸಂಸದ ಡಾ. ಉಮೇಶ ಜಾಧವ್ ಇದ್ದರು.

**ಕಲಬುರಗಿ, ಅ. 21:** ರಾಜ್ಯದಲ್ಲಿ ಅ.23ರಂದು ನಡೆಯುವ ಶಿಕ್ಷಕ ಹಾಗೂ ಪದವೀಧರ ಮತಕ್ಷೇತ್ರದ ಚುನಾವಣೆಯಲ್ಲಿ ನಾಲ್ಕೂ ಸ್ಥಾನಗಳಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿಕೂಟ ಗೆಲುವು ಸಾಧಿಸಲಿದೆ ಎಂದು ವಿಧಾನ ಪರಿಷತ್ತಿನ ಮುಖ್ಯ ಸಚೇತಕ ಎನ್. ರವಿಕುಮಾರ ವಿಶ್ವಾಸ ವ್ಯಕ್ತಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ, ಈಚೆಗೆ ಸದನದಲ್ಲಿ ಕೇಳಲಾದ ಪ್ರಶ್ನೆಗೆ ಸರ್ಕಾರವೇ ಖಾಲಿ ಹುದ್ದೆಗಳ ವಿವರ ನೀಡಿದೆ. ಇದರಲ್ಲಿ ಪ್ರಮುಖವಾಗಿ ಶಿಕ್ಷಣ ಇಲಾಖೆಯಲ್ಲೆ ಅತಿ ಹೆಚ್ಚಿನ 79,694 ಹುದ್ದೆಗಳು ಖಾಲಿಯಿವೆ. ಉನ್ನತ ಶಿಕ್ಷಣದಲ್ಲೇ 13,599 ಇವೆ. ಆದರೆ ಖಾಲಿ ಹುದ್ದೆಗಳ ಭರ್ತಿ ಮಾಡುವುದಾಗಿ ಹೇಳುವ ಸರ್ಕಾರ ನೇಮಕಾತಿಗೆ ಅಧಿಸೂಚನೆ ಹೊರಡಿಸುತ್ತಿಲ್ಲ. ಪ್ರಮುಖವಾಗಿ ರಾಜ್ಯ ಸರ್ಕಾರದ ವೈಫಲ್ಯ ಅದರಲ್ಲೂ ಶಿಕ್ಷಕ ಕ್ಷೇತ್ರದ ಕಡೆಗಣನೆಯಿಂದ ಶಿಕ್ಷಕ ಮತದಾರರು ಎನ್‌ಡಿಎ ಅಭ್ಯರ್ಥಿಗಳಿಗೆ ಬೆಂಬಲಿಸುವುದರಿಂದ ಬಿಜೆಪಿ ಜೆಡಿಎಸ್ ಮೈತ್ರಿಕೂಟ ಜಯಗಳಿಸಲಿದೆ ಎಂದು ವಿವರಣೆ ನೀಡಿದರು.

ಅತಿಥಿ ಶಿಕ್ಷಕ ಹಾಗೂ ಪ್ರಾಧ್ಯಾಪಕರ ಸಂಬಳ ಅತಿ ಹೆಚ್ಚು ಮಾಡಿದ್ದೇ ಬಿಜೆಪಿ ಸರ್ಕಾರ. ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿ ಯಾಗಿದ್ದಾಗ 184 ಪದವಿ ಕಾಲೇಜುಗಳಿಗೆ ಮಂಜೂರಾತಿ ನೀಡಲಾಗಿದೆ. ಅದಕ್ಕಿಂತ ಮುಂಚೆ 141 ಕಾಲೇಜುಗಳಿದ್ದವು. ಅದಲ್ಲದೇ 9395ನೇ ಅವಧಿಗೆ ಪ್ರಾಥಮಿಕ ಪ್ರಮುಖವಾಗಿ ರೈತರ ಮಕ್ಕಳಿಗೆ ಬಸವರಾಮ ಬೊಮ್ಮಾಯಿ ಸರ್ಕಾರದಲ್ಲಿ ಜಾರಿಗೆ ತರಲಾಗಿದ್ದ ರೈತರ ಮಕ್ಕಳ ಶಿಷ್ಯವೇತನ ಕಾಂಗ್ರೆಸ್ ಸರ್ಕಾರ ಬಂದ ತಕ್ಷಣ ಸ್ಥಗಿತಗೊಳಿಸಿದೆ. ಕಾಂಗ್ರೆಸ್ ಸರ್ಕಾರಕ್ಕೆ ರೈತರು, ಶಿಕ್ಷಣ ಹಾಗೂ ಆರೋಗ್ಯ ಇಲಾಖೆ ಎಂದರೆ ಅಲರ್ಜಿ ಎನ್ನುವಂತಾಗಿದೆ ಎಂದು ಟೀಕಿಸಿದರು.

ಕಾಂಗ್ರೆಸ್ ಕಳೆದ ವಿಧಾನಸಭಾ ಚುನಾವಣೆ ಪ್ರಣಾಳಿಕೆಯಲ್ಲಿ ಸರ್ಕಾರ ಅಸ್ತಿತ್ವಕ್ಕೆ ಬಂದರೆ ನಾಲ್ಕು ದಿನದಲ್ಲಿ ಓಪಿಎಸ್ ಜಾರಿ ತರುವುದಾಗಿ ಹೇಳಿತ್ತು. ಆದರೆ ನಾಲ್ಕುವರೆ ವರ್ಷವಾದರೂ ಜಾರಿ ತರಲು ಮುಂದಾಗದಿರುವುದು ಶಿಕ್ಷಣ ಕಡೆಗಣನೆಗೆ ಸಾಕ್ಷಿಯಾಗಿದೆ ಎಂದು ರವಿಕುಮಾರ ವಾಗ್ದಾಳಿ ನಡೆಸಿದರು.

# ನಮ್ಮ ನೆಲೆಗಳ ಮೇಲೆ ದಾಳಿ ನಡೆಸಿದರೆ ಅಮೆರಿಕದ ಪ್ರಾದೇಶಿಕ ಮೂಲಸೌಕರ್ಯಗಳು ಧ್ವಂಸ: ಇರಾನ್ ಎಚ್ಚರಿಕೆ

**ತೆಹ್ರಾನ್, ಅ.21:** ಇಸ್ಲಾಮಿಕ್ ರಿಪಬ್ಲಿಕ್ನ ಮೂಲಸೌಕರ್ಯಗಳ ಮೇಲೆ ಅಮೆರಿಕ ನಡೆಸುವ ಯಾವುದೇ ದಾಳಿಯು ಪ್ರಾದೇಶಿಕ ಮಟ್ಟದಲ್ಲಿ ವ್ಯಾಪಕ ವಿನಾಶಕ್ಕೆ ಕಾರಣವಾಗಲಿದೆ ಎಂದು ಇರಾನ್ ತಿಳಿಸಿದೆ. ಇರಾನ್‌ನ ಸಂಯಮದಿಂದಾಗಿ ಇದುವರೆಗೆ ಸುರಕ್ಷಿತವಾಗಿದ್ದ ಪ್ರದೇಶದಾದ್ಯಂತ ಇರುವ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುವುದಾಗಿ ಅದರ ಸಶಸ್ತ್ರ ಪಡೆಗಳು ಶಪಥ ಮಾಡಿವೆ.

ಜಾಗತಿಕ ಹಡಗು ಸಾಗಣೆಯ ಪ್ರಮುಖ ಮಾರ್ಗವಾದ ಬಾಬ್ ಎಲ್-ಮಂಡೇಬ್ ಜಲಸಂಧಿಯನ್ನು ಮುಚ್ಚಲು ಸಿದ್ಧರಾಗಿರುವಂತೆ ಇರಾನ್ ಹೌತಿಗಳಿಗೆ ಸೂಚಿಸಿದೆ ಎಂದು ಹಲವು ವರದಿಗಳು ತಿಳಿಸಿವೆ.

ಇರಾನ್‌ನ ಖಾತಮ್ ಅಲ್-ಅನ್ಬಿಯಾ ಕೇಂದ್ರ ಕಚೇರಿಯ ವಕ್ತಾರ ಕರ್ನಲ್ ಇಬ್ರಾಹಿಂ ಝುಲ್ಫಖಾರಿ, ಹಾರ್ಮುಜ್ ಜಲಸಂಧಿಯಲ್ಲಿ ಅಮೆರಿಕದ ಯಾವುದೇ ಹಸ್ತಕ್ಷೇಪವನ್ನು ಇರಾನ್ ಸಹಿಸುವುದಿಲ್ಲ ಮತ್ತು ಅದನ್ನು "ಉಲ್ಲಂಘಿಸಲಾಗದ ಕೆಂಪು ಗೆರೆ" ಎಂದು ಕರೆದಿದ್ದಾರೆ. ಅಮೆರಿಕ ಅಧ್ಯಕ್ಷರು ಇಸ್ಲಾಮಿಕ್ ರಿಪಬ್ಲಿಕನ್ ಮೂಲಸೌಕರ್ಯಗಳನ್ನು ಗುರಿಯಾಗಿಸುವ ಬೆದರಿಕೆಗಳನ್ನು ಜಾರಿಗೆ ತಂದರೆ, ಇದುವರೆಗೆ ಸುರಕ್ಷಿತವಾಗಿರುವ ಅಮೇರಿಕದ ಪ್ರಾದೇಶಿಕ ಮೂಲಸೌಕರ್ಯಗಳನ್ನೆಲ್ಲಾ ಇರಾನ್ ಸಶಸ್ತ್ರ ಪಡೆಗಳು ಧ್ವಂಸಗೊಳಿಸಲಿವೆ ಎಂದು ಝುಲ್ಫಖಾರಿ ಹೇಳಿದ್ದಾರೆ.

**ಇಂಟರ್‌ನೆಟ್ ಕೇಬಲ್‌ಗಳೇ ಗುರಿ:** ಇರಾನ್‌ನ ಮೂಲಸೌಕರ್ಯಗಳ ಮೇಲೆ ದಾಳಿ ನಡೆದರೆ ಹಾರ್ಮುಜ್ ಜಲಸಂಧಿಯಲ್ಲಿರುವ ಇಂಟರ್ನೆಟ್ ಕೇಬಲ್‌ಗಳನ್ನು ಗುರಿಯಾಗಿಸುವುದಾಗಿ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ರಾಜಕೀಯ ಉಪ ಮುಖ್ಯಸ್ಥ ಯದೊಲ್ಲಾ ಜವಾನಿ ಬುಧವಾರ ತಿಳಿಸಿದ್ದಾರೆ. ಪ್ರದೇಶದಲ್ಲಿರುವ ಅಮೆರಿಕದ ನೆಲೆಗಳು ಧ್ವಂಸಗೊಂಡಿವೆ ಎಂದು ತಿಳಿಸಿರುವ ಅವರು, ದೂರದ ನೆಲೆಗಳನ್ನೂ ಗುರಿಯಾಗಿಸಬಹುದು ಎಂದು ಎಚ್ಚರಿಸಿದ್ದಾರೆ. ತಡೆಗಟ್ಟುವಿಕೆಯನ್ನು ಬಲಪಡಿಸಲು ಮತ್ತು ಭವಿಷ್ಯದ ದಾಳಿಗಳನ್ನು ತಡೆಯಲು ಇರಾನ್ನ ಕ್ರಮಗಳು "ಚುರುಕಾದ ಮತ್ತು ಕೆಲವು ಸಂದರ್ಭಗಳಲ್ಲಿ ಆಕ್ರಮಣಕಾರಿಯಾಗಿರುತ್ತವೆ" ಎಂದು ಅವರು ಹೇಳಿದರು.

**ಅಮೆರಿಕದ ಬದ್ಧತೆಯ ಮೇಲೆ ನಂಬಿಕೆಯಿಲ್ಲ:** ಶಾಂತಿ ಒಪ್ಪಂದದ ಭವಿಷ್ಯದ ಬಗ್ಗೆ ಇರಾನ್ ಅನುಮಾನ ವ್ಯಕ್ತಪಡಿಸಿದ್ದು, ಅಮೆರಿಕದ ಬದ್ಧತೆಯ ಮೇಲೆ ಯಾವುದೇ ನಂಬಿಕೆಯಿಲ್ಲ ಎಂದು ತಿಳಿಸಿದೆ.

## ಮತ್ತಷ್ಟು ಮಾತುಕತೆಗಳಿಗೂ ಮುನ್ನ ಒಪ್ಪಂದವನ್ನು ಗೌರವಿಸುವಂತೆ ಅಮೆರಿಕಕ್ಕೆ ಅರಾಘ್ಚಿ ಆಗ್ರಹ



ಹಾರ್ಮುಜ್ ಜಲಸಂಧಿಯ ಕುರಿತು ಮಾತನಾಡಿದ ಅರಾಘ್ಚಿ, ಇಸ್ಲಾಮಾಬಾದ್ ತಿಳಿವಳಿಕೆ ಒಪ್ಪಂದದ (ಒಂಗ) ಅಡಿಯಲ್ಲಿ ವಾಷಿಂಗ್ಟನ್ ತನ್ನ ಬದ್ಧತೆಗಳನ್ನು ಈಡೇರಿಸಿ, ತೆಹ್ರಾನ್ನ ಷರತ್ತುಗಳನ್ನು ಒಪ್ಪಿಕೊಳ್ಳುವವರೆಗೆ ಸಮುದ್ರ ಯಾನದ ಮೇಲಿನ ನಿರ್ಬಂಧಗಳು ಮುಂದುವರಿಯಲಿವೆ ಎಂದಿದ್ದಾರೆ. ಹಾರ್ಮುಜ್ ಜಲಸಂಧಿಯ ಕುರಿತ ನಮ್ಮ ನಿಲುವು ಸ್ಪಷ್ಟವಾಗಿದೆ ಎಂದು ಅವರು ತಿಳಿಸಿದ್ದಾರೆ. ಇರಾನ್ ಮೇಲಿನ ದಿಗ್ಬಂಧನವನ್ನು ಮುಂದುವರಿಸಿ ಮತ್ತು ದೇಶಕ್ಕೆ ಬೆದರಿಕೆ ಹಾಕಿ ಅಮೆರಿಕವು ತೆಹ್ರಾನ್ ಜೊತೆ ಮಾತುಕತೆಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ ಎಂದು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯನ್ ತಿಳಿಸಿದ್ದಾರೆ.



# ನೀರಿನ ಬಾಟಲಿ ತಯಾರಿಸುವ ಪ್ಲಾಸ್ಟಿಕ್‌ನಿಂದ ವಜ್ರ ಸೃಷ್ಟಿ: ವಿಜ್ಞಾನಿಗಳ ಅಚ್ಚರಿಯ ಸಾಧನೆ

**ಬರ್ಲಿನ್, ಅ.21:** ಜರ್ಮನಿಯ ವಿಜ್ಞಾನಿಗಳು ಪ್ಲಾಸ್ಟಿಕ್ ಮತ್ತು ಅತ್ಯಂತ ಶಕ್ತಿಶಾಲಿ ಲೇಸರ್ ಕಿರಣಗಳನ್ನು ಬಳಸಿ ಅತ್ಯಂತ ಸೂಕ್ಷ್ಮವಾದ ನಾನೋಡೈ ಮಂಡ್‌ಗಳನ್ನು ತಯಾರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ಸಂಶೋಧನೆಯು ನೆಪ್ಚೂನ್ ಮತ್ತು ಯುರೇನಸ್‌ನಂತಹ ಹಿಮಾವೃತ ಗ್ರಹಗಳ ಒಳಭಾಗದಲ್ಲಿ ವಜ್ರಗಳು ರೂಪುಗೊಳ್ಳುವ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳಲು ನೆರವಾಗಲಿದೆ. ಅಷ್ಟೇ ಅಲ್ಲ, ವೈದ್ಯಕೀಯ, ಕ್ವಾಂಟಮ್ ತಂತ್ರಜ್ಞಾನ ಮತ್ತು ಪರಿಸರ ಸಂರಕ್ಷಣೆಯಂತಹ ಕ್ಷೇತ್ರಗಳಲ್ಲಿಯೂ ಈ ಆವಿಷ್ಕಾರ ಮಹತ್ವದ ಬದಲಾವಣೆ ತರಬಹುದು ಎಂಬ ನಿರೀಕ್ಷೆಯಿದೆ.

ಪ್ಲಾಸ್ಟಿಕ್‌ನಿಂದ ವಜ್ರ ತಯಾರಿಸಬಹುದೇ? ಸಾಮಾನ್ಯವಾಗಿ ಅಸಾಧ್ಯವೆಂದು ತೋರುವ ಈ ಪ್ರಶ್ನೆಗೆ ವಿಜ್ಞಾನಿಗಳು ಪ್ರಯೋಗದ ಮೂಲಕ ಉತ್ತರ ಕಂಡುಕೊಂಡಿದ್ದಾರೆ. ಜರ್ಮನಿಯ ಹೆಲ್ಮ್‌ಹೋಲ್ಟ್ಜ್-ಸೆಂಟ್ರಮ್ ಡ್ರೆಸ್ಡನ್-ರಾಸೆಂಡಾರ್ಫ್ (ಊಚಿಆಖ) ಮತ್ತು ರೊಸ್ಟಾಕ್ ವಿಶ್ವವಿದ್ಯಾಲಯದ ಸಂಶೋಧಕರು ಅತ್ಯಂತ ಪ್ರಬಲವಾದ ಲೇಸರ್ ತಂತ್ರಜ್ಞಾನವನ್ನು ಬಳಸಿಕೊಂಡು ನಾನೋಡೈಮಂಡ್‌ಗಳನ್ನು ಉತ್ಪಾದಿಸಿದ್ದಾರೆ. ಈ ಪ್ರಯೋಗವನ್ನು ಜೆಕ್ ಗಣರಾಜ್ಯದ ಪ್ರಾಗ್ ನಗರದ ಸಮೀಪದಲ್ಲಿರುವ ಎಕ್ಸ್‌ಟ್ರೀಮ್ ಲೈಟ್ ಇನ್‌ಫ್ರಾಸ್ಟ್ರಕ್ಚರ್ (ಇಐಖ) ಲೇಸರ್ ಸಂಶೋಧನಾ ಕೇಂದ್ರದಲ್ಲಿ ನಡೆಸಲಾಗಿದೆ. ಭೂಮಿಯಿಂದ ದೂರದಲ್ಲಿರುವ ನೆಪ್ಚೂನ್ ಮತ್ತು ಯುರೇನಸ್‌ನಂತಹ ಹಿಮಾವೃತ ಗ್ರಹಗಳ ಒಳಭಾಗದಲ್ಲಿ ಅತಿಯಾದ ಒತ್ತಡ ಮತ್ತು ಉಷ್ಣಾಂಶದಿಂದ ಕಾರ್ಬನ್ ವಜ್ರವಾಗಿ ರೂಪಾಂತರ ಗೊಳ್ಳಬಹುದು ಎಂಬ ವೈಜ್ಞಾನಿಕ ಸಿದ್ಧಾಂತವನ್ನು ಪ್ರಯೋಗಾಲಯದಲ್ಲಿ ಅಧ್ಯಯನ ಮಾಡಲು ಈ ಸಂಶೋಧನೆ ನೆರವಾಗಿದೆ.

**ಹೇಗೆ ರೂಪುಗೊಂಡವು ನಾನೋಡೈಮಂಡ್‌ಗಳು?**

ಈ ಪ್ರಯೋಗದಲ್ಲಿ ವಿಜ್ಞಾನಿಗಳು ನೀರಿನ ಬಾಟಲಿ ಸೇರಿದಂತೆ ಹಲವು ಉತ್ಪನ್ನಗಳ ತಯಾರಿಕೆಯಲ್ಲಿ ಬಳಸುವ ಪಾಲಿಥಿಲೀನ್ ಟೆರೆಫ್ತಲೇಟ್ ಎಂಬ ಪ್ಲಾಸ್ಟಿಕ್‌ನ ಅತ್ಯಂತ ತೆಳುವಾದ ಹಾಳೆಯನ್ನು ಬಳಸಿದ್ದಾರೆ. ಈ ಹಾಳೆಯ ದಪ್ಪ ಸುಮಾರು 100 ಮೈಕ್ರೋಮೀಟರ್‌ಗಳಷ್ಟಿತ್ತು. ಈ ಪ್ಲಾಸ್ಟಿಕ್ ಹಾಳೆಯ ಮೇಲೆ ಅತ್ಯಂತ ಶಕ್ತಿಶಾಲಿ ಲೇಸರ್ ಕಿರಣಗಳನ್ನು ಹಾಯಿಸಲಾಯಿತು. ಇದರಿಂದ ಪ್ಲಾಸ್ಟಿಕ್ ಒಳಭಾಗದಲ್ಲಿ ಸುಮಾರು 100 ಗಿಗಾಪಾಸ್ಕಲ್ ಮಟ್ಟದ ತೀವ್ರ ಒತ್ತಡ ಉಂಟಾಯಿತು.

ಈ ಅಸಾಧಾರಣ ಒತ್ತಡ ಮತ್ತು ಉಷ್ಣಾಂಶದ ಪರಿಣಾಮವಾಗಿ ಪ್ಲಾಸ್ಟಿಕ್‌ನಲ್ಲಿದ್ದ ಕಾರ್ಬನ್ ಪರಮಾಣುಗಳು ಮರುಜೋಡಣೆ ಗೊಂಡು ಅತಿಸಣ್ಣ ವಜ್ರದ ರಚನೆಗಳನ್ನು ರೂಪಿಸಿದವು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಈ ಪ್ರಯೋಗದಲ್ಲಿ ಸಾಮಾನ್ಯ ಗಾತ್ರದ ವಜ್ರಗಳನ್ನು ತಯಾರಿಸಿಲ್ಲ. ಬದಲಾಗಿ, ನ್ಯಾನೋಮೀಟರ್ ಮಟ್ಟದ ಅತ್ಯಂತ ಸೂಕ್ಷ್ಮವಾದ ವಜ್ರದ ಕಣಗಳನ್ನು ಉತ್ಪಾದಿಸಲಾಗಿದೆ. ಇವುಗಳನ್ನೇ ನ್ಯಾನೋಡೈಮಂಡ್‌ಗಳು ಎಂದು ಕರೆಯಲಾಗುತ್ತದೆ.

**ವಜ್ರಗಳನ್ನು ಸಂಗ್ರಹಿಸುವುದೇ ದೊಡ್ಡ ಸವಾಲು:**

ಲೇಸರ್ ಬಳಸಿ ನ್ಯಾನೋ ಡೈಮಂಡ್‌ಗಳನ್ನು ಉತ್ಪಾದಿಸುವುದರ ಜೊತೆಗೆ, ಅವುಗಳನ್ನು ಹಾನಿಯಾಗದಂತೆ ಸಂಗ್ರಹಿಸುವುದು ಕೂಡ ಸಂಶೋಧಕರಿಗೆ ಸವಾಲಾಗಿತ್ತು. ಪ್ರಯೋಗದ ವೇಳೆ ಉತ್ಪತ್ತಿಯಾದ ಸೂಕ್ಷ್ಮ ವಜ್ರದ ಕಣಗಳು ಅತ್ಯಂತ ಹೆಚ್ಚಿನ ವೇಗದಲ್ಲಿ ಚಲಿಸುತ್ತಿದ್ದವು. ಇಂತಹ ಪರಿಸ್ಥಿತಿಯಲ್ಲಿ ಅವುಗಳನ್ನು ಸುರಕ್ಷಿತವಾಗಿ ಹಿಡಿದಿಟ್ಟುಕೊಳ್ಳುವುದು ಅಗತ್ಯವಾಗಿತ್ತು. ಇದಕ್ಕಾಗಿ ವಿಜ್ಞಾನಿಗಳು ನೀರು ಮತ್ತು ಅಯಾನಿಕ್ ಜೆಲ್ ಒಳಗೊಂಡ ವಿಶೇಷ ಸಂಗ್ರಹ ಮಾಧ್ಯಮವನ್ನು ಬಳಸಿದರು. ವೇಗವಾಗಿ ಚಲಿಸುತ್ತಿದ್ದ ನಾನೋಡೈ ಮಂಡ್‌ಗಳು ಈ ಮಾಧ್ಯಮದೊಳಗೆ ಸಿಲುಕಿಕೊಂಡು ಸಂಗ್ರಹವಾದವು. ಇದರಿಂದ ಅವುಗಳ ರಚನೆಯನ್ನು ಮತ್ತಷ್ಟು ಅಧ್ಯಯನ ಮಾಡಲು ಸಾಧ್ಯವಾಯಿತು.

**ಕೇವಲ 3 ನ್ಯಾನೋಮೀಟರ್ ಗಾತ್ರದ ವಜ್ರಗಳು:**

ಈ ಪ್ರಯೋಗದಲ್ಲಿ ದೊರೆತ ಫಲಿತಾಂಶಗಳು ವಿಜ್ಞಾನಿಗಳ ಗಮನ ಸೆಳೆದಿವೆ. ಸಂಶೋಧನೆಯ ಪ್ರಕಾರ, ಪ್ರತಿ ಲೇಸರ್ ಶಾಟ್‌ಗೆ ಸುಮಾರು 10 ಟ್ರಿಲಿಯನ್ ನಾನೋಡೈಮಂಡ್‌ಗಳು ರೂಪುಗೊಂಡಿದ್ದು, ಪ್ರತಿಯೊಂದು ಕಣದ ಸರಾಸರಿ ಗಾತ್ರ ಸುಮಾರು 3 ನ್ಯಾನೋಮೀಟರ್‌ಗಳಷ್ಟಿತ್ತು ಎಂದು ವರದಿಯಾಗಿದೆ. ಈ ಕಣಗಳ ಗಾತ್ರ ಎಷ್ಟು ಸೂಕ್ಷ್ಮವಾಗಿದೆ ಎಂದರೆ, ಅವುಗಳನ್ನು ಬರಿಗಣ್ಣಿನಿಂದ ನೋಡಲು ಸಾಧ್ಯವಿಲ್ಲ. ಅವುಗಳ ಅಸ್ತಿತ್ವ, ರಚನೆ ಮತ್ತು ಗುಣಲಕ್ಷಣಗಳನ್ನು ಖಚಿತಪಡಿಸಿಕೊಳ್ಳಲು ಅತ್ಯಾಧುನಿಕ ಎಲೆಕ್ಟ್ರಾನ್ ಮೈಕ್ರೋಸ್ಕೋಪ್ ಸೇರಿದಂತೆ ವಿಶೇಷ ವೈಜ್ಞಾನಿಕ ಉಪಕರಣಗಳನ್ನು

# ಯಾವುದೇ ಒಪ್ಪಂದವಿರಲಿ ಅಂತಿಮ ನಿರ್ಧಾರ ಟ್ರಂಪ್‌ರದ್ದು: ರುಬಿಯೋ

**ವಾಷಿಂಗ್ಟನ್, ಅ.21:** ಅಮೆರಿಕದ ಕಾರ್ಯದರ್ಶಿ ಮಾರ್ಕೊ ರೂಬಿಯೊ ಮಾತನಾಡಿ, ಇರಾನ್‌ಜೊತೆಗಿನ ಸಂಭವನೀಯ ಮಾತುಕತೆಗಳ ಕುರಿತು ವಾಷಿಂಗ್ಟನ್ ಹಲವು ದೇಶಗಳೊಂದಿಗೆ ಚರ್ಚಿಸುತ್ತಿದೆ ಮತ್ತು ಮಧ್ಯಸ್ಥಿಕೆ ಪ್ರಯತ್ನಗಳನ್ನು ಸ್ವಾಗತಿಸುತ್ತದೆ ಎಂದು ತಿಳಿಸಿದ್ದಾರೆ. ಆದರೆ, ಯಾವುದೇ ಒಪ್ಪಂದವು ತೆಹ್ರಾನ್ ಪರಮಾಣು ಅಸ್ತ್ರವನ್ನು ಹೊಂದುವುದನ್ನು ತಡೆಯಬೇಕು ಎಂದು ಅವರು ಒತ್ತಿಹೇಳಿದ್ದಾರೆ. "ಇರಾನ್ ಮಾತುಕತೆಗಳಲ್ಲಿ ಹಲವಾರು ದೇಶಗಳು ಭಾಗಿಯಾಗಿವೆ. ನಾವು ಮಧ್ಯಸ್ಥಿಕೆ ಪ್ರಯತ್ನಗಳನ್ನು ಸ್ವಾಗತಿಸುತ್ತೇವೆ" ಎಂದು ರೂಬಿಯೊ ಸುದ್ದಿಗಾರರಿಗೆ ತಿಳಿಸಿದರು. ಈ ಚರ್ಚೆಗಳಲ್ಲಿ ಕತಾರ್ನ ದೀರ್ಘಕಾಲಿಕ ಪಾತ್ರವನ್ನು ಅವರು ಎತ್ತಿ ತೋರಿಸಿದರು. "ಕತಾರ್ ವಿಷಯದಲ್ಲಿ, ಅವರು ಈ ವಿಷಯದಲ್ಲಿ ಬಹಳ ಹಿಂದಿನಿಂದಲೂ ತೊಡಗಿಸಿಕೊಂಡಿದ್ದಾರೆ" ಎಂದು ಅವರು ಹೇಳಿದರು, ಫೀಲ್ಡ್ ಮಾರ್ಷಲ್ ಅಸಿಮ್ ಮುನೀರ್ ಸೋಮವಾರ ತೆಹ್ರಾನ್ನಲ್ಲಿದ್ದರು ಎಂಬುದನ್ನು ಗಮನಸೆಳೆದರು. ಯಾವ ನಿಯಮಗಳು ಸ್ವೀಕಾರಾರ್ಹವಾಗಿರುತ್ತವೆ ಎಂಬ ಅಂತಿಮ ನಿರ್ಧಾರವು ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕೈಯಲ್ಲಿರುತ್ತದೆ ಎಂದು ರೂಬಿಯೊ ಹೇಳಿದರು. "ಅಂತಿಮವಾಗಿ, ಯಾವುದು ಸ್ವೀಕಾರಾರ್ಹ ಎಂಬ ಯಾವುದೇ ನಿರ್ಧಾರವು ಅಧ್ಯಕ್ಷರ ಕೈಯಲ್ಲಿರುತ್ತದೆ" ಎಂದು ಅವರು ತಿಳಿಸಿದರು. ಮುಂಚಿತವಾಗಿ, ತೆಹ್ರಾನ್ ಮತ್ತು ವಾಷಿಂಗ್ಟನ್ ನಡುವಿನ ಉದ್ವಿಗ್ನತೆಯ ಮಧ್ಯೆ, ಇರಾನ್ ಬಿಕ್ಕಟ್ಟನ್ನು ಬಗೆಹರಿಸಲು ಮಾಸ್ಕೋದ ಸಿದ್ಧತೆಯನ್ನು ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಪುನರುಚ್ಚರಿಸಿದ್ದಾರೆ ಎಂದು ಕ್ರೆಮ್ಲಿನ್ ತಿಳಿಸಿದೆ.

# ಉಕ್ರೇನ್ – ಅಮೆರಿಕ ಜೊತೆ ತ್ರಿಪಕ್ಷೀಯ ಶಾಂತಿ ಮಾತುಕತೆ ಪುನರಾರಂಭಕ್ಕೆ ರಷ್ಯಾ ಅಧ್ಯಕ್ಷ ಪುಟಿನ್ ಸಮ್ಮತಿ

ಸೇಂಟ್ ಪೀಟರ್ಸ್ಬರ್ಗ್, ರಷ್ಯಾ, ಅ.21: ಎರಡನೇ ಮಹಾಯುದ್ಧದ ನಂತರ ಯುರೋಪ್‌ನ ಅತ್ಯಂತ ಭೀಕರ ರಕ್ತಸಿಕ್ತ ಸಂಘರ್ಷವನ್ನು ಕೊನೆಗೊಳಿಸುವ ಅಮೆರಿಕದ ಹೊಸ ಪ್ರಯತ್ನದ ಭಾಗವಾಗಿ, ಯುಎಸ್ ವಿಶೇಷ ದೂತ ಸ್ಟೀವ್ ವಿಟ್ಕಾಫ್ ಅವರನ್ನು ಭೇಟಿಯಾದ ಬಳಿಕ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಮುಂದಿನ ತಿಂಗಳಿಂದಲೇ ಅಮೆರಿಕದ ಮಧ್ಯಸ್ಥಿಕೆಯಲ್ಲಿ ಉಕ್ರೇನ್ನೊಂದಿಗೆ ಶಾಂತಿ ಮಾತುಕತೆಗಳನ್ನು ಪುನರಾರಂಭಿಸಲು ಒಪ್ಪಿಕೊಂಡಿದ್ದಾರೆ ಎಂದು ಕ್ರೆಮ್ಲಿನ್ ಬುಧವಾರ ತಿಳಿಸಿದೆ.

ವಿಟ್ಕಾಫ್ ಅವರು ಪುಟಿನ್ ಅವರನ್ನು ನೇರವಾಗಿ ಭೇಟಿಯಾದ ಒಂಬತ್ತನೇ ಸಂದರ್ಭ ಇದಾಗಿದ್ದು, ಸೇಂಟ್ ಪೀಟರ್ಸ್‌ಬರ್ಗ್‌ನ ಭವ್ಯವಾದ ರಾಜಮನೆತನದ ಅರಮನೆಯಲ್ಲಿ ಮಾತುಕತೆಗಳು ಆರಂಭವಾದವು. ಈ ವೇಳೆ ರಷ್ಯಾದಿಂದ ಸೌಹಾರ್ದತೆಯ ಸಂಕೇತವಾಗಿ ಅಮೆರಿಕದ ನಿವೃತ್ತ ಶಾಲಾ ಶಿಕ್ಷಕ ಸ್ಟೀಫನ್ ಹಬರ್ಡ್ ಅವರನ್ನು ಬಿಡುಗಡೆ ಮಾಡಲಾಯಿತು. ಇವರನ್ನು







ಬಿಡುಗಡೆ ಮಾಡುವಂತೆ ಯುಎಸ್ ಅಧ್ಯಕ್ಷ ಟ್ರಂಪ್ ಅವರು ಕ್ರೆಮ್ಲಿನ್ ಮುಖ್ಯಸ್ಥರನ್ನು ಕೋರಿದ್ದರು.

ಉಕ್ರೇನ್ ಮತ್ತು ಅದರ ಮಿತ್ರರಾಷ್ಟ್ರಗಳಲ್ಲಿ ಅಮೆರಿಕವು ಉಕ್ರೇನ್ನಿಂದ ಹಿಂದೆ ಸರಿಯುತ್ತಿದೆ ಎಂಬ ಕಳವಳಗಳ ನಡುವೆಯೇ ಬುಧವಾರದ ಈ ಭೇಟಿ ನಡೆಯಿತು. ಕೆಲವೊಮ್ಮೆ ರಷ್ಯಾದ ದಾಳಿಗಳ ಕುರಿತ ನೈಜ-ಸಮಯದ ಗುಪ್ತಚರ ಮಾಹಿತಿಯನ್ನು ತಡೆಹಿಡಿಯುವುದು ಮತ್ತು ಉಕ್ರೇನ್‌ನ ಮಿಲಿಟರಿ ಸಂವಹನಗಳಿಗೆ ಅಡ್ಡಿಪಡಿಸುವುದು ಈ ಕಳವಳಗಳಿಗೆ ಕಾರಣವಾಗಿತ್ತು.

ಟ್ರಂಪ್ ಅವರು ತಮ್ಮ ಯಶಸ್ವಿ ಚುನಾವಣಾ ಪ್ರಚಾರದ ಸಮಯದಲ್ಲಿ 24 ಗಂಟೆಗಳ ಒಳಗೆ ಉಕ್ರೇನ್ ಯುದ್ಧವನ್ನು ಕೊನೆಗೊಳಿಸುವುದಾಗಿ ಭರವಸೆ ನೀಡಿ ಎರಡು ವರ್ಷಗಳಿಗೂ ಹೆಚ್ಚು ಸಮಯ ಕಳೆದ ನಂತರ ಈ ಹೊಸ ಮಾತುಕತೆಗಳು ಬಂದಿವೆ.

ಈ ಹೊಸ ಮೂರುಪಕ್ಷೀಯ ಶಾಂತಿ ಮಾತುಕತೆಗಳು ತಾಂತ್ರಿಕ ಮಟ್ಟದಲ್ಲಿ ಅಬುಧಾಬಿಯಲ್ಲಿ ನಡೆಯಬಹುದು ಮತ್ತು ಯುದ್ಧ ಮುಗಿದ ನಂತರ ಉಕ್ರೇನ್ ಹಾಗೂ ರಷ್ಯಾದ ಭದ್ರತೆಯನ್ನು ಹೇಗೆ ಖಾತರಿಪಡಿಸುವುದು ಎಂಬುದರ ಮೇಲೆ ಕೇಂದ್ರೀಕೃತವಾಗಿರುತ್ತದೆ ಎಂದು ಕ್ರೆಮ್ಲಿನ್ ತಿಳಿಸಿದೆ. ನವೆಂಬರ್ 10 ರಂದು ಅಥವಾ ಅದರ ನಂತರ ಯಾವುದೇ ದಿನ ಮಾತುಕತೆಗಳು ಪ್ರಾರಂಭವಾಗಬಹುದು ಎಂದು ಅದು ಹೇಳಿದೆ. ಅಮೆರಿಕ ಮತ್ತು ಇಸ್ರೇಲ್ ಇರಾನ್ ವಿರುದ್ಧ ಯುದ್ಧವನ್ನು ಪ್ರಾರಂಭಿಸುವ ಮೊದಲು ಫೆಬ್ರವರಿಯಲ್ಲಿ ಕೊನೆಯ ಅಮೆರಿಕದ ಮಧ್ಯಸ್ಥಿಕೆಯ ಶಾಂತಿ ಮಾತುಕತೆಗಳು ನಡೆದಿದ್ದವು.

## ರಕ್ಷಣಾ ಸಹಕಾರ ಕುರಿತು ಬದರ್ ಒಪ್ಪಂದ

# ಟರ್ಕಿ, ಪಾಕಿಸ್ತಾನ, ಕತಾರ್ ಇಂಡೋನೇಷ್ಯಾ ನಡುವೆ ಸಹಿ

**ಅಂಕಾರಾ, ಅ.21:** ಟರ್ಕಿ, ಕತಾರ್, ಇಂಡೋನೇಷ್ಯಾ ಮತ್ತು ಪಾಕಿಸ್ತಾನ ದೇಶಗಳ ರಕ್ಷಣಾ ಸಹಕಾರವನ್ನು ಬಲಪಡಿಸಲು ಮತ್ತು ಕಾರ್ಯತಂತ್ರದ ಪಾಲುದಾರಿಕೆಯನ್ನು ಸ್ಥಾಪಿಸಲು ಬದರ್ ಸ್ಮರಣಪತ್ರಕ್ಕೆ ಸಹಿ ಹಾಕಿವೆ ಎಂದು ಟರ್ಕಿಯ ರಾಷ್ಟ್ರೀಯ ರಕ್ಷಣಾ ಸಚಿವಾಲಯ ಬುಧವಾರ. ಟರ್ಕಿಯ ರಾಷ್ಟ್ರೀಯ ರಕ್ಷಣಾ ಸಚಿವ ಯಾಸರ್ ಗುಲರ್, ಕತಾರ್‌ನ ಉಪ ಪ್ರಧಾನ ಮಂತ್ರಿ ಮತ್ತು ರಕ್ಷಣಾ ವ್ಯವಹಾರಗಳ ರಾಜ್ಯ ಸಚಿವ ಶೇಖ್ ಸೌದ್ ಬಿನ್ ಅಬ್ದುಲ್ ರಹಮಾನ್ ಬಿನ್ ಹಸನ್ ಅಲ್ ಥಾನಿ, ಇಂಡೋನೇಷ್ಯಾದ ಉಪ ರಕ್ಷಣಾ ಸಚಿವ ಯೂಸುಫ್ ಜೌಹಾರಿ ಮತ್ತು ಪಾಕಿಸ್ತಾನದ ರಕ್ಷಣಾ ಸಚಿವ ಖವಾಜಾ ಮುಹಮ್ಮದ್ ಆಸಿಫ್ ಸೇರಿದಂತೆ ನಾಲ್ಕು ದೇಶಗಳ ರಕ್ಷಣಾ ಸಚಿವರು ದೋಹಾದಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಿದರು. ಟರ್ಕಿಯ ರಕ್ಷಣಾ ಕೈಗಾರಿಕೆಗಳ ಅಧ್ಯಕ್ಷ ಹಲುಕ್ ಗೊರ್ಗುನ್ ಸಹ ಸಹಿ ಮಾಡುವ ಸಮಾರಂಭದಲ್ಲಿ ಭಾಗವಹಿಸಿದ್ದರು.

**ಒಪ್ಪಂದದಲ್ಲಿ ಏನೇನಿದೆ?:** "ಹುಣ್ಣಿಮೆ" ಎಂಬ ಅರ್ಥ ನೀಡುವ "ಬದ್ರ್" ಎಂದು ಹೆಸರಿಸಲಾದ ಈ ಒಪ್ಪಂದವು ಮಿಲಿಟರಿ ಉತ್ಪಾದನೆಯಲ್ಲಿ ಸಹಕಾರವನ್ನು ವಿಸ್ತರಿಸಲು, ರಕ್ಷಣಾ ಸಾಮರ್ಥ್ಯಗಳನ್ನು ಬಲಪಡಿಸಲು ಮತ್ತು ತಾಂತ್ರಿಕ ಮಿಲಿಟರಿ ತರಬೇತಿ, ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಉತ್ತೇಜಿಸಲು ಉದ್ದೇಶಿಸಿದೆ. ಆಧುನಿಕ ರಕ್ಷಣಾ ವ್ಯವಸ್ಥೆಗಳ ಪ್ರಗತಿಗೆ ಅನುಗುಣವಾಗಿ ಕೈಗಾರಿಕಾ ಕ್ಷೇತ್ರಗಳು ಮತ್ತು ಪರಿಹಾರಗಳ ಅಭಿವೃದ್ಧಿಯನ್ನು ಬೆಂಬಲಿಸಲು ಸಹ ಈ ಉಪಕ್ರಮವನ್ನು ರೂಪಿಸಲಾಗಿದೆ.

# ಗರ್ಬಾ ನೃತ್ಯಕ್ಕೆ ಹೆಜ್ಜೆ ಹಾಕಿದ ನ್ಯೂಯಾರ್ಕ್ ಮೇಯರ್ ಮಮ್ದಾನಿ

**ನ್ಯೂಯಾರ್ಕ್, ಅ. 21:** ನ್ಯೂಯಾರ್ಕ್ ನಗರದ ಮೇಯರ್ ಜೋಹ್ರಾನ್ ಮಮ್ದಾನಿ ಅವರು ನವರಾತ್ರಿ ಆಚರಣೆಯಲ್ಲಿ ಭಾರತೀಯರೊಂದಿಗೆ ಪಾಲ್ಗೊಂಡು ಸಾಂಪ್ರದಾಯಿಕ ಗುಜರಾತಿ ಗರ್ಬಾ ನೃತ್ಯ ಮಾಡುವ ಮೂಲಕ ಗಮನ ಸೆಳೆದಿದ್ದಾರೆ.



ಮಂಗಳವಾರ ನಡೆದ ನವರಾತ್ರಿ ಸಂಭ್ರಮದಲ್ಲಿ ಕಪ್ಪು ಬಣ್ಣದ ಸೂಟ್ ಧರಿಸಿದ್ದ ಮಮ್ದಾನಿ, ಅದರ ಮೇಲೆ ದುಪಟ್ಟಾ ಹೊದ್ದು ಗರ್ಬಾ ನೃತ್ಯದ ಹೆಜ್ಜೆ ಹಾಕಿರುವ ದೃಶ್ಯಗಳು ಇದೀಗ ಸೋಷಿಯಲ್ ಮೀಡಿಯಾದಲ್ಲಿ ವ್ಯಾಪಕವಾಗಿ ಹರಿದಾಡುತ್ತಿವೆ. ಕಾರ್ಯಕ್ರಮದ ಬಳಿಕ ಅವರು ಸ್ಥಳೀಯ ದೇವಾಲಯವೊಂದಕ್ಕೂ ಭೇಟಿ ನೀಡಿ ಅರ್ಚಕರಿಂದ ಆಶೀರ್ವಾದ ಪಡೆದಿದ್ದಾರೆ. ನವರಾತ್ರಿ ಹಬ್ಬದ ಅಂಗವಾಗಿ ಹಿಂದೂ ಸಮುದಾಯಕ್ಕೆ ಶುಭಾಶಯ ಕೋರಿರುವ ಮಮ್ದಾನಿ, ದಕ್ಷಿಣ ಏಷ್ಯಾದ ವಿವಿಧ ಭಾಗಗಳಲ್ಲಿ ಆಚರಿಸಲಾಗುವ ಹಬ್ಬಗಳ ವೈವಿಧ್ಯವನ್ನು ಉಲ್ಲೇಖಿಸಿದ್ದಾರೆ.

ಈ ವಾರ ನಮ್ಮ ಹಿಂದೂ ನೆರೆಹೊರೆಯವರು ದುರ್ಗಾದೇವಿಯನ್ನು ಆರಾಧಿಸುವ ನವರಾತ್ರಿ ಹಬ್ಬವನ್ನು ಆಚರಿಸುತ್ತಿದ್ದಾರೆ. ಗರ್ಬಾ ನೃತ್ಯ, ಸಿಂಧೂರ ಖೇಲಾ, ಹಿರಿಯರಿಂದ ತಿಲಕ ಸ್ವೀಕಾರ ಹಾಗೂ ಮನೆಗಳಲ್ಲಿ ಗೊಂಬೆಗಳ ಪ್ರದರ್ಶನ ಸೇರಿದಂತೆ ಹಲವು ಸಂಪ್ರದಾಯಗಳ ಮೂಲಕ ಹಬ್ಬವನ್ನು ಸಂಭ್ರಮಿಸುತ್ತಾರೆ. ನಿಮ್ಮ ಕುಟುಂಬ ಈ ಹಬ್ಬವನ್ನು ದುರ್ಗಾಪೂಜೆ, ದಶೈನ್ (ನೇಪಾಳಿ ಸಂಪ್ರದಾಯ), ದಸರಾ ಅಥವಾ ನವರಾತ್ರಿ ಎಂದು ಕರೆಯಲಿ, ಈ ಹಬ್ಬವು ಆತ್ಮಾವಲೋಕನ ಮತ್ತು ಹೊಸ ಚೈತನ್ಯದ ಕಾಲವಾಗಲಿ ಎಂದು ಹಾರೈಸಿದ್ದಾರೆ. ಮಮ್ದಾನಿ ಅವರು ಈ ಹಿಂದೆಯೂ ದೀಪಾವಳಿ ಹಾಗೂ ರಕ್ಷಾಬಂಧನ ಸೇರಿದಂತೆ ದಕ್ಷಿಣ ಏಷ್ಯಾದ ಹಲವು ಹಬ್ಬಗಳ ಆಚರಣೆಯಲ್ಲಿ ಸ್ಥಳೀಯರೊಂದಿಗೆ ಪಾಲ್ಗೊಂಡಿದ್ದರು. ಭಾರತೀಯ ಮೂಲದ ಚಿತ್ರ ನಿರ್ದೇಶಕಿ ಮೀರಾ ನಾಯರ್ ಮತ್ತು ಉಗಾಂಡಾದ ಶಿಕ್ಷಣ ತಜ್ಞ ಮಹಮೂದ್ ಮಮ್ದಾನಿ ಅವರ ಪುತ್ರರಾದ ಜೋಹ್ರಾನ್ ಮಮ್ದಾನಿ, ತಮ್ಮ ಬಾಲ್ಯದಲ್ಲಿ ಹಿಂದೂ ಮತ್ತು ಮುಸ್ಲಿಂ ಸಂಪ್ರದಾಯಗಳ ನಡುವೆ ಬೆಳೆದ ಅನುಭವಗಳು ತಮ್ಮ ಮೌಲ್ಯಗಳ ರೂಪುಗೊಳ್ಳುವಿಕೆಗೆ ಪ್ರಭಾವ ಬೀರಿವೆ ಎಂದು ಈ ಹಿಂದೆ ಹೇಳಿಕೊಂಡಿದ್ದರು. ವಿವಿಧ ಸಂಸ್ಕೃತಿ ಮತ್ತು ಧಾರ್ಮಿಕ ಸಂಪ್ರದಾಯಗಳಿಗೆ ಗೌರವ ಸೂಚಿಸುವ ಅವರ ಈ ನಡೆ, ನ್ಯೂಯಾರ್ಕ್‌ನ ಬಹುಸಂಸ್ಕೃತಿಯ ಸಮಾಜದಲ್ಲಿ ಹಬ್ಬಗಳ ಮೂಲಕ ಸೌಹಾರ್ದ ಮತ್ತು ಪರಸ್ಪರ ಗೌರವವನ್ನು ಬೆಳೆಸುವ ಪ್ರಯತ್ನವಾಗಿ ಗಮನ ಸೆಳೆದಿದೆ.

# ಫ್ರಾನ್ಸ್‌ನಲ್ಲಿ ಪ್ರತಿಭಟನೆ: ವಿದೇಶಿ ನಾಯಕರ ಹೇಳಿಕೆಗೆ ಮ್ಯಾಕ್ರನ್ ತರಾಟೆ

**ದೋಹಾ, ಅ.21:** ಫ್ರಾನ್ಸ್‌ನ ಕಳೆದ ವಾರಾಂತ್ಯದ ಗಲಭೆಗಳ ಕುರಿತು "ಅಪನಿಂದನೆಯ ಮತ್ತು ಮೂರ್ಖತನದ ಕಾಮೆಂಟ್ ಗಳೊಂದಿಗೆ" ಮುಂಬರುವ ಚುನಾವಣೆಗಳಿಗಾಗಿ "ಫ್ರಾನ್ಸ್‌ನ ಹೆಸರನ್ನು ಬಳಸಿ" ರಾಜಕೀಯ ಮಾಡುತ್ತಿರುವ ವಿಶ್ವ ನಾಯಕರನ್ನು ಫ್ರೆಂಚ್ ಅಧ್ಯಕ್ಷ ಎಮ್ಯುಎಲ್ ಮ್ಯಾಕ್ರನ್ ಟೀಕಿಸಿದ್ದಾರೆ.



ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರನ್ನು ಪರೋಕ್ಷವಾಗಿ ಗುರಿಯಾಗಿಸಿಕೊಂಡು ಮಾತನಾಡಿರುವ ಮ್ಯಾಕ್ರನ್, ಫ್ರಾನ್ಸ್ ಹೆಸರು ಬಳಸಿಕೊಂಡು ಚುನಾವಣಾ ಪ್ರಚಾರ ಮಾಡುವವರಿದ್ದಾರೆ, ಈ ಪ್ರದೇಶದಲ್ಲಿ ಆಗಿರಲಿ ಅಥವಾ ಅಟ್ಲಾಂಟಿಕ್‌ನ ಆಚೆಯಾಗಿರಲಿ ಚುನಾವಣಾ ಮೂಡ್‌ನಲ್ಲಿರುವ ನಾಯಕರಿದ್ದಾರೆ" ಎಂದಿದ್ದಾರೆ.

ಕತಾರ್‌ಗೆ ಭೇಟಿ ನೀಡಿದ್ದ ವೇಳೆ ದೋಹಾದಿಂದ ಮಾತನಾಡಿದ ಮ್ಯಾಕ್ರನ್, ಈ ಘಟನೆಗಳಿಗೆ ವಿದೇಶಿ ಹಸ್ತಕ್ಷೇಪವೇ ಕಾರಣ ಎಂಬ ಆರೋಪಗಳನ್ನು ತಳ್ಳಿಹಾಕಿದರು. "ವಿದೇಶಿ ನಾಯಕರು ಸೇರಿದಂತೆ ಅನೇಕ ವ್ಯಕ್ತಿಗಳಿಂದ ಅಷ್ಟೇ ಸ್ವೀಕಾರಾರ್ಹವಲ್ಲದ ಮತ್ತು ಮೂರ್ಖತನದ ಕಾಮೆಂಟ್‌ಗಳಿಗೆ ಕಾರಣವಾದ ನಂತರದ ವಿದೇಶಿ ಮಾಹಿತಿಯ ದುರುಪಯೋಗವನ್ನು" ಅವರು ಖಂಡಿಸಿದರು. ಕೃತಕ ಬುದ್ಧಿಮತ್ತೆ (ಂಖ) ಮೂಲಕ ಸೃಷ್ಟಿಸಲಾದ ನಕಲಿ ವೀಡಿಯೊಗಳನ್ನು ಹಂಚಿಕೊಂಡ ನಾಯಕರನ್ನು ಅವರು ಟೀಕಿಸಿದ್ದು, ವಲಸಿಗರು ಮತ್ತು ಇಸ್ಲಾಮಿಕ್ ಗುಂಪುಗಳಿಂದ ಆಕ್ರಮಣಕ್ಕೊಳಗಾಗಿದ್ದೇವೆ ಎಂದು ವಿವರಿಸಿದ ಜನ ನಮ್ಮಲ್ಲಿದ್ದಾರೆ" ಎಂದಿದ್ದಾರೆ.

ಸೋಮವಾರದಂದು ಫ್ರಾನ್ಸ್ "ವಲಸಿಗರು, ಜಿಹಾದಿಗಳು ಮತ್ತು ಕಮ್ಯುನಿಸ್ಟ್‌ಗಳಿಂದ ಮುತ್ತಿಗೆಗೆ ಒಳಗಾಗಿದೆ, ಲೂಟಿ ಮಾಡಲ್ಪಟ್ಟಿದೆ ಮತ್ತು ಬೆಂಕಿ ಹಚ್ಚಲ್ಪಟ್ಟಿದೆ" ಎಂದು ಟ್ರಂಪ್ ಹೇಳಿದ್ದರು. ಡೆಮೋಕ್ರಾಟ್‌ಗಳು ಗೆದ್ದರೆ ಅಮೆರಿಕಕ್ಕೂ ಇದೇ ಗತಿ ಕಾದಿದೆ ಎಂದು ಬಿಂಬಿಸಲು ಅವರು ಈ ಅಶಾಂತಿಯನ್ನು ಬಳಸಿಕೊಂಡಿದ್ದಾರೆ.

**ತುರ್ತು ಕ್ರಮ ಜಾರಿ:** ಅ.17ರ ಘಟನೆಗಳ ವರದಿ ಪಡೆಯಲು ಗುರುವಾರ ಸಚಿವರು ಮತ್ತು ಗುಪ್ತಚರ ಅಧಿಕಾರಿಗಳೊಂದಿಗೆ ತುರ್ತು ಸಭೆ ಕರೆಯುವುದಾಗಿ ಮ್ಯಾಕ್ರನ್ ಘೋಷಿಸಿದ್ದಾರೆ. ಆ ದಿನದ ಪರಿಸ್ಥಿತಿಯ ಮೇಲಿನ ನಿಯಂತ್ರಣವನ್ನು ಕಳೆದುಕೊಂಡಿರುವುದಾಗಿ ಫ್ರೆಂಚ್ ಸರ್ಕಾರವು ಈಗಾಗಲೇ ಒಪ್ಪಿಕೊಂಡಿದೆ. ಅ.24 ರಂದು ನಡೆಯಲಿರುವ ಹೊಸ ಪ್ರತಿಭಟನೆಗಳ ಹಿನ್ನೆಲೆಯಲ್ಲಿ, ಕರ್ಫ್ಯೂ ಮತ್ತು ಸಾಮೂಹಿಕ ಸಭೆಗಳ ಮೇಲಿನ ನಿಷೇಧ ಸೇರಿ ಸೋಮವಾರ ಬೆಳಿಗ್ಗೆಯೇ ಒಂದು "ರೋಡ್ಮ್ಯಾಪ್" ಅನ್ನು ಸಿದ್ಧಪಡಿಸಲಾಗಿದೆ ಎಂದಿದ್ದಾರೆ.




ತಮಿಳುನಾಡಿನ ಕೊಯಮತ್ತೂರಿನಲ್ಲಿ ನಡೆದ ರಾಷ್ಟ್ರೀಯ ಅಥ್ಲೆಟಿಕ್ಸ್ ಕೂಟದಲ್ಲಿ ಕರ್ನಾಟಕದ ಕರಾಡೆ ಶಿವಪ್ರಸಾದ ರಾವ್ ಮತ್ತು ರವೀಂದ್ರನ್ ಆರ್ ಎಸ್ ಭಾಗವಹಿಸಿ 4x 100 ಮೀಟರ್ಸ್ ಮತ್ತು 4x400 ಮೀಟರ್ಸ್ ರಿಲೇ ಸ್ಪರ್ಧೆಗಳಲ್ಲಿ ಡಬಲ್ ಕಂಚಿನ ಪದಕ ಗೆದ್ದು ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ.

# ಏಷ್ಯನ್ ಪ್ಯಾರಾ ಗೇಮ್ಸ್: ಭಾರತಕ್ಕೆ 9 ಚಿನ್ನ ಸೇರಿ 35 ಪದಕ

**ಐಚಿ ನಗೋಯಾ, (ಜಪಾನ್) ಅ.21:** ಜಪಾನ್‌ನ ಐಚಿ-ನಗೋಯಾದಲ್ಲಿ ನಡೆಯುತ್ತಿರುವಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಭಾರತ ತನ್ನ ಪ್ರಬಲ ಪ್ರದರ್ಶನವನ್ನು ಮುಂದುವರಿಸಿದೆ, ಭಾರತದ ಪದಕಗಳ ಸಂಖ್ಯೆ ಒಂಬತ್ತು ಚಿನ್ನ, ಹನ್ನೊಂದು ಬೆಳ್ಳಿ ಮತ್ತು ಹದಿನೈದು ಕಂಚು ಸೇರಿದಂತೆ 35 ಕ್ಕೆ ಏರಿದೆ.

ಪುರುಷರ ಡಿಸ್ಕಸ್ ಥ್ರೋ ಈ44/64 ಸ್ಪರ್ಧೆಯಲ್ಲಿ ಭಾರತೀಯರು ಎಲ್ಲಾ ಮೂರು ಪದಕಗಳನ್ನು ಗೆದ್ದಿದ್ದಾರೆ. ದೇವೇಂದರ್ ಕುಮಾರ್ 49.71 ಮೀ ಎಸೆದು ಚಿನ್ನ ಗೆದ್ದರೆ, ರಾಕೇಶ್ 49.35 ಮೀ ಎಸೆದು ಬೆಳ್ಳಿ ಪಡೆದರು.



ಆಯುಷ್ ವರ್ಮಾ

ಭಾರತದ ಪ್ರಣವ್ ಸೂರ್ಮಾ ಪುರುಷರ ಡಿಸ್ಕಸ್ ಥ್ರೋ ಈ51/52/53 ಸ್ಪರ್ಧೆಯಲ್ಲಿ ಚಿನ್ನ ಗೆದ್ದರು, 932 ಅಂಕಗಳನ್ನು ಗಳಿಸಿದರು ಮತ್ತು ಈ51 ಇವೆಂಟ್‌ನಲ್ಲಿ 11.66 ಮೀಟರ್‌ಗಳ ಹೊಸ ಏಷ್ಯನ್ ದಾಖಲೆಯನ್ನು ಸಹ ಸ್ಥಾಪಿಸಿದರು, ಆದರೆ ರಾಮ್ ರತನ್ ಸಿಂಗ್ 10.35 ಮೀಟರ್ ಎಸೆದು ಬೆಳ್ಳಿ ಪಡೆದರು, ಅದೇ ಸ್ಪರ್ಧೆಯಲ್ಲಿ 809 ಅಂಕಗಳನ್ನು ಗಳಿಸಿದರು. ಮಹಿಳೆಯರ 200 ಮೀಟರ್ ಟಿ12 ಫೈನಲ್‌ನಲ್ಲಿ ಸಿಮ್ರಾನ್ 24.80 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಹೊಸ ಗೇಮ್ಸ್ ದಾಖಲೆ ನಿರ್ಮಿಸಿ ಚಿನ್ನ ಗೆದ್ದರು. ಇದೇ ಸ್ಪರ್ಧೆಯಲ್ಲಿ ತೇಜಲ್‌ಬೆನ್ ಡ್ಯಾಮರ್ 25.23 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಕಂಚಿನ ಪದಕ ಗೆದ್ದರು. ಭಾರತದ ಪ್ಯಾರಾ ಅಥ್ಲೀಟ್ ದೀಪ್ತಿ ಜೀವನಜಿ ಮಹಿಳೆಯರ 400 ಮೀಟರ್ ಟಿ20 ಸ್ಪರ್ಧೆಯಲ್ಲಿ ಚಿನ್ನ ಗೆದ್ದು, 56.36 ಸೆಕೆಂಡ್‌ಗಳಲ್ಲಿ ಹೊಸ ದಾಖಲೆ ನಿರ್ಮಿಸಿದರು.

**ಪವರ್‌ಲಿಫ್ಟಿಂಗ್‌**ನಲ್ಲಿ, ಅಶೋಕ್ ಪುರುಷರ 65-ಕಿಲೋಗ್ರಾಂ ವಿಭಾಗದಲ್ಲಿ 192 ಕಿಲೋಗ್ರಾಂಗಳಷ್ಟು ಭಾರ ಎತ್ತುವ ಮೂಲಕ ಬೆಳ್ಳಿ ಗೆದ್ದರು. ಶೂಟರ್ ಮನೀಶ್ ನರ್ವಾಲ್ ಪುರುಷರ 10 ಮೀಟರ್ ಏರ್ ಪಿಸ್ತೂಲ್ ಎಸ್‌ಎಚ್ 1 ಸ್ಪರ್ಧೆಯಲ್ಲಿ 233.7 ಪಾಯಿಂಟ್‌ಗಳನ್ನು ಗಳಿಸಿ ಬೆಳ್ಳಿ ಪಡೆದರು. ಮಹಿಳೆಯರ 10-ಮೀಟರ್ ಏರ್ ಪಿಸ್ತೂಲ್ SH1 ಸ್ಪರ್ಧೆಯಲ್ಲಿ ಸೃಷ್ಟಿ ಅರೋರಾ ಕಂಚಿನ ಪದಕವನ್ನು ಗೆದ್ದರು, ಗೇಮ್ಸ್‌ನಲ್ಲಿ ಪ್ರಭಾವಶಾಲಿ ಚೊಚ್ಚಲ ಸಾಧನೆ ಮಾಡಿದರು.



ಶೀತಲ್ ದೇವಿ ಮತ್ತು ಪಾಯಲ್ ನಾಗ್

ಜಾವೆಲಿನ್ ಎಸೆತದಲ್ಲಿ ಪ್ರದೀಪ್ ಕುಮಾರ್ ವೈಯಕ್ತಿಕ ಶ್ರೇಷ್ಠ 27.45 ಮೀಟರ್ ಎಸೆದು ಬೆಳ್ಳಿ ಗೆದ್ದರೆ, ಆಯುಷ್ ವರ್ಮಾ 17.88 ಮೀಟರ್ ಎಸೆದು ಕಂಚಿನ ಪದಕ ಪಡೆದರು. ಈಜುಗಾರ ಹಿಮಾಂಶು ನಂದಲ್ ಪುರುಷರ 400 ಮೀಟರ್ ಫ್ರೀಸ್ಟೈಲ್ ಎಸ್11 ಸ್ಪರ್ಧೆಯಲ್ಲಿ 5 ನಿಮಿಷ 10.91 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಮೂರನೇ ಸ್ಥಾನ ಪಡೆದರು.

ಪ್ಯಾರಾ ಆರ್ಚರಿಯಲ್ಲಿ, ಭಾರತ ಕನಿಷ್ಠ ಐದು ಪದಕಗಳನ್ನು ಖಚಿತಪಡಿಸಿಕೊಂಡಿದೆ, ಮೂರು ಭಾರತೀಯ ಜೋಡಿಗಳು ತಮ್ಮ ಅಂತಿಮ ಹಂತವನ್ನು ತಲುಪಿದ್ದಾರೆ. ಪುರುಷರ ರಿಕರ್ವ್ ಜೋಡಿ ಹರ್ವಿಂದರ್ ಸಿಂಗ್ ಮತ್ತು ವಿಜಯ್ ಸುಂಡಿ, ಮಹಿಳಾ ರಿಕರ್ವ್ ಜೋಡಿ ಭಾವನಾ ಮತ್ತು ಪೂಜಾ ಮತ್ತು ಸಂಯುಕ್ತ ಮಹಿಳಾ ಜೋಡಿ ಶೀತಲ್ ದೇವಿ ಮತ್ತು ಪಾಯಲ್ ನಾಗ್ ತಮ್ಮ ಚಿನ್ನದ ಪದಕಕ್ಕೆ ಮುನ್ನಡೆದರು. ವೈಯಕ್ತಿಕ ಸ್ಪರ್ಧೆಗಳಲ್ಲಿ, ಸ್ವಾತಿ ಚೌಧರಿ ಫೈನಲ್ ತಲುಪಿದ ಮೊದಲ ಭಾರತೀಯ ಮಹಿಳಾ W1 ಬಿಲ್ಲುಗಾರರಾದರು, ಆದರೆ ಶೀತಲ್ ದೇವಿ ಮಹಿಳೆಯರ ಸಂಯುಕ್ತ ಫೈನಲ್‌ಗೆ ಮುನ್ನಡೆದರು.